E & P.H. (194 7) Department.

[Despatch Abstract.]

Temple entry - Permission to throw open the Sri Durgaparameswari Temple, Mangal Taluk, South Kanara District for entry by the excluded classes - Granted.

Tele:"Religious"

Office of the Board of Commissioners fo
Hindu Religious Endowments, Madras-6.

Letter No.4095/47-2-Adm-dated 1-2-47.

From

Rao Bahadur Sri T.M.Chinnaiya Pillai, M.A., B.L.,
President, Hindu Religious Endowments Board,
Madras.

ASSISTANT SECRETARY TO GOVERNMENT
EDUCATION AND PUBLIC HEALTH DEPARTMENT
8635
2- FEB 1947

To

The Secretary to the Government of Madras,
Education and Public Health Department,
Fort St. George, Madras.

Sir,

Sub:--HINDU RELIGIOUS ENDOWMENTS - Temple Entry - South Kanara District - Mangalore taluk - Bappanad - Sri Durgaparameswari temple - Sanction - requested.

Ref:--1.Copy of letter O.R.No.37/1946-1947 addressed to the Hon'ble Minister for Religious Endowments, Fort St.George, Madras received from the manager of the temple.
2.O.R.No.42 dated 28-1-47 from the said manager of the temple to the Board.

In enclosing herewith the papers referred to above, I have the honour to state that the trustees of the above temple have unanimousl resolved on 26-1-47 that a public notice should be put up in the temp that any clean bodied and dressed person can enter the temple and rec prasadams from 26-1-47 and onwards. From this it is clear that all t trustees agree in throwing open the temple to the excluded classes. several proceedings of the worshippers of the temple in various villa clearly indicate that the worshippers are overwhelmingly in favour of the removal of the disability imposed by custom or usage on the exclu classes from entry into and offer of worship in the temple.

I have, therefore, the honour to request that the Government ma pleased to accord sanction in the matter under Section 3 of the Madras Temple Entry authorisation and Indemnity Act of 1939.(Madras Act XXI 1939).

I have the honour to be
Sir,
Your most obedient Servant,

FOR PRESIDENT.

KM.1/2/47.

Encl:1 file of papers.

Sri M. Siddu Shetty,
Manager, Sri Durga Parameshwari Temple
Bappanad, Mulki, S.Kanara District.

THE HON'BLE THE MINISTER FOR RELIGIOUS ENDOWMENTS.
FORT ST. GEORGE, MADRAS.

Subject: Throwing open Sri Durga Parameshwari Temple Bappanad, to all clean-bodied and dressed persons - resolution of the Village Reconstruction Committee - Mulki - views requested.

The Shri Durga Parameshwari Temple is one of the oldest temples connected with the villages which go to form at present the Moolky Revenue Firka which was formerly known as the Shavanthar Seemae so-called after the old rulers of the place known as Shavanthars. The Seemae or firka consists of 34 villages and the inhabitants of all these villages are devotees of this temple. At present the temple is in receipt of an annual tasdik of Rs760/- from Government. It celebrates every year quite a large number of festivals. Of these, the Moodavalu festival which comes off this year on 26-1-1947 is one of the most important celebrations as it is connected with the birthday of Lord Ganapathy. On that occasion all Hindus irrespective of class, caste, or community partake of the temple feast and about 1500 to 2000 persons gather. The affairs of the temple are managed by four trustees, one of whom Sri Chennaraya Shavanthar - a descendant of the old rulers - is a hereditary trustee, assisted by a manager.

Recently, the Moolky Village Reconstruction Committee which has been doing intensive rural uplift work in the 14 villages comprising the Moolky revenue firka and 4 villages of the neighbouring Udipi Taluk since February 1945, has communicated a resolution requesting us to take

all necessary steps so that a notice board may be put up in the premises of the temple to the effect that all clean-bodied and dressed persons can offer pujas of coconuts and plantains to the deity. The Village Reconstruction Committee has an excellent record of work. It has been holding fortnightly meetings to popularise its programme. It has already celebrated two tree planting days in September 1945 and 1946 and held an Agricultural and Cottage Industries Exhibition in December 1945. It proposes to hold another such exhibition in February of this year. Apart from working for the economic welfare of the agriculturists it has on its programme, work for the social welfare of the Villages especially of the backward classes. It has been carrying on an effective propaganda for the removal of untouchability and other disabilities under which the so-called depressed classes are at present labouring. It has tried to get together Harijans in the various centres for its meetings, give them bath and food. Further the Committee at its 27th, 28th, 30th, 33rd and 34th meetings held in different villages centres adopted resolutions favouring temple-entry by the Harijans. At the second tree planting day which was celebrated in thirteen different centres the people assembled unanimously resolved that temples should be thrown open to the Harijans. These meetings were presided over by Government officers and responsible gentlemen, the District Collector himself presiding over one such meeting. Encouraged by this universal and unanimous support the Village Reconstruction Committee seems to have passed the above resolution at its meeting held on 15-12-1946 (Res. p.10 of Incl.1). I am enclosing for your kind reference copies of the report of the work done by the Committee so far and the various resolutions passed

y the Committee regarding temple entry. (marginally noted
ith red in

The above resolution of the Village Reconstruction
ommittee was placed by me before the trustees of the
emple on 5-1-1947. After due deliberation the trustees
ave resolved as follows:-

> Resolved the Trustees have no objection to [illegible]
> up the Board as requested. The Manager is
> requested to address the Minister and President
> for Religious Endowments and send all connected
> papers of the Village Reconstruction Committee
> and request an early order on the same. [illegible]
> Manager is further requested to put the proceedings
> of the Committee before the public on the Thai-
> valu Festival day, after giving due information
> to all concerned."

Proceedings of the Moolky Village Reconstruction Committee meeting, held on 15-12-46 at Moolky.

1. Resolved that the second Agricultural and Industrial Exhibition of the Village Reconstruction Committee be held on the 28th Feb., 1st. 2nd of March and succeeding days under the auspices of the District Advancement Association at Mission Higher Elementary School, Karnad, Moolky.

2. Resolved to request Sri L. C. Pais, Parliamentary Secretary, Government of Madras, to open the Exhibition and J. R. Bett. Esq. I. C. S., District Collector, to preside over the Exhibition.

3. Resolved further to request the heads of the various Development Departments of the Government, Industrial Firms and Institutions, Agricultural nurseries, Exhibitors at the first Exhibition and others to extend their valued Co operation and make the Exhibition, a success.

4. Resolved to request the Govt. Fruit Specialist, Kodur and the Director of Agriculture to arrange for a fruit show along with the Agricultural and Industrial Exhibition and make a generous grant towards the expenses of the same,

5. Resolved that the prospectus issued in connection with the 1st Exhibition held in 1945 be the prospectus for this Exhibition also with the following alterations: under the heading arrangements, add, after the words, 0-8-0 per square foot, the words "with a minimum of Rs. 5/- for each exhibition to be paid in advance."

6. Resolved that a Committee consisting of the following gentlemen with powers to co-opt, be constituted for the proper conduct of the Exhibition- Dr. M. R. Shetty, Sri B. Sadashiva Rao, B. A; (Hons); L. T., Sri M. S. Shetty. Sri U. Krishna Rao, Mr. Daniel Aranaha, Sri Kariyanna Shetty, Sri Annu Shetty, Sri Beerna Poojary, the Secretary of the Moolky Centre, the Secretaries of the sub-centres, the Secretary of the Kaniyur Centre and the Secretaries of Dt. Advancement Association. The Secretary of Village Reconstruction Committee will be the Secretary of the Exhibition Committee.

7. With a view to further rouse the enthusiasm of the Villagers in the work carried on by the committee and make the Exhibition a success, resolved that the following prizes be awarded during the Exhibition;

(1) Three prizes to the best agriculturists in the reconstruction area who have been using improved seeds and manures and following improved methods of agriculture in a cultivated area of at least one acre in extent.

(2) Three prizes to the agriculturists who possess the best pair of buffaloes and improved tools.

(3) Rolling Cups for each of the following items to the best High School, or Higher Elementary School. competing in:—

(a) Spinning.

(b) School which has the maximum number of spinners.

(c) School which has the best exhibits of Cottage Industries.

(d) School which has been trying to put into effect the programme of Rural Reconstruction in the Village.

(e) The School which gets the maximum number of points for excellence in reading, composition, singing, debating, and drawing.

(f) Sports.

(g) The best variety entertainment (duration: 1 hour). during the Exhibition. Individual prizes will also be awarded to the best competitor under each item:-

(4) A prize to the Elementary School which comes to the Exhibition singing songs popularising the Reconstruction programme in the most impressive manner.

(5) A prize to the best essay written by an agriculturist on the Rural Reconstruction work and sent before 31—1—47.'

(6) A shield to the Village Panchayat within the area, which has been doing its best to implement the Rural Reconstruction Programme.

(7) A shield to any co-oprative institution within the area which has been trying to implement the Rural Reconstruction Programme.

8. The Village Reconstruction Committee thanks the Govt. Departments, and the different Industrial Institutions and exhibitors who have been making enquiries about, the exhibition and once again requests their hearty co-operation at the next Exhibition to be held on Feb. 28. and succeeding days.

9. Whereas it is admitted that Village Cock fights have a baneful influence on the morale of the people, the Committee resolves to take all necessary steps to stamp out this evil. The Committee earnestty requests the Shavanthar to make a beginning by stopping the Cock fight after the buffalow race to be hed in 28—12—46. and succeeding days and give a lead to others in this matter.

10. In pursuance of the resolutions adopted at all the 13 centres in the Rural Reconstruction area during the 2nd Tree Planting Day ceremony on 1—9—46, resolved to request the Manager of Sri Bappanad Durgadevi Temple to take necessary steps to put up a board in the temple premises before the Moodavalu festival due to come off in Jan 47. to the effect that there is no objection for any clean bodied and dressed person to enter the temple and offer a puja of coconuts and plantains whereof half a coconut can be taken by the puja Bhat.

Moolky,
15—12—46.

M. R. Punja,
Secretary.

(*Sd.*) Kariyanna Shetty,
Chairman.

VILLAGE RECONSTRUCTION COMMITTEE,
MOOLKY CENTRE.

The 2nd Tree Planting Ceremony was observed in 13 centres noted below on -9-46 as against 5 centres in which it was held last year on 2-9-45. Besides the ;entlemen who presided at the centres as noted below, (1) Sri B. A. Harvey, District ;uperintendent of Police, (2) Sri N. Subba Rao, District Educational Officer, (3) Rao ;aheb P. R. R. Punja, Vice President, Bunt alias Nadavar Sangha, (4) Sri A. Shanker Alva, Advocate, (5) Sri A. K. Nambiyar, Assistant Commissioner, Endowments, (6) ;ri Jagannath Rai, Secretary of Kaniyur V. R. Committee, (7) Sri N. S. Kille, Sevak, Harijan Sangha, were kind enough to attend at one or other of the centres and give heir advice. The Agricultural Demonstrators of Mangalore, Udipi and Karkal were resent at centres 3, 6 & 9 and were of great help. On behalf of the committee, I ffer them its sincerest thanks.

Centres	No. of villages	Probable No. that attended	No. who came with plants	Presided by
1. Panja	4	200	118	Sri B. K. Bhasker Rai, B.A., L.L.B.
2. Hale-Angady	3	200	48	,, G. Sakharama Rao, Dt. Ag. Officer.
3. Padupanambur	3	200	42	,, V.S. Ramaswami, M.B.B S., BS Sc., Dt. Health Officer.
4. Karnad	4	300	81	S. Boothalingam, Esqr., O.B.E., I.C.S., Dt. Collector.
5. Hejmadi	1	500	92	Mrs. B.A. Harvey,
6 Padubidri	2	300	58	Sri K. Sanjiva Bhat, M.A., L T.
7. Palimar	3	400	101	,, K.S. Hegde, M.A., B.L.
8. Mundkur	3	240	157	,, N M. Adyanthaya, B.A., B.L.
9. Balkunje	3	300	81	,, H.M. Shetty, Ag. Demonstrator, Futtur.
10. Ayakal	3	400	137	Dr. G. Minezes, D.D. Vicar, Ayakal Church.
11. Kinnigoli	2	200	26	Sri T. M. Aranha, Assistant Secretary, Dt. Advancement Association.
12. Katil	3	500	324	,, A. Lakshminarain Rao, President, Dt. Board.
13. Shimanthur	4	160	101	,, H. Rama Rao, Educational Officer, Dt. Board, S. K.
	38	3900	1366	

A few villages of the centre have still failed to take full advantage of the work and take part in the ceremony. Villages of Delantabettu, Thenkayekkar, Badagayekkar attended in pretty good number at Katil centre and evinced a keen desire to have heir villages included in Reconstruction work.

Sri A. B. Shetty and Sri A. Shanker Alva encouraged us with a donation of Rs. 25 and Rs. 10 each. The expenses at some of the centres were met by our nembers while in some it was met by the local temples. Our thanks are due to hem. In a few other centres it ws met by the committee.

We received messages of goodwill wishing success from:—

1. Sri L. C. Pais, Parliamentary Secretary, Madras Govt.
2. Rao Saheb K. Sarvothuma Rao, Deputy Registrar of Co-operative Societies.
3. Rev. Father J. S. Sequeira, Vicar, Karnad church.
4. Sri A. B. Shetty, M. L. A.
5. Rao Bahadur K T. Alva, Retired Deputy Director of Ag. and President, Bunt alias Nadavar Sangha.

6. Sri P. Ramachandra Rao, Vakil, Kar' al.
7. Sri Kumar Hegde, President, Kaniyur V. R. Committee.
8. Superintendent, Sri Krishna Industrial Institute, Ramanagar Anandashram, Kannangad.
9. Sri H. Narasimha, Taluk Ration Officer, Karkal.
10. Dr. B. V Nath, Director of Agriculture, Madras.

Moolky,
1—9—1946.

M. R. Punja,
Secretary,
V. R Committee, Moolky.

Extracts from the speech delivered by

S. Boothalingam Esq. O.B.E., I.C.S., District Collector.

The District Collector who presided over the 'Tree planting day' celebration at Karnad said that he had during the many discussion which he had with Sri M R. Punja, the Secretory of the Village Re-construtction Committee, came to know about the splendid work which was being done by the Committee He therefor felt that it was necessary that he should at the very outset, set at rest any fears or doubts which might have arisen in their minds because the Governmet had selected Kumbla as the centre for the 'Re-construction work'. They would be entirely mistaken if they understood it as a reflection by the Government, on this work which was being carried on in their midst at Moolky. The authorities very much appreciated the efforts of the Committee to improve the villages, Explaining the scheme of rural Re-construction work as contemplated by the Government, the Collector said that the Government was not going to make huge grants to villages to be spent by them on amenities or who-so-ever as the villagers wished. But would try to help the people to improve themselves by teaching them better methods of livelihood and living. Government would only come forward with their aid when there were concrete proposals or schemes which could not be undertaken by the villagers themselves and which would be of lasting benefit to the villagers. He wished to take that opportunity to assure them on behalf of the Government, that if and when the Moolky village Committee came forward with such concrete schemes, Government aid will be readily forthcoming. After all, Government had to make a beginning somewhere and it might be remembered that Government was not stopping with one centre. As an example, he said Government wanted to improve the quality of the cattle in the District by maintaining a number of stud bulls. Government would be very careful indeed in selecting centres where these are to be maintained. He was positive that if the Mulki Committee desired to have such a centre at Mulki their claim would certainly have the first priority. Again the Mysore Government had recently permitted the movements of a few herds of cattle into the District. He would be glad to help any of the ryots assembled if they wanted permit to buy them. . Speaking about Agriculture and the food situation, the Collector pointed out that though every attempt should be made to improve agriculture it was equally important that every inch of available land should be cultivated. The Committee had before it a well thought out and all embrasing programme. He had therefore nothing more to add to it. He desired the Committee should organise in every village a Village Service Corps drawn from among the villagers themselves who would devote themselves to carry out the programme of the Committee. He also wished to draw their attention to one item in the programme, namely, the necessity to limit the size of families which might not have caught their notice or which might be a bit unpalatable to them. He explained how because of the annual increase in the population of India of five millons, even improved methods of production would not bring in sufficient food to feed every mouth and how if the increasing population is stopped, there would be no necessity to resort to rationing even during such hard times as the present. A suggestion that the maize supplied may be put on the market in the form of flour was now put forward from the audience, the Collector said he welcomed such practical proposal and would consider how he could give effect to it. In

conclusion he said that the very highly appreciated work done by the Committee and hoped that it would work with redoubled zeal during the coming year.

Extract from the speech delivered by

Sri N. Subba Rao, B.A., L.T., District Educational Officer, S. Kanara.

Sri N. Subba Rao, District Educational Officer, addressing the ryots assembled at the 'Tree Planting Ceremony' in Karnad paid a glowing tribute to the good work done so far by the Committee. It was stated in the report that in the first year compulsory elementary education had not been introduced in any of the villages in the centre. In introducing compulsion, Government wished that those interior areas which were educationally backward as judged by the percentage of children attending school should be taken up first. But the Village Re-construction Committee had again and again pressed before him their claims and he did not wish to disappoint them this year too. Speaking about Mulki proper he said over 75% of the children of the school going age were attending school even before the introduction of compulsion. The introduction of compulsory education had brought to the fore-front two problems and here the villagers and the Committee could co-operate with the Department and hoped that such co-operation would be forthcoming. More pupils attending school, meant bigger school buildings. The School buildings were unsatisfactory and in some cases it was dangerous to occupy them. It would indeed be a great tragedy if children after being compelled to attend school were made to lose their limbs and even lives. The villagers should come forward to build good buildings. In this matter Government too would help them by meeting a part of the cost. Proper arrangements for providing meals to the poor children was another direction in which the villagers could co-operate with the Department. At present only poor childern were given meals. He need not tell them how difficult it is to judge this poverty in a country where all are poor. The villagers should try to provide meals to every one in need of it by supplementing the grants made by the Government. They should also see that these meals were properly served and that there was neither wastage nor leakage. It would be well nigh impossible for the Department to supervise all these matters and the public should co-operate with them. He hoped that the Department would have this co-operation from the villagers and the Committee. He wished great success to the endeavours of the Committee.

Extracts from the speech delivered by

B. A. Harvey, Esq., District Superintendent of Police, South Kanara.

Mr. Harvey, D.S.P., speaking on behalf of Mrs. Harvey, who presided said among other things that it struck him as unique that the inhabitants of the villages round Moolky should have thought out and planned village reconstruction work more than a year before Government decided to launch it in the district. He was particularly impressed by the fact that the organiser without being perturbed at the selection by Government of Kumbla firka state in their report that they would try to take lessons from the work done there. This is the right spirit which is rather rare to find and indicates the spirit of self-reliance and self-help which does not want to wait for outside agency. As such very good results can be expected. A careful reading of the report would show, he said, that everything that ought to be done and can be done by way of village reconstruction, has been taken in hand.

7-7-'46ನೇ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಪಡುಪಣಂಬೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮೂಲ್ಕಿ ಸೆಂಟ್ರಲ್ ಗ್ರಾಮಾಭಿವೃದ್ಧಿ ಪರವಾದ ರೈತರ 33ನೇ ಸಭೆಯ ಪ್ರೊಸಿಡಿಂಗ್ಸ.

ಆಯಕಳ, ಪಡುಬಿದ್ರಿ, ಉಳೆಪಾಡಿ, ಅತಿಕಾರಿಬೆಟ್ಟು, ಪಂಜ ವಗೈರೆ ಅನೇಕ ಗ್ರಾಮಗಳ ರೈತರು ಹಾಜರಿದ್ದರು.

ಅಧ್ಯಕ್ಷ: ಶ್ರೀ। ಚೆನ್ನರಾಯ ಸಾವಂತರು.

1. 32ನೇ ಸಭೆಯ ಮತ್ತು ಹಿಂದಿನ ಸಭೆಗಳ ಪ್ರೊಸೀಡಿಂಗ್ಸು ಸೆಕ್ರಟರಿಯರು ವಿವರಿಸಿ ತಿಳಿಸುತ್ತಾ ಪ್ರತಿ ನಿರ್ಣಯಗಳು ಯಶಸ್ವಿ ಯಾಗುವಂತೆ ಎಲ್ಲವರೂ ಪ್ರಯತ್ನಿಸಬೇಕಾಗಿ ನಿಶ್ಚಯಿಸಲಾಯಿತು.

2. ಜಿಲ್ಲಾ ಕಲೆಕ್ಟರರು ತಾ. 1—9—'46ರಲ್ಲಿ ಜರಗುವ ಸಸಿ ದಿನಾಚರಣೆಗೆ ಮೂಲ್ಕಿಗೆ ಬರುವುದಾಗಿ ತಿಳಿಸಿದ ಕಾರಣ 32ನೇ ಸಭೆಯ 7ನೇ ನಿರ್ಣಯದ 4ನೇ ಸೆಂಟರಿನಲ್ಲಿ ಅವರ ಹೆಸರನ್ನು ಕೊಡಿಸಬೇಕಾಗಿಯೂ 8ನೇ ಸೆಂಟರಿನ 3ನೇ ಕಲಮಿನಲ್ಲಿ ರಾವ್ ಬಹದ್ದೂರ್ ಟಿ. ಟಿ. ಆಳ್ವರ ಹೆಸರನ್ನು ಸೇರಿಸಬೇಕಾಗಿಯೂ ನಿಶ್ಚಯಿಸಲಾಯಿತು.

3. ಸುಗ್ಗಿ ಬೆಳೆಗೆ ಬೇಕಾದ ಒಳ್ಳೆತರದ ಬಿತ್ತು ಬೇಕಾಗುವಷ್ಟು ಸಿಕ್ಕುವ ರೀತಿ ಈ ಸೆಂಟರಿಗೆ ಸೇರಿದ ಮೂರು ಡಿಪೊಗಳಲ್ಲಿ ದಾಸ್ತಾನು ಇರುವಂತೆ ಜಿಲ್ಲಾ ಕೃಷಿ ಆಫೀಸರರನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

4. ಹಾರೆ, ಪಿಕ್ಕಾಸು, ಪಣೋರು (ನೇಗಿಲುಕತ್ತಿ) ಗೊಬ್ಬರ ಮತ್ತು ಇತರ ಅನುಕೂಲತೆಯನ್ನು ಮೂರು ಡಿಪೊಗಳಲ್ಲಿ ಯಾವಾ ಗಲೂ ರೈತರಿಗೆ ಸಿಕ್ಕುವಂತೆ ಜಿಲ್ಲಾ ಕೃಷಿ ಆಫೀಸರರಿಗೆ ಬರಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

5. ಲೋನು ವಿಷಯ ಆದಷ್ಟು ಪ್ರಯತ್ನವಿಟ್ಟು ಮುಖ್ಯವಾಗಿ ರೈತರನೇಕರು ಅದರ ಪ್ರತಿಫಲ ಪಡೆಯುವಂತೆ ಜಿಲ್ಲಾ ಕೃಷಿ ಆಫೀಸರರು ಜಾಗ್ರತೆಯಿಡುವಂತೆ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

6. 32ನೇ ಸಭೆಯ 10ನೇ ನಿರ್ಣಯ ಚರ್ಚಿಸುತ್ತಾ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಅಗತ್ಯವಾದ ನೀರಾವರಿ ಕೆಲಸಗಳು ಯಾವ ವೆಂದು ತಿಳಿದು ನಿಶ್ಚಯಿಸುವರೆ (1) ಶ್ರೀ। ಶಾವಂತರು (2) ಆಯಕಳ ಬಾವ ದೇಜಪ್ಪ ಶೆಟ್ಟಿ (3) ಪಂಜದಗುತ್ತು ಶಂಭು ಮಲ್ಲಿ (4) ಪಡುಪಣಂಬೂರು ಶಾಮರಾವ್ (5) ಪಾದೆಮನೆ ದೇಜಪ್ಪ ಶೆಟ್ಟಿ (6) ಉಳೆಪಾಡಿ ರಾಮಯ ಬಲ್ಲಾಳ (7) ಮುಂಡ್ಕೂರು ಪಡಿಗುತ್ತು ಕೃಷ್ಣ ಶೆಟ್ಟಿ (8) ಮುಲ್ಕಿ ಸಿದ್ದು ಶೆಟ್ಟಿ (8) ಏಳಿಂಜೆ ಬೋಜ ಶೆಟ್ಟಿ ಮತ್ತು ಸೆಂಟರ್ ಕಾರ್ಯದರ್ಶಿ ಈ ಹತ್ತು ಮಂದಿಯ ಒಂದು ಕಮಿಟಿಯನ್ನು ನೇಮಿಸುತ್ತಾ ಪ್ರತಿ ಗ್ರಾಮದಲ್ಲಿ ಅಗತ್ಯವಿರುವ ನೀರಾವರಿ ಕೆಲಸಕ್ಕೆ ಸಂಮಂಧಪಡುವ ಸರ್ವೆ ಸಬ್ ಡಿವಿಜನ್ ನಂಬ್ರ ಗಳು, ವಿಸ್ತೀರ್ಣ, ಅಂದಾಜು ಖರ್ಚು, ಎಕ್ರೆರೂಪ ಅದರ ಪ್ರಯೋಜನ, ಊರಲ್ಲಿ ಸಿಗಬಹುದಾದ ಸಹಾಯ, ಕಾಣಿಸಿ ಪ್ರತಿ 13 ಸೆಂಟರಿ ಂದ ಮೇಲಿನ ನಿರ್ಣಯದಲ್ಲಿ * ಗುರುತು ಹಾಕಿದವರು ಇತರರ ಸಹಾಯದಿಂದ ಪಟ್ಟಿ ತಯಾರಿಸಿ ಬರುವ ಸಭೆಯ ಮುಂದಿಡುವಂತೆ ಕಳುಹಿಸಿಕೊಡಬೇಕಾಗಿಯೂ ನಿರ್ಣಯಿಸಲಾಯಿತು.

8 ಊರ ಹರಿಜನರಿಗೆ ಸ್ನಾನಮಾಡಿಸಿ ಊಟ, ತಲೆಗೆ ಎಣ್ಣೆಕೊಟ್ಟು 32ನೇ ಸಭೆಯ 2ನೇ ನಿರ್ಣಯ ಪ್ರಕಾರ ಭೋಜನೆ ಕೊಟ್ಟ ಸ್ಥಾಯಿತು. ಮತ್ತು ಇದರ ಖರ್ಚನ್ನು ವಹಿಸಿಕೊಂಡ ಈವತ್ತಿನ ಅಧ್ಯಕ್ಷರಿಗೆ ಧನ್ಯವಾದ ಅರ್ಪಿಸಲಾಯಿತು.

7. ಕಾರ್ನಾಡಿನಲ್ಲಿ ಜರಗಿದ 27ನೇ ಸಭೆಯಲ್ಲಿ ಅಸ್ಪೃತಾನಿವಾರಣೆಯು ಮಾಯವಾಗುವಂತೆ ಯತ್ನಿಸಬೇಕೆಂಬ ನಿರ್ಣಯಕ್ಕೂ, ಸರ ಕಾರದ ಈಗಿನ ಧೋರಣೆಗೂ, ಮತ್ತು ಅನೇಕ ಕಡೆಗಳಲ್ಲಿ ಈ ವಿಷಯ ಮುಂದರಿದು ಮಾಡಿರುವ ಯತ್ನಗಳಿಗೂ, ಅನುಕೂಲವಾಗಿ, ನಮ್ಮ ಸೆಂಟರಿನಲ್ಲಿರುವ ಎಲ್ಲಾ ದೇವಸ್ಥಾನದ ಮುಕ್ತೇಸರರು ಮತ್ತು ಆಡಳಿತೆದಾರರು, ಹರಿಜನ ಪ್ರವೇಶಕ್ಕೆ ಆದಷ್ಟು ಬೇಗನೆ ಎಡೆಕೊಡಬೇಕೆಂದೂ, ನಮ್ಮ ಸೆಂಟರು ಅದೃಶ್ಯರೂಪ ಮುಂದೆ ಬರುವಂತೆ ಎಲ್ಲವರೂ ಸಹಾಯವೀಯಬೇಕೆಂದು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

8. ತಾ. 1—9—'46ರಲ್ಲಿ ಜರಗಿಸಲು ನಿಶ್ಚಯಿಸಿದ ಸಸಿ ದಿನಾಚರಣೆಯು ಎಲ್ಲಾ ಗ್ರಾಮಗಳಲ್ಲಿಯೂ ಯಶಸ್ವಿಯಾಗುವಂತೆ ಗ್ರಾಮಾಧಿಕಾರಿಗಳಿಗೆ ತಹಸಿಲ್ದಾರರವರ ಮೂಲಕವೂ, ದಶಂಬರದಲ್ಲಿ ಜರಗತಕ್ಕ ಪ್ರದರ್ಶನಕ್ಕೆ ಕೈಗಾರಿಗೆ ಸಂಸ್ಥೆಗಳು ಅವರು ತಯಾರಿಸುವ ಸಾಮಾನುಗಳನ್ನು ಬಹುವಾಗಿ ಕಳುಹಿಸಿಕೊಡುವಂತೆ ನೋಡಲು ತಹಸಿಲ್ದಾರರು ಮತ್ತು ಡಿಪ್ಟಿ ತಹಸಿಲ್ದಾರರಿಗೂ ಸರ್ಕಿಲಾರು ಕಳುಹಿಸಿ ಕೊಡುವುದಾಗಿ ತಿಳಿಸಿ ಜಿಲ್ಲಾ ಕಲೆಕ್ಟರರು ಬರೆದ ತಾ. 30—6—'46ನೇ ಕಾಗದ ಸೆಕ್ರಟರಿಯರು ಓದಿದುದನ್ನು ಕೇಳಿ ಸಂತೋಷಪಟ್ಟದ್ದಲ್ಲದೆ ಅವರೆಲ್ಲರೂ ಮನಃಪೂರ್ವಕ ಸಹಕರಿಸುವಂತೆ ಈ ಮೂಲಕ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

ವಿ. ಸೂ:—ನಮ್ಮ ಸ್ವಯಂಸೇವಕರು ಅಲ್ಲಲ್ಲಿಯ ಗ್ರಾಮಾಧಿಕಾರಿಗಳನ್ನು ನೋಡಿ ಸಹಕಾರ ಪಡೆಯುವುದು.

9. 34ನೇ ಸಭೆಯನ್ನು ಕಾರ್ನಾಡಿನಲ್ಲಿ ತಾ. 21—7—'46ನೇ ಆದಿತ್ಯವಾರ 3 ಘಂಟೆಗೆ ಜರಗಿಸಬೇಕಾಗಿ ನಿಶ್ಚಯಿಸಲಾಯಿತು.

ಎಲ್ಲವರಿಗೂ ವಂದನೆಯಿಂದ ಸಭೆಯು ಮುಕ್ತಾಯವಾಯಿತು.

ಮುಲ್ಕಿ,
7-7-1946.

ಎಮ್. ಆರ್. ಪುಂಜ,
ಕಾರ್ಯದರ್ಶಿ.

(ಸಹಿ) **ಚೆನ್ನರಾಯ ಸಾವಂತ,**
ಅಧ್ಯಕ್ಷ.

K P W M-P I C No. S K 37, 12-7-46, 100 Cs.

ತಾ. 21-7-46ನೇ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಕಾರ್ನಾಡಿನಲ್ಲಿ ಮೂಲ್ಕಿ ಸೆಂಟ್ರಲ್ ಗ್ರಾಮಾಭಿವೃದ್ಧಿ ಪರವಾದ ರೈತರ 34ನೇ ಸಭೆಯ ಪ್ರೊಸಿಡಿಂಗ್ಸ್.

ಹಾಜರು—ಕೆಲವೆಲ್ಲಾ ಗ್ರಾಮಗಳ 21 ರೈತರು ಹಾಜರಿದ್ದರು.

ಅಧ್ಯಕ್ಷಃ ಶ್ರೀ। ಎಮ್. ತಿದ್ದು ಶೆಟ್ರು.

1. ತಾ. 1—9—'46ರಲ್ಲಿ ಜರಗತಕ್ಕ ಸಸಿ ದಿನಾಚರಣೆಗೆ 32ನೇ ಸಭೆಯ ನಂಬ್ರ 7ನೇ ನಿರ್ಣಯದ ಕಲಂ 3ರಲ್ಲಿ ಆಮಂತ್ರಿಸ ಬೇಕಾಗಿ ಕಾಣಿಸಿದ ಮಹನೀಯರಲ್ಲಿ ಜಿಲ್ಲಾ ಕಲೆಕ್ಟರರು, ಕುಂದಾಪುರ ಎಸಿಸ್ಟಾಂಟ್ ಕಲೆಕ್ಟರರು, ಜಿಲ್ಲಾ ವಿದ್ಯಾ ಆಫೀಸರರು, ಶ್ರೀ। ಸಂಜೀವ ಭಟ್ರು, ಕಣಿಯೂರು ಕ್ಷೇತ್ರದ ಅಧ್ಯಕ್ಷ ಸೆಕ್ರಿಟರಿಯರು, ಬಳ್ಕುಂಜೆ ಗುರುಗಳು, ಶ್ರೀ। ಶಂಕರಾಳ್ವರು, ರಾವ್ ಸಾಹೇಬ್ ರಂಗನಾಥ ಪೂಂಜರು, ಶ್ರೀ। ಎ. ಬಿ. ಸೆಟ್ರು, ಡಾಕ್ಟರ್ ಯು. ಪಿ. ಮಲ್ಯ ಮತ್ತು ಶ್ರೀ। ಎಲ್. ಸಿ. ಪ್ಯಾಸರು ಕಾಗದ ಮುಖಾಂತ್ರ ತಿಳಿಸಿರುವ ರಾದರೂ, ಉಳಿದವರು ಅವರ ಅನುಕೂಲತೆಯನ್ನು ಬೇಗನೆ ತಿಳಿಸುವಂತೆ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

2. ಸಸಿ ದಿನಾಚರಣೆ ಸಂದರ್ಭ ಮುಂದಿಡುವರೆ ಸೆಕ್ರಿಟರಿಯು ತಯಾರಿಸಿದ ರಿಪೋರ್ಟು ಓದಿ ಮಂಜೂರು ಮಾಡಿದ್ದಲ್ಲದೆ ಅದನ್ನು ಇಂಗ್ಲೀಷು ಮತ್ತು ಕನ್ನಡದಲ್ಲಿ ಛಾಪಾ ಮಾಡಬೇಕಾಗಿ ನಿರ್ಣಯಿಸಲಾಯಿತು.

3. ಸಸಿ ದಿನಾಚರಣೆಯ ಸಮಯ ಈ ಕೆಳಗಿನ ನಿರ್ಣಯಗಳನ್ನು 13 ಸೆಂಟರುಗಳಲ್ಲಿಯೂ ಮುಂದಿಡಬೇಕಾಗಿ ನಿರ್ಣಯಿಸ ಲಾಯಿತು.

(1) ಪ್ರತಿ ಗ್ರಾಮದಲ್ಲಿ ಇರುವ ಕುರುದಾರಿಗಳನ್ನು ರಿಪೇರಿಯಲ್ಲಿಡುವುದು ಅಗತ್ಯ. ಈ ಕುರಿತು ಪಂಚಾಯಿತಿ ಬೋರ್ಡುಗಳಿಂದ ಅನುಕೂಲವಾದ ಸಹಾಯ ಪಡೆದು ಪ್ರತಿ ಗ್ರಾಮದವರು ಅವನ್ನು ಈ ವರ್ಷ ದಶಂಬರ ತಿಂಗಳೊಳಗೆ ದುರುಸ್ತಿಪಡಿಸುವಂತೆ ಯತ್ನಿಸಬೇಕು.

(2) ನೀರಾವರಿ ವಿಷಯದಲ್ಲಿ ರೈತ ವರ್ಗವು ಲಕ್ಷವಿಡುವುದು ಅಗತ್ಯ. ಈ ಕುರಿತು ಪ್ರತಿ ಗ್ರಾಮದಲ್ಲಿರಬಹುದಾದ ಕೆರೆ, ಕಟ್ಟ, ಮದಕ, ತೋಕೆ ಇವುಗಳಲ್ಲಿ ಯಾವುದಾದರೂ ಒಂದನ್ನು ಮತ್ತು ಇದಕ್ಕೆ ಸಂಮಂಧಿಸಿದ ತೋಡುಗಳನ್ನು ರಿಪೇರಿಯಿಂದ ದುರುಸ್ತಿಮಾಡುವ ಯತ್ನವಿಡಬೇಕು.

(3) ಪ್ರತಿ ಗ್ರಾಮವು ಮಾದರಿಯಾಗಿ ಬೆಳೆಯುವಂತೆ ಪ್ರತಿ ಮನೆ, ತೋಟ, ಬಾವಿಯನ್ನು ನಿರ್ಮಲವಾಗಿರಿಸಿ, ಗೊಬ್ಬರ ಮತ್ತು ಕಸಕಡ್ಡಿ ಹಾಕುವರೆ ಮಾಡು ಇರುವ ಗುಳಿ ಮಾಡಿ, ದಿನಂಪ್ರತಿ ಎಂಬಂತೆ ಹಸ್ರುವಾಣಿ ಬೆಳೆಕೊಡುವ ಕಾಯಿಪಲ್ಯ ತೋಪು ಬೆಳೆಸಿ ಮತ್ತು ಪ್ರತಿ ವ್ಯಕ್ತಿಯು ಒಂದಲ್ಲ ಒಂದು ತರದ ಕೈಗಾರಿಕೆಯಲ್ಲಿ ಇರುವ ಯತ್ನ ಮಾಡುತ್ತಿರುವ ಮಾದರಿ ಕುಟುಂಬಗಳಿಂದ ತುಂಬಿ ಬರುವಂತೆ ಎಲ್ಲವರಲ್ಲಿಯೂ ಸ್ಪರ್ದೆ ಹುಟ್ಟಿಸಲು ಪ್ರದರ್ಶನದ ಸಮಯ ಬೆಲೆಯುಳ್ಳ ಮೂರು ಪಾರಿತೋಷ ಪ್ರತಿ ಗ್ರಾಮದಲ್ಲಿ ಕೊಡಲು ಅನುಕೂಲ ವಾಗುವಂತೆ ಸಾಗುವಳ್ಳಿ ಮಾಡಿದ ಪ್ರತಿ ಎಕ್ರೆ ಒಂದರ ಅಕ್ಕಿ ಸೇರು ಒಂದರಂತೆ ವಂತಿಗೆ ವಸೂಲು ಮಾಡಬೇಕು.

(4) ಗ್ರಾಮದಲ್ಲಿರಬಹುದಾದ ಮಧ್ಯಪಾನ ದುರಭ್ಯಾಸ, ಜುಗಾರಿ ಆಟ, ದುರ್ವ್ಯಾಜ್ಯ ಮತ್ತು ಮದುವೆ ವಗೈರೆಗಳಲ್ಲಿ ಅನಾವಶ್ಯಕ ಖರ್ಚುಗಳನ್ನು ಕಡಿಮೆಮಾಡಲು ಪ್ರಯತ್ನಿಸುವೆವು. ಮತ್ತು ಬಿಡು ಸಮಯದಲ್ಲಿ ಹಿತಕರವಾದ ಒಳ್ಳೆ ರೀತಿಯಿಂದ ಸಮಯವನ್ನು ಉಪ ಯೋಗಿಸಲು ಬೇಕಾದ ವ್ಯಾಯಾಮ ಜಾಗವನ್ನು ಅನುಕೂಲಿಸಿಕೊಳ್ಳುವೆವು.

(5) ಚಾ, ಕಾಫಿ ಕುಡಿಯುವ ಅಭ್ಯಾಸವು ಹೆಚ್ಚುತ್ತಾ ಬರುತಿದ್ದು ದೋಷಕರವಾದುದರಿಂದ ಬೇಕೆಂದಿರುವವರು ಮನೆಯಲ್ಲಿ ತಯಾರಿಸಿ ಕುಡಿಯಬೇಕು, ಮತ್ತು ನಮ್ಮ ಮನೆಯ 2 ಮೈಲು ಫಾಸಿಲೆಯೊಳಗೆ ಇರುವ ಯಾವ ಹೊಟೆಲಲ್ಲಿಯೂ ಕಾಫಿ ಚಾವನ್ನು ಕುಡಿಯ ಲಾರೆವು.

(6) 27ನೇ ಸಭೆಯಲ್ಲಿ ನಿರ್ಣಯವಾಗಿ 33ನೇ ಸಭೆಯಲ್ಲಿ ನಮ್ಮ ಸೀಮೆಯ ಶ್ರೀ। ಚೆನ್ನರಾಯ ಸಾವಂತರ ಅಧ್ಯಕ್ಷತೆಯಲ್ಲಿ ನಮ್ಮ ಕ್ಷೇತ್ರದಲ್ಲಿ ಅಸ್ಪೃಶ್ಯತಾ ನಿವಾರಣೆಯು ಬೇಗನೆ ಆಗುವುದು ಅಗತ್ಯವೆಂದೂ ಈ ವಿಷಯ ಕ್ಷೇತ್ರದ ಎಲ್ಲಾ ಮಠ, ದೇವಸ್ಥಾನಗಳ ಆಡಳಿತೆ ಮತ್ತು ಮೊಕ್ತೇಸರರಿಗೆ ಬರಕೊಳ್ಳಬೇಕೆಂದು ನಿಶ್ಚಯವಾಗಿರುತ್ತಾ ನಮ್ಮ ಕ್ಷೇತ್ರದಲ್ಲಿ ಜನಭಿಪ್ರಾಯ ಅನುಕೂಲವಾಗಿ ಬೆಳೆದುಬರು ವಂತೆಯೂ ನಮ್ಮ ಕ್ಷೇತ್ರವು ಆದರ್ಶರೂಪ ಮುಂದೆ ಬರುವಂತೆಯೂ ನಾವೆಲ್ಲವರೂ ಈ ಕಾರ್ಯದಲ್ಲಿ ಮನಸ್ಸಿಡಬೇಕು.

(7) ನಮ್ಮಲ್ಲಿರುವ ಪಶುವೃದ್ಧಿಗಾಗಿ ಬೇಕಾದ ಬೀಜದ ಹೋರಿ, ಕೋಣ ಮತ್ತು ಅಗತ್ಯವುಳ್ಳ ಹುಲ್ಲುಗಾವಲು ಇವುಗಳಿಗಾಗಿ ನಮ್ಮ ಕ್ಷೇತ್ರದ ಮಠ ದೇವಸ್ಥಾನ ಇಗರ್ಜಿ ವಗೈರೆ ಮಠ ಸಂಸ್ಥೆಗಳು ಪ್ರಯತ್ನವಿಡುವಂತೆ ಬಹುವಾಗಿ ಕೇಳಿಕೊಳ್ಳುವುದಲ್ಲದೆ ಅವರು ಈ ಕುರಿತು ಮಾಡುವ ಯತ್ನವನ್ನು ಸೆಂಟರ್ ಸೆಕ್ರಿಟರಿಗೆ ತಿಳಿಸುವಂತೆ ಕೇಳಿಕೊಳ್ಳುವೆವು.

(8) ನಮ್ಮ ಕ್ಷೇತ್ರದ ಪಂಚಾಯತಿ ಬೋರ್ಡು, ಸಹಾಯಕ ಸಂಸ್ಥೆಗಳೆಲ್ಲವೂ ಗ್ರಾಮಾಭಿವೃದ್ಧಿ ಕಾರ್ಯದ ಪ್ರತಿಭಾಗದಲ್ಲಿಯೂ ಸಹಕರಿಸಲು ಯತ್ನಿಸಿ ಅಲ್ಲಲ್ಲಿ ಸೂಲಗಿತ್ತಿಯರು, ಬೀಜದ ಹೋರಿ ಎತ್ತುಗಳು, ಗ್ರಾಮಗಳ ಶುಚಿತ್ವ, ವ್ಯಕ್ತಿಪರವಾದ ಸಾಲಸುಧಾರಣೆ ಮತ್ತು ಇನ್ನಿತರ ಕೆಲಸಗಳಲ್ಲಿ ಮೇಲ್ಮೆಯನ್ನು ತೋರಿಸಬೇಕಾಗಿ ಕೇಳಿಕೊಳ್ಳುವೆವು.

4. 32ನೇ ಸಭೆಯ 7ನೇ ನಿರ್ಣಯದ 4ನೇ ಕಲಂನಲ್ಲಿ ಕಾಣಿಸಿದ ಸ್ವಯಂಸೇವಕರು ತಮ್ಮ ತಮ್ಮ ಸೆಂಟರಿನಲ್ಲಿ ಪ್ರತಿ ಆದಿತ್ಯವಾರ ಸಭೆ ಕೂಡಿ, ಸಸಿ ದಿನಾಚರಣೆ ಕುರಿತು ಅದೇ ಸಭೆಯ 8, 9ನೇ ನಿರ್ಣಯಗಳಲ್ಲಿ ಕಾಣಿಸಿದ ಎಲ್ಲಾ ಕಾರ್ಯಗಳು ಯಾವ ರೀತಿ ಮುಂದು ವರಿದಿರುವವೆಂದು ವಿಚಾರಿಸಿ ಬಾಕಿಯಿರುವಲ್ಲಿ ಎಚ್ಚರಿಸುತ್ತಾ ಅವರ ಪ್ರತಿವಾರದ ಕೆಲಸದ ಸಂಕ್ಷಿಪ್ತ ವರದಿಯನ್ನು ಸೆಂಟರ್ ಸೆಕ್ರಿಟರಿಯರಿಗೆ ಕಳುಹಿಸಿಕೊಡುವುದು, 13 ಸೆಂಟರುಗಳಲ್ಲಿ ಒಂದೇ ಸಮಯ ನಡಿಯತಕ್ಕ ಕಾರ್ಯ ಯಶಸ್ವಿಯಾಗಲು ಅಗತ್ಯವಿರುವುದರಿಂದ ಈ ರೀತಿ ಪ್ರತಿವಾರ ಕೂಡಿಬರುವ ಯತ್ನವಿಡುವಂತೆ ಸ್ವಯಂಸೇವಕರೆಲ್ಲರಿಗೂ ಈ ಮೂಲಕ ಕೇಳಿಕೊಳ್ಳುತ್ತದೆ.

5. ಎರಡನೇ ಬೆಳೆಗೆ ಬೇಕಾದ ಬೀಜ ಮತ್ತು ಇತರ ಅವಶ್ಯಕತೆಗಳು ಬೇಕಾದವರು ಈಗಲೇ ಡಿಪೊಗಳಲ್ಲಿ ತಿಳಿಸಿದ್ದಾದರೆ ಅವನು ತರಿಸಿಟ್ಟುಕೊಳ್ಳಲು ಅನುಕೂಲವಾಗುವುದರಿಂದ ರೈತರು ಆ ರೀತಿ ಬೇಗನೆ ಡಿಪೊಗಳಲ್ಲಿ ತಿಳಿಸಬೇಕಾಗಿಯೂ, ಡಿಪೊಗಳಲ್ಲಿ ಈಗ ಸಿಕ್ಕುವ ಹಾರೆಗಳು ಇಲ್ಲಿಯ ಕೆಲಸಕ್ಕೆ ಪ್ರಯೋಜನವಾದವುಗಳಲ್ಲವಾಗಿ ಕಂಡುಬರುವುದರಿಂದ ಅವುಗಳ ಬದಲು ಘಟ್ಟಿಯಾದ ಹಾರೆಗಳನ್ನು ಕೃಷಿ ಇಲಾಖೆಯು ವದಗಿಸಿಕೊಡುವಂತೆಯೂ ಈ ಸಭೆಯು ಈ ಮೂಲಕ ಕೇಳಿಕೊಳ್ಳುತ್ತದೆ.

6. ನಮ್ಮ ಇಡೀ ಕ್ಷೇತ್ರದಲ್ಲಿ ಎರಡನೇ ಬೆಳೆಗೆ ಅಗತ್ಯಬೀಳಬಹುದಾದ ಗೊಬ್ಬರಗಳನ್ನು ರೈತರಿಗೆ ಬೆಂಬಲವಾಗಿ ಮತ್ತು ಉತ್ಸಾಹ ಬರುವಂತೆ ಧರ್ಮಾರ್ಥವಾಗಿ ಕೊಡಲು ಜಿಲ್ಲಾ ಕಲೆಕ್ಟರರು ಮತ್ತು ಕೃಷಿ ಇಲಾಖಾ ಆಫೀಸರರನ್ನು ಕೇಳಿಕೊಳ್ಳುವೆವು.

7. ಊರ ಹರಿಜನರಿಗೆ ಸ್ನಾನಮಾಡಿಸಿ, ಎಣ್ಣೆ ಮತ್ತು ಊಟಕೊಟ್ಟು, ಎಂದಿನಂತೆ ಮಾದರಿ ಕುಟುಂಬಗಳಾಗಿ ಬೆಳೆಯಲು ಭೋಧಿಸಿದ್ದಾಯಿತು.

8. 35ನೇ ಸಭೆಯು ತಾ. 18—8—'46ನೇ ಆದಿತ್ಯವಾರ ಪಡುಬಿದ್ರೆಯಲ್ಲಿ ಕೂಡಿಬರಬೇಕಾಗಿ ನಿಶ್ಚಯಿಸಿ ಎಲ್ಲವರಿಗೂ ವಂದನೆಯಿಂದ ಸಭೆ ಮುಕ್ತಾಯವಾಯಿತು.

ಮುಲ್ಕಿ,
21-7-1946.

ಎಮ್. ಆರ್. ಪುಂಜ,
ಕಾರ್ಯದರ್ಶಿ.

(ಸಹಿ) **ಎಮ್. ಸಿದ್ದು ಶೆಟ್ಟಿ,**
ಅಧ್ಯಕ್ಷ.

ತಾ. 12–5–1946ನೇ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಮುಂಡ್ಕೂರು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಮೂಲ್ಕಿ ಸೆಂಟರ್ ಗ್ರಾಮಾಭಿವೃದ್ಧಿಪರವಾದ ರೈತರ

೩೦ನೇ ಸಭೆಯ ಪ್ರೊಸೀಡಿಂಗ್ಸು.

ರೈತರು ಮತ್ತು ಇತರರು ದಸ್ಕತು ಕೊಟ್ಟವರು 111 ಕೂಡಾ 300ಕ್ಕೆ ಮಿಕ್ಕಿ ಹಾಜರಿದ್ದರು.

ಅಧ್ಯಕ್ಷ: ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ। ಸುಂದರರಾಯರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.

ತಾ. 28-4-46ಕ್ಕೆ ಇಟ್ಟಿದ್ದ 31ನೇ ಸಭೆಯನ್ನು ಮುಂದರಿಸಿ ಏಕೆ ಇವತ್ತಿಗೆ ಇಟ್ಟಿತ್ತು ಎಂಬುದನ್ನು ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

1. ಪಂಜ ಗ್ರಾಮದಲ್ಲಿ ಜರಗಿದ 28ನೇ ಸಭೆಯ ಪ್ರೊಸೀಡಿಂಗ್ಸು ಮತ್ತು ಫಲಿಮಾರಿನಲ್ಲಿ ಆದ 29ನೇ ಸಭೆಯ ರಿಪೋರ್ಟು ಓದಿ ಮಂಜೂರು ಮಾಡಲಾಯಿತು.

2. ಕಣಿಯೂರು ಕ್ಷೇತ್ರದ ತಾ. 6-4-46 ಮತ್ತು 21-4-46ರ ಸಭೆಗಳ ಪ್ರೊಸೀಡಿಂಗ್ಸುಗಳನ್ನು ಓದುತ್ತಾ ಅಲ್ಲಿಯ ಗ್ರಾಮಸ್ಥರು ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ತೋರಿಸುವ ಆಸಕ್ತಿಯನ್ನು ಮೆಚ್ಚುವುದಾಯಿತು.

3. ಗ್ರಾಮಾಭಿವೃದ್ಧಿ ಕಾರ್ಯಕ್ಕಾಗಿ ಪ್ರದರ್ಶನದ ತನಕ ಸೆಕ್ರಟರಿ ಕೈ ಕರ್ಚಾದ ರೂ. 150-13-9ರ ಬಾಬಿನಲ್ಲಿ ಬಂಟರ ಯಾನೆ ನಾಡವರ ಸಂಘದವರು ಕೊಟ್ಟ ರೂ. 100/-ನ್ನು ವಂದನಾಪೂರ್ವಕ ಸ್ವೀಕರಿಸಿ ಬಾಕಿ ಹಣವನ್ನು ಗ್ರಾಮಾಭಿವೃದ್ಧಿ ಫಂಡಿಗೆ ಕರ್ಚು ಬರ ಕೊಳ್ಳುವುದಾಗಿಯೂ ನಿಶ್ಚಯಿಸಲಾಯಿತು.

4. ಈ ಕ್ಷೇತ್ರದ ಮುಲ್ಕಿ, ಹೆಜಮಾಡಿ, ಪಡುಬಿದ್ರಿ ಮತ್ತು ಫಲಿಮಾರು ಇವು ನಾಲ್ಕು ಕೇಂದ್ರಗಳನ್ನು ಕಡ್ಡಾಯ ಶಿಕ್ಷಣಕ್ಕೆ ಚುನಾಯಿಸಿರುವುದಾಗಿ ತಿಳಿದು ಬರುತ್ತಾ ವಿದ್ಯಾಖಾತೆಯ ಆಫೀಸರರನ್ನು ಸರಕಾರ ಮತ್ತು ಜಿಲ್ಲಾ ಬೋರ್ಡನ್ನು ವಂದಿಸುವುದಲ್ಲದೆ, ಬಾಕಿ ಕಡೆಗಳನ್ನು ಬೇಗನೆ ಚುನಾಯಿಸಿ ಮೂರು ವರ್ಷದೊಳಗೆ ಇಡೀ ಕ್ಷೇತ್ರದಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ತರುವಂತೆ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

5. ಈ ಕ್ಷೇತ್ರಕ್ಕೆ ಸೇರಿದ ಹರಿಜನರನ್ನು ಒಟ್ಟುಕೂಡಿಸಿ ಸ್ನಾನಮಾಡಿಸಿ ಅವರಿಗೆ ಗಂಜಿ ಊಟದ ಅನುಕೂಲವನ್ನು ಗ್ರಾಮಾಭಿವೃದ್ಧಿ ಕಡೆಯಿಂದ ಮಾಡಿಸಿದುದಾಯಿತು. ಆದರೆ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಮತ ಸಂಸ್ಥೆಗಳು ನೆರವಾಗುವುದು ಅಗತ್ಯ ಮತ್ತು ನ್ಯಾಯವೆಂದು ತೋರಿಸಿ ಕೊಡುವ ಕುರಿತು ಈ ಬಾಬ್ತು ಮತ್ತು ಈ ಸಭೆಯ ವಿಷಯ ಆದ ಕರ್ಚನ್ನು ಮುಂಡ್ಕೂರು ದೇವಸ್ಥಾನದ ಕಡೆಯಿಂದ ಮುಕ್ತೇಸರ ಶ್ರೀ। ಕೃಷ್ಣ ಶೆಟ್ರು ಕೊಟ್ಟುದಕ್ಕಾಗಿ ವಂದನೆಯನ್ನು ಸೂಚಿಸಲಾಯಿತು. ಮತ್ತು ಇವರ ಮಾದರಿಯಂತೆ ಎಲ್ಲವರ ಸಹಕಾರವನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

6. 1944-'45 ಮತ್ತು 1945-'46 ಈ ಎರಡು ವರ್ಷಗಳಲ್ಲಿ ಮೂಲ್ಕಿ ಕ್ಷೇತ್ರಕ್ಕೆ ಸೇರಿದ ಪ್ರತಿ ಗ್ರಾಮದಲ್ಲಿ ರಿಕ್ವಿಸಿಶನ್ ಆದ ಲೆಕ್ಕ ಕೊಡುವಂತೆ ಮಂಗಳೂರು ತಹಸಿಲ್ದಾರರನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

7. ಮೂಲ್ಕಿ ಕ್ಷೇತ್ರಕ್ಕೆ ಸೇರಿದ ಗ್ರಾಮಸ್ಥರನ್ನು ಆಹಾರ ತುಷ್ಟಿಯಿಂದ ಸುದಾರಿಸುವರೆ ಅವರವರ ಬಾಬ್ತು ಇರಬಹುದಾದ ಹೆಚ್ಚಿಗೆ ಅಕ್ಕಿ ಮತ್ತು ಕೊಳಕೆ ಬೆಳೆಯ ಅಕ್ಕಿಯನ್ನು ಸಾಧ್ಯವಿದ್ದಷ್ಟುಮಟ್ಟಿಗೆ ಕೊಡುವಂತೆ ಈ ಸಭೆಯು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

8. ಮೇಲಿನ ನಿರ್ಣಯವಲ್ಲದೆ ಆಹಾರ ತುಷ್ಟಿಯ ನಿವಾರಣೆಗಾಗಿ ಈಗ ಧಾರಾಳವಾಗಿ ಸಿಕ್ಕುವ ಹಣ್ಣು, ಹಂಪಲು, ಗೆಡ್ಡೆಗೆಣಸು, ಮತ್ತು ಕಾಯಿಪಲ್ಯಗಳನ್ನು ಎಲ್ಲವರೂ ಉಪಯೋಗಿಸುತ್ತಾ, ಸೊತ್ತುಗಳು ಸಿಕ್ಕದ ಮಳೆಗಾಲದ ಸಮಯಕ್ಕೆ ಅಕ್ಕಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕಾಗಿ ನಿರ್ಣಯಿಸಲಾಯಿತು.

9. ಕಾರ್ಯಾಡಿನಲ್ಲಾದ 27ನೇ ಸಭೆಯ 11 ಮತ್ತು 12ನೇ ನಿರ್ಣಯಗಳನ್ನು ಎಲ್ಲವರೂ ಪಾಲಿಸುವಂತೆ ಯತ್ನವಿಡಬೇಕಾಗಿ ನಿರ್ಣಯಿಸಲಾಯಿತು.

10. ಪಂಜ ಗ್ರಾಮದಲ್ಲಾದ 28ನೇ ಸಭೆಯ 7ನೇ ನಿರ್ಣಯವನ್ನು ಆಲೋಚಿಸುತ್ತಾ ಈ ಕೆಳಗಿನ ಅಭಿಪ್ರಾಯಪಡುವಂತಾಯಿತು:

ಕೋಳಿ ಸಾಕುವಿಕೆ, ಪಶುಪಾಲನೆ ಗ್ರಾಮಾಭಿವೃದ್ಧಿ ಸಾಧನೆಯ ಮುಖ್ಯ ಅಂಗವಾದವುಗಳಾದರೂ, ಕೋಳಿಕಟ್ಟು ಮತ್ತು ಕಂಬಳ ಗ್ರಾಮಾಭಿವೃದ್ಧಿಕಾರ್ಯಕ್ಕೆ ಸಹಾಯಕವಾದವುಗಳಲ್ಲವೆಂದೂ, ಬಯಲಾಟಗಳು ಜನರಲ್ಲಿ ಒಂದು ರೀತಿ ವಿದ್ಯೆ ಮತ್ತು ವಿನೋದ ಕೊಡಲು ಬೇಕಾದವುಗಳಾದರೂ, ಇವುಗಳಿಗಾಗಿ ಬಡ ರೈತರಿಗೆ ವಂತಿಗೆ ರೂಪ ವಗೈರೆ ಉಪದ್ರಕ್ಕೆ ಕಾರಣಕೊಡುವುದೂ, ಅವರು ನಿದ್ದೆಕೆಟ್ಟು ಕೆಲಸಮಾಡಲು ಜುಗುಪ್ಸೆ ಪಡಿಯಲು ಕಾರಣ ಕೊಡುವುದೂ ಸರಿಯಲ್ಲವೆಂದೂ, ಇವನ್ನು ಆಡಿಸುವುದರಲ್ಲಿ ಮಿತಿಯಿರಬೇಕೆಂದೂ ಹೆಚ್ಚಿಗೆ ಸಂಖ್ಯೆಯಿಂದ ಆಡಿಸುವುದು ಮೇಲಿನ 9ನೇ ನಿರ್ಣಯಕ್ಕೆ ತೀರಾ ವಿರೋಧ ಸಾಧನೆಯಾಗುವುದೆಂದೂ ಅಭಿಪ್ರಾಯಪಡುವುದಲ್ಲದೆ ಈ ಸಂದರ್ಭಗಳಲ್ಲಿ ಯಾವ ತರದ ಜುಗರಾಟ ಮಾದಕ ಪದಾರ್ಥಗಳ ಸೇವನೆಗೆ ಎಡೆ ಎಷ್ಟಕ್ಕೂ ಕೊಡಬಾರದೆಂದು ನಿಶ್ಚಯಿಸಲಾಯಿತು.

11. ಮುಲ್ಲಡ್ಕ ಗ್ರಾಮದಲ್ಲಿ ವಾಸಿಸಿಕೊಂಡಿರುವ ಹರಿಜನ ವಸತಿ ಬಳಿ ನೀರಿನ ಕೊರತೆಯಿರುವುದೆಂದು ತಿಳಿದು ಬಂದು ಅವರಿಗೆ ನೀರಿನ ಅನುಕೂಲತೆಗೊಳಿಸಿ ಕೊಡುವಂತೆ ಮುಂಡ್ಕೂರು ಮುಲ್ಲಡ್ಕ ಪಂಚಾಯತಿ ಬೋರ್ಡನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

12. ಮುಂಡ್ಕೂರು ಪೇಟೆಯ ರಸ್ತೆಯು ಇಕ್ಕಟ್ಟಾಗಿ ಕಂಡುಬರುವುದರಿಂದ ಲಗ್ತುವರ್ಗದಾರರು ಅಗತ್ಯವುಳ್ಳ ಸ್ಥಳಗಳನ್ನು ಕೊಡುವಂತೆಯೂ ಈ ಬಾಬಿನಲ್ಲಿ ಜಿಲ್ಲಾ ಬೋರ್ಡು ಮತ್ತು ಸ್ಥಳೀಕ ಪಂಚಾಯತಿ ಬೋರ್ಡು ನಿಗಾ ಕೊಡುವಂತೆ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

13. ಮುಂಡ್ಕೂರಲ್ಲಿ ಹಾಕಿದ ಕಟ್ಟೆದ ವಿಷಯ ಅಭಿಪ್ರಾಯ ಕೇಳುತ್ತಾ ಸದ್ರಿ ಕಟ್ಟೆದಿಂದ ಯಾವ ತರದ ಬಾಧಕವು ಯಾರಿಗೂ ಇಲ್ಲದೆ ಫಲಿಮಾರಿನಿಂದ ಮುಂಡ್ಕೂರು ತನಕ ಸಾಮಾನು ದೋಣಿಗಳು ಹೋಗುತ್ತಿರುವುದು ದಶಂಬರ ತಿಂಗಳಲ್ಲಿ ಅಂತ್ಯವಾಗುವುದು ಸಾಂಪ್ರದಾಯವಾದರೂ ಈ ವರ್ಷ ಈ ತನಕವೂ ಹೋಗುವುದೆಂದರೆ ರಹಿತರಿಗೂ ಇತರರಿಗೂ ಎಲ್ಲಾ ತರದಲ್ಲಿಯೂ ಮಹತ್ತಾದ ಪ್ರಯೋಜನವಾಗಿರುವುದೆಂದೂ, ಮುಂಡ್ಕೂರು ಕಟ್ಟೆದ ಮೇಲ್ಪಡೆ ಕೆಳಭಾಗದಿಂದ 4 ಅಡಿ ಎತ್ತರಕ್ಕೆ ನೀರು ಇರುವುದು ಕೃಷಿಯ ಕೆಲಸಕ್ಕೂ, ಪೈರಿನ ಬೆಳವಣಿಗೆಗೂ ಬಹು ದೂರತನಕ ಅತಿ ಪ್ರಯೋಜನವಾಗಿರುವುದೆಂದೂ ಸಭೆಯು ಪಡುವ ಅಭಿಪ್ರಾಯವನ್ನು ರಿಕಾರ್ಡುಮಾಡಬೇಕಾಗಿ ನಿಶ್ಚಯಿಸಲಾಯಿತು.

14. ಸಸಿನಡುವ ದಿನಾಚರಣೆ ಕುರಿತು ಆಲೋಚಿಸಲಾಗಿ 1-9-'46ನೇ ಆದಿತ್ಯವಾರ ಇದನ್ನು ಆಚರಿಸಬೇಕಾಗಿಯೂ, ಕಳದ ವರ್ಷ 5 ಸೆಂಟರಿನಲ್ಲಿ ಆಚರಿಸಿದುದನ್ನು ಈ ಸಲ ಈ ಕೆಳಗಿನ 13 ಸೆಂಟರುಗಳಲ್ಲಿ ಎದುರು ಕಾಣಿಸಿದ ಗ್ರಾಮಗಳ ಕೂಡ್ಪಿಕೆಯಿಂದ ಆಚರಿಸಲು ಪ್ರಯತ್ನಿಸಬೇಕಾಗಿ ನಿಶ್ಚಯಿಸಿದಲ್ಲದೆ ಆ ದಿನ ಆಮಂತ್ರಿಸಿಕೊಳ್ಳತಕ್ಕ ಮಹನೀಯರನ್ನು ಮುಂದಿನ ಸಭೆಗಳಲ್ಲಿ ನಿರ್ಣಯಿಸಿಕೊಳ್ಳುವುದಾಗಿ ನಿಶ್ಚಯಿಸಲಾಯಿತು.

1.	ಪಡುಬಿದ್ರಿ . . .	ಪಡುಬಿದ್ರಿ, ಪಾದೆಬೆಟ್ಟು.
2.	ಫಲಿಮಾರು . . .	ಫಲಿಮಾರು, ನಂದಿಕೂರು, ಕರ್ನಿರೆ.
3.	ಮುಂಡ್ಕೂರು . .	ಮುಂಡ್ಕೂರು, ಮುಲ್ಲಡ್ಕ, ಇನ್ನ.
4.	ಎಳಿಂಜೆ . . .	ಆಯಕಳ, ಎಳಿಂಜೆ, ಉಳೆಪಾಡಿ.
5.	ಕರಿಲು . . .	ಕೊಂಡೆಮಾಲ, ನಡುಗೋಡು, ಶಿಮಂತೂರು.
6.	ಕಿನ್ನಿಗೋಳಿ . . .	ತಾಳಿಪಾಡಿ, ಮೆನ್ನಬೆಟ್ಟು.
7.	ಕವತ್ತಾರು . . .	ಕೊಲ್ಲೂರು, ಬಳಿಕುಂಜ, ಕವತ್ತಾರು.
8.	ಸಿಮಂತೂರು . .	ಅಕಿಕಾರಿಬೆಟ್ಟು, ಎಳ್ತೂರು, ಸಿಮಂತೂರು.
9.	ಹೆಜಮಾಡಿ . . .	ಹೆಜಮಾಡಿ.
10.	ಕಾರ್ನಾಡು . . .	ಬಪ್ಪನಾಡು, ಚಿತ್ರಾಪು, ಕಾರ್ನಾಡು, ಮಾನಂಪಾಡಿ.
11.	ಪಡುಪಣಂಬೂರು . .	ಚೆಳ್ಳಾರು, ಪಡುಪಣಂಬೂರು, ತೋಕೂರು.
12.	ಹಳೆಯಂಗಡಿ . .	ಸಸಿಹಿತ್ಲು, ಪಾವಂಜೆ, ಹಳೆಯಂಗಡಿ.
13.	ಪಂಜ . . .	ಪಂಜ, ಕೈಕುಡೆ, ಅತ್ತೂರು, ಕೆಮ್ರಾಲ್.

15. ಕಳದ ವರ್ಷ ನಟ್ಟ ಸಸಿಗಳಲ್ಲಿ ಉತ್ತಮವಾಗಿ ಬೆಳೆದ ಪ್ರತಿ ಗ್ರಾಮದ ಒಂದು ಸಸಿಗೆ ರೂ. 3/- ಯಾ ಮೆಡಲನ್ನು ಸಸಿ ನಡುವ ದಿನಾಚರಣೆಯ ದಿನ ಇನಾಮು ಕೊಡಬೇಕಾಗಿ ನಿರ್ಣಯಿಸಿದಲ್ಲದೆ, ಈ ಕುರಿತು ಸಸಿಗಳನ್ನು ನೋಡಿ ಕಮಿಟಿಗೆ ತಿಳಿಸುವಂತೆ ಆಯಾಯ ಸೆಂಟರಿನವರನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

16. ಪ್ರತಿ ರಹಿತನು ತಾನು ಈ ವರ್ಷ ನಡುವ ಬಾಬ್ತು ಒಂದು ಗುಳಿಯನ್ನು ಮೊದಲೇ ಸರಿ ತೆಗೆದು ಸೊಪ್ಪು, ಗೊಬ್ಬರಗಳಿಂದ ತುಂಬಿಸಿ, ಒಂದು ಸಸಿಯನ್ನು ತಾನಾಗಿ ತಯಾರಿಸಿಡಬೇಕೆಂದು ಸೂಚಿಸಬೇಕಾಗಿ ನಿರ್ಣಯಿಸಲಾಯಿತು.

17. ಈ ಕ್ಷೇತ್ರಕ್ಕೆ ಅಪರೂಪವಾದ ಫಲವನ್ನು ಕೊಡುವ ಕೆಲವು ವಿಶೇಷ ತರದ ಸಸಿ (variety plants)ಗಳನ್ನು ಒದಗಿಸಿ ಕೊಡುವಂತೆ ಕೃಷಿ ಇಲಾಖೆಯನ್ನೂ ಜಿಲ್ಲಾ ನರ್ಸರಿ ಮ್ಯಾಲಿಕರನ್ನೂ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

18. ಮೇಲಿನ 13 ಸೆಂಟರುಗಳಲ್ಲಿ ಸಸಿ ದಿನಾಚರಣೆಯು ಯಶಸ್ವಿಯಾಗಿ ನಡಿಯುವಂತೆ ಜಿಲ್ಲಾ ಕಲೆಕ್ಟರರ ಮೂಲಕ ಗ್ರಾಮಾಧಿಕಾರಿಗಳ ಸಹಕಾರ ಕೇಳಿಕೊಳ್ಳಬೇಕಾಗಿಯೂ, ಗ್ರಾಮಗಳ ಅಭಿವೃದ್ಧಿಗಾದ ಕಾರ್ಯವನ್ನು ಮಾಡಲು ಜನ್ಮತಾಳಿರುವ ಪ್ರಾಂತ್ಯದ ಪಂಚಾಯತ ಬೋರ್ಡುಗಳಿಗೂ ಮತ್ತು ಸಹಕಾರ ಸಂಸ್ಥೆಗಳಿಗೂ, ಸಹಕಾರವನ್ನು ಕೇಳಿಬರಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

19. ದಶಂಬರ ತಿಂಗಳಲ್ಲಿ ಮೂಲ್ಕಿಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಿದ ಪ್ರದರ್ಶನವು ಯಶಸ್ವಿಯಾಗಿ ನಡಿಯುವಂತೆ ಈ ಕೆಳಗಿನ ನಿರ್ಣಯಗಳನ್ನು ಮಾಡಲಾದುವು.

(1) ಕಡಿಮೆ ಪಕ್ಷ ಒಂದು ಎಕ್ರೆ ಸ್ಥಳದಲ್ಲಾದರೂ ಹೊಸಬೀಜ, ಹೊಸಗೊಬ್ಬರದ ಉಪಯೋಗ ಮಾಡಿ ಉತ್ತಮತರವಾದ ಬೆಳೆ ತೆಗೆದವರ ಪಟ್ಟಿಯನ್ನು ಪ್ರತಿ ಉಪಕ್ಷೇತ್ರದಲ್ಲಿ ತಯಾರಿಸಬೇಕಾಗಿಯೂ ಅದರಲ್ಲಿ ಉತ್ತಮ ಮೂವರಿಗೆ ಪ್ರದರ್ಶನದ ಸಮಯ ಇನಾಂ ಕೊಡಬೇಕು.

(2) ಮೇಲಿನ ರೀತಿ, ಉತ್ತಮತರವಾದ ಹೂಡುವ ಕೋಣ ಮತ್ತು ಹೂಡುವ ಸಲಕರಣೆಯಿದ್ದವರು ಮೂವರಿಗೆ ಇನಾಂ ಕೊಡಬೇಕು.

(3) ಈ ಪ್ರಾಂತ್ಯದ ಹೈಸ್ಕೂಲು, ಹೈಯರ್ ಎಲಿಮೆಂಟರಿ ಶಾಲೆಗಳು ಸ್ಪರ್ಧಿಸುವಂತೆ ಈ ಕೆಳಗಿನ ವಿಷಯಗಳಲ್ಲಿ ರೋಲಿಂಗ್ ಕಪ್ಪ್ (Rolling Cup) ಕೊಡುವ ವ್ಯವಸ್ಥೆ ಇಡಬೇಕು ಮತ್ತು ವ್ಯಕ್ತಿಗಳಿಗೆ ಇನಾಂ ಕೊಡಬೇಕು.

(*a*) ನಾಜೂಕಾಗಿ ನೂಲುವುದಕ್ಕೆ.

(*b*) ಹೆಚ್ಚು ಸಂಖ್ಯೆ ಮಕ್ಕಳು ನೂಲುವುದಕ್ಕೆ.

(*c*) ಇತರ ಗುಡಿ ಕೈಗಾರಿಕೆಗಳ ಸಾಧನೆ.

(*d*) ಗ್ರಾಮಾಭಿವೃದ್ಧಿಯೋಜನೆ ಕಾರ್ಯದಲ್ಲಿ ಗ್ರಾಮಗಳಲ್ಲಿ ಸಾಧಿಸುದುದಕ್ಕೆ.

(*e*) ಓದುವುದು, ಬರಿಯುವುದು, ಹಾಡುವುದು, ಭಾಷಣಕೊಡುವುದು, ನಕ್ಷೆಬಿಡಿಸುವುದು, ಇವುಗಳಲ್ಲಿ ಪ್ರವೀಣತೆಗೆ.

(*f*) ಪಂದ್ಯಾಟಗಳು.

(*g*) ಪ್ರದರ್ಶನದ ಸಮಯ ಒಂದು ಘಂಟೆಗೆ ಒಳಪಟ್ಟು ಉತ್ತಮತರದ ನಾಟಕ ಆಡಿತೋರಿಸುವುದಕ್ಕೆ.

(*h*) ಮೇಲಿನ ವಿಷಯಗಳಲ್ಲಿ ಅತೀ ಪ್ರವೀಣತೆ ತೋರಿಸಿದ ವ್ಯಕ್ತಿಗಳಿಗೆ ಪ್ರತ್ಯೇಕ ಇನಾಮು ಕೊಡಲಾಗುವುದು.

4) ಕ್ಷೇತ್ರಕ್ಕೆ ಸೇರಿದ ಎಲಿಮೆಂಟರಿ ಶಾಲೆಗಳವರು ಗ್ರಾಮಾಭಿವೃದ್ಧಿಪರವಾದ ಹಾಡುಗಳನ್ನು ಹಾಡುತ್ತಾ ಗ್ರಾಮದೊಳಗೆ ಸಂಚಾರ ತ್ತು ಸುಲಭ ರೀತಿಯ ವಿಜ್ರಂಭಣೆ ವಿನೋದಾವಳಿಗಳಿಂದ ನಿರ್ಮಲವಾಗಿ ಪ್ರದರ್ಶನಕ್ಕೆ ಮೆರವಣಿಗೆ ಬಂದವರಿಗೆ ರೋಲಿಂಗ್ ಕಪ್ಪ ಡಲಾಗುವುದು.

(5) ಗ್ರಾಮಾಭಿವೃದ್ಧಿ ಕಾರ್ಯವನ್ನು ಕಾರ್ಯರೂಪ ಮಾಡುವ ಕುರಿತು ಕನ್ನಡದಲ್ಲಿ ಮೂಲ್ಕಿ ಕ್ಷೇತ್ರಕ್ಕೆ ಸೇರಿದ ರೈತನು ಬರೆದ ತ್ತಮ ತರದ ಉಪನ್ಯಾಸಕ್ಕೆ ಇನಾಂ ಕೊಡಲಾಗುವುದು. ಇದು ಒಕ್ಟೋಬರ್ ತಿಂಗಳ ಅಂತ್ಯದೊಳಗೆ ಕಾರ್ಯದರ್ಶಿಗೆ ತಲ್ಪಬೇಕು. ಲಭಶೈಲಿಯಲ್ಲಿ ಒಂದು ಕಡೆ ಬರೆದ 10 ಪಾನುಗಳಿಗೆ ಮಿಕ್ಕಿರಬಾರದು.

(6) ಈ ಕ್ಷೇತ್ರಕ್ಕೆ ಸೇರಿದ 14 ಪಂಚಾಯತ ಬೋರ್ಡುಗಳಲ್ಲಿ ಗ್ರಾಮಾಭಿವೃದ್ಧಿಪರವಾದ ಹೆಚ್ಚಿನ ಕೆಲಸವನ್ನು ಮಾಡಿ ಸಹಕರಿ ಪಂಚಾಯತ ಬೋರ್ಡಿಗೆ ಒಂದು, ಮತ್ತು ಈ ಕ್ಷೇತ್ರದಲ್ಲಿ ಬಹುವಾಗಿರುವ ಸಹಕಾರಿ ಸಂಸ್ಥೆಗಳು ಗ್ರಾಮಾಭಿವೃದ್ಧಿಕೆಲಸದಲ್ಲಿ ಸ್ಪರ್ಧಿಸು ತೆ ಇವುಗಳಿಗೆ ಒಂದು ಹೀಗೆ ಎರಡು ಶೀಲ್ಡ್ (Shield) ತಯಾರಿಸಲ್ಪಟ್ಟು ಕೊಡುವಂತಾಗಬೇಕು.

(7) ಮೇಲಿನ ಕುರಿತು ಎಲ್ಲವರೂ ಸಹಕರಿಸುವಂತೆ ಆಯಾಯ ಇಲಾಖೆಯವರಿಗೆ ಬರೆದು ಅವರ ಸಹಕಾರ ಪಡಿಯುವಂತೆ ತ್ನವಿಡಬೇಕಾಗಿ ನಿಶ್ಚಯಿಸಿಕೊಂಡದ್ದಲ್ಲದೆ, ಕಳದ ಪ್ರದರ್ಶನದಲ್ಲಿ ಸಹಕರಿಸಿದ ಎಲ್ಲಾ ಗವರ್ನಮೆಂಟು ಡಿಪಾರ್ಟ್‌ಮೆಂಟಿನವರಿಗೂ, ರ್ಶನಕಾರರಿಗೂ, ಇನ್ನನೇಕರಿಗೂ ಬರಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

(8) ಬರುವ 31ನೇ ಸಭೆಯನ್ನು ಕಠಿಲಲ್ಲಿ ಜರಗಿಸಬೇಕಾಗಿಯೂ ವಾಚನದ ವಿಲೆವಾರು, ಹರಿಜನ ಸ್ನಾನ ಊಟದ ವಿಲೆವಾರು ಡಬೇಕಾಗಿ ನಿಶ್ಚಯಿಸಲಾಯಿತು.

(9) ಅಧ್ಯಕ್ಷರ ಭಾಷಣವಾಗಿ ಎಲ್ಲರಿಗೂ ವಂದನೆಯನ್ನಿತ್ತು ವಾಚಕವು ರಾತ್ರಿ 10-30ರ ತನಕ ನಡೆದು ಸಭೆಯು ಮುಕ್ತಾಯ್ ಯಿತು.

ಎಮ್. ಆರ್. ಪೂಂಜ,
ಕಾರ್ಯದರ್ಶಿ.

ದಸ್ಕತು) S. D. ಸುಂದರ ರಾವ್,
ಅಧ್ಯಕ್ಷ.

ತಾ. 31—3—1946ನೇ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಪಂಜ ಗ್ರಾಮದ ಪಂಜದಗುತ್ತು ಮನೆಯಲ್ಲಿ ಮೂಲ್ಕಿ ಸೆಂಟರ್ ಗ್ರಾಮಾಭಿವೃದ್ಧಿಪರವಾದ ರೈತರ

28ನೇ ಸಭೆಯ ಪ್ರೊಸೀಡಿಂಗ್ಸು.

ಹಾಜರು: ದಸ್ಕತುಕೊಟ್ಟ 143 ರೈತರಲ್ಲದೆ ಇತರ ಅನೇಕರು (ಪೈಕಿ 19 ಸ್ತ್ರೀಯರು.)

1. ಶ್ರೀ ಪೆರಾರು ಮುಂಡಬೆಟ್ಟು ಮುತ್ತಯ ಶೆಟ್ರನ್ನು ಅಧ್ಯಕ್ಷರಾಗಿ ಚುನಾಯಿಸಲಾಯಿತು.

2. ಕಾರ್ನಾಡಿನಲ್ಲಿ ಜರಗಿದ 27ನೇ ಸಭೆಯ ಪ್ರೊಸೀಡಿಂಗ್ಸನ್ನು ಓದುತ್ತಾ ಎಲ್ಲಾ ನಿರ್ಣಯಗಳ ಪರವಾಗಿ ಇಡೀ ಕೇಂದ್ರವು ಯತ್ನಿಸಬೇಕಾಗಿ ಕೇಳಿಕೊಳ್ಳುವುದಲ್ಲದೆ ಅವು ಪ್ರತಿಯೊಂದರಲ್ಲಿ ಪೂರ್ಣ ಯಶಸ್ವಿಹೊಂದಿ ಫಲಪಡಿಯುವಂತೆ ಮನಃಪೂರ್ವಕ ಸಾಹಸಪಡಬೇಕೆಂದು ಎಲ್ಲವರ ಒಪ್ಪಿಗೆಯಾಯಿತು.

3. ಕಣಿಯೂರು ಕ್ಷೇತ್ರದ ತಾ. 10—3—46 ಸಭೆಯ ನಿರ್ಣಯಗಳನ್ನು ಓದಿದ್ದಾಯಿತು.

4. ಪಾವಂಜೆ ಹೊಳೆಯಲ್ಲಿ ಬಹು ವರ್ಷಗಳಿಂದ ರಹಿತ ವರ್ಗವೇ ವಿಶೇಷ ಕಷ್ಟ ಸಾಹಸಗಳಿಂದ ಹೆಚ್ಚಿನ ಕರ್ಚುಮಾಡಿ ಕೆಲವೆಲ್ಲಾ ಕಡೆಗಳಲ್ಲಿ ಕಟ್ಟವನ್ನು ಕಟ್ಟಿ ನೀರ ಅನುಕೂಲತೆಗಳನ್ನು ಮಾಡಿ ಬೆಳೆಯನ್ನು ಬೆಳೆಸುತ್ತಾ ಬರುವುದಾದರೂ, ಸರಕಾರವು ಯಾವ ಒಂದು ತರದ ಸಹಕಾರವನ್ನು ಈ ತನಕವೂ ಕೊಡದಿರುವುದಾದರೂ, ಮುಂದಕ್ಕಾದರೂ ಅಂಥಹ ಕರ್ಚು ನಷ್ಟಗಳಲ್ಲಿ ಆದಷ್ಟು ಭಾಗಿಯಾಗುವುದು ಅಗತ್ಯವಿರುವುದರಿಂದ ಪ್ರಕೃತ ಆಖೈರು ಕಟ್ಟವಾದ ಶುಮಾರು ¾ ಫರ್ಲಂಗಿಗೆ ಮಿಕ್ಕಿ ಉದ್ದವಿದ್ದು ರೈತರಿಗೆ ಬಲು ಕಷ್ಟವಾದ ಚೆಳ್ಳಾರು ಕಟ್ಟ ಒಂದನ್ನಾದರೂ ಸರಕಾರವು ಕಟ್ಟಿಸಿಕೊಡುವದಾಗಿ ಜಿಲ್ಲಾ ಕಲೆಕ್ಟರರು ಮನಸ್ಸಿಡುವಂತೆ ಸೆಕ್ರಟರಿಯು ಬರಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

5. ಕ್ಯೊಕುಡೆ ಗ್ರಾಮದಲ್ಲಿ ಎರಡು ಕಡೆ ಕಟ್ಟಹುಣಿಯು ಕಡಿದುದೋಗಿ ಇಂದಿಗೆ ಎರಡು ಮಳೆಗಾಲ ದಾಟಿಹೋದರೂ, ಸಮ್ಮಂಧಪಟ್ಟ ವರ್ಗದಾರರು ಕಟ್ಟದೆ ವಿಸ್ತಾರವಾದ ಇಡೀ ಬೈಲಿಗೆ ದೋಷವಿರುವುದರಿಂದ ಈ ವರ್ಷವೇ ಅದನ್ನು ಕಟ್ಟುವ ಯತ್ನವಿಡುವಂತೆ ಅಲ್ಲಿಯ ವರ್ಗದಾರರಲ್ಲಿ ಮುಖ್ಯಸ್ಥರಾದ ಶ್ರೀ ಕೃಷ್ಣಾಪುರ ಮಠಾಧಿಪತಿಗಳಿಗೂ, ಶ್ರೀ ಶ್ರೀಧರ ಶೇಷಗಿರಿ ಕಮ್ತಿಯರಿಗೂ, ಶ್ರೀ ಕೊಲ್ನಾಡು ಪಾದೆಮನೆ ದೇಜಪ್ಪ ಶೆಟ್ರಿಗೂ, ಮತ್ತು ಶ್ರೀ ಹೊಸಮನೆ ಕೊರಗು ಶೆಟ್ರಿಗೂ ಕೇಳಿಕೊಳ್ಳುವುದಲ್ಲದೆ ಜಿಲ್ಲಾ ಕಲೆಕ್ಟರರಿಗೆ ಕೂಡಾ ಈ ವಿಷಯ ಬರಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

6. ನಮ್ಮ ಕ್ಷೇತ್ರದಿಂದ ಹೊರಗಿನ ಕೃಷಿಕ್ಷೇತ್ರಗಳನ್ನು ನೋಡಿ ಅನುಭವ ಪಡೆದು ಬರುವಂತೆ ಶ್ರೀ ಪಂಜಗುತ್ತು ಶಂಭುಮಲ್ಲಿಯರನ್ನು ಕೃಷಿ ಇಲಾಖೆಯವರು ಚುನಾಯಿಸಿ ಕರದುಕೊಂಡು ಹೋದುದಕ್ಕಾಗಿ ವಂದನೆ ಸೂಚಿಸುತ್ತಾ, ಇನ್ನೂ ಹೆಚ್ಚಿನವರನ್ನು ಚುನಾಯಿಸಬೇಕೆಂದು ಕೇಳಿಕೊಂಡು, ಶಂಭುಮಲ್ಲಿಯರು ತಾನು ಪಡೆದ ಅನುಭವವನ್ನು ವಿವರಿಸಿ ತಿಳಿಸಿದುದನ್ನು ಕೇಳಿ ಸಂತೋಷಪಟ್ಟು ಅವರಿಗೆ ತಗಲಿದ ಹೆಚ್ಚಿನ ಕರ್ಚಿನ ಸಮ್ಮಂಧ ಗ್ರಾಮಾಭಿವೃದ್ಧಿ ಪಂಡಿನಿಂದ ರೂಪ್ಯಾ 15/- (ಹದಿನೈದು) ಕೊಡಬೇಕಾಗಿ ನಿಶ್ಚಯಿಸಲಾಯಿತು.

7. ಮುಂಡ್ಕೂರು ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ವಿಶೇಷ ಸಂಖ್ಯೆಯಿಂದ ಬಯಲಾಟಗಳನ್ನು ಆಡಿಸುವುದು, ಹೊಸ ಕಂಬಳ ಕೋಳಿ ಕಟ್ಟಗಳಲ್ಲಿ ರೈತರು ಹೆಚ್ಚೆಚ್ಚಾಗಿ ಭಾಗವಹಿಸುವುದು ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ದುಂದುಗಾರಿಕೆ ಕರ್ಚುಗಳನ್ನು ಕಡಿಮೆಮಾಡಬೇಕೆಂದು ಇರುವಾಗ ಎಷ್ಟರ ನ್ಯಾಯ ಸಮ್ಮತವೆಂದು ನಿಶ್ಚಯಿಸುವುದು ಅಗತ್ಯವೆಂದು ಸಭೆಯು ಅಭಿಪ್ರಾಯಪಡುತ್ತಾ ಉಳಿದ ಕೇಂದ್ರ ಸಭೆಗಳಲ್ಲಿಯೂ ಚರ್ಚಿಸಿ ನ್ಯಾಯಸಮ್ಮತವಾದ ನಿರ್ಣಯವನ್ನು ಎಲ್ಲವರಿಗೂ ತಿಳಿಯುವಂತೆ ನಿರ್ಧರಿಸಬೇಕಾಗಿ ನಿಶ್ಚಯಿಸಲಾಯಿತು.

8. ಪಂಜ, ಕ್ಯೊಕುಡೆ ಗ್ರಾಮಗಳನ್ನು ಅತ್ತೂರು, ಕೆರ್ಮಾಲ್ ಗ್ರಾಮಗಳ ಪಂಚಾಯತ ಬೋರ್ಡಿಗೆ ಸೇರಿಸಬೇಕಾಗಿ ನಿಶ್ಚಯಿಸಲಾಯಿತು.

9. ಅಸ್ಪರ್ಶತಾ ನಿವಾರಣೆ ಕುರಿತಾದ ಕಾರ್ಯವನ್ನು ಮಾಡುವ ಉದ್ದಿಶ್ಯ ಹರಿಜನ ಸಂಘದ ಕಡೆಯಿಂದ ಹರಿಜನ ಸೇವಕ ಶ್ರೀ ಕಿಲ್ಲೆಯವರ ಸಹಾಯವನ್ನು ಕೊಡುವಂತೆ ಸಂಘದ ಅಧ್ಯಕ್ಷರನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

10. ಇವತ್ತಿನ ಸಭೆಯ ಕರ್ಚಿಗೆ ರೂಪ್ಯಾ 5/- ಸೆಂಕ್ಷನ್ ಮಾಡಿದ್ದಲ್ಲದೆ, 29ನೇ ಸಭೆಯನ್ನು ನಂದಿಕೂರು ದೇವಸ್ಥಾನದ ಬಳಿ ತಾ. 14—4—46ನೇ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಜರಗಿಸಬೇಕಾಗಿಯೂ, ಆ ದಿನ ಶ್ರೀ ವೈಂದಪ್ಪ ರೈ, ಶ್ರೀ ಕಿಲ್ಲೆಯವರ ವಾಚಕ ಮಾಡಿಸಬೇಕಾಗಿಯೂ ನಿಶ್ಚಯಿಸಲಾಯಿತು.

11. ಶ್ರೀ ವೈಂದಪ್ಪ ರೈ, ಶ್ರೀ ಕಿಲ್ಲೆಯವರ ವಾಚಕವಾಗುತ್ತಾ, ಸಭಿಕರಿಗೂ, ಭಾಷಣ ಕರ್ತರುಗಳಿಗೂ, ಅಧ್ಯಕ್ಷರಿಗೂ, ವಂದನೆ ಸೂಚಿಸಿ ಅಧ್ಯಕ್ಷರು ಕೊಟ್ಟ ಸಹಾಯ ಧನ ರೂಪ್ಯಾ 5/- ಸ್ವೀಕರಿಸಿಕೊಂಡು ಸಭೆಯು ಮುಕ್ತಾಯವಾಯಿತು.

ಪಂಜ,
ತಾ. 31—3—1946.

ಎಮ್. ಆರ್. ಪೂಂಜ,
ಕಾರ್ಯದರ್ಶಿ.

(ಸಹಿ) ಪಿ. ಮುತ್ತಯ ಶೆಟ್ಟಿ,
ಅಧ್ಯಕ್ಷ.

K. P. W. M. P. I. C. No. S. K. 37. 5-4-46. 50 Cs.

ತಾ: 17–3–1946ನೇ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಕಾರ್ನಾಡು ಮಿಶನ್ ಶಾಲೆಯಲ್ಲಿ ಮೂಲ್ಕಿ ಸೆಂಟರ್ ಗ್ರಾಮಾಭಿವೃದ್ಧಿಪರವಾದ ರೈತರ

27ನೇ ಸಭೆಯ ಪ್ರೊಸೀಡಿಂಗ್ಸು.

ರೈತರು ಮತ್ತು ಇತರರು ನೂರಕ್ಕೆ ಮಿಕ್ಕಿ ಹಾಜರಿದ್ದರು

ಅಧ್ಯಕ್ಷ:—ಶ್ರೀ ಎ. ಟಿ. ಪೂಂಜರು ಅಧ್ಯಕ್ಷಸ್ಥಾನ ವಹಿಸಿದ್ದರು.

(1) ತಾ. 3—3—1946ರ ಸಭೆಯ ಪ್ರೊಸೀಡಿಂಗ್ಸು ಓದಿ ಮಂಜೂರು ಮಾಡಲಾಯಿತು.

(2) ಕಣಿಯೂರು ಕ್ಷೇತ್ರದವರ ತಾ. 10—3—'46ರ ಸಭೆಯ ಪ್ರೊಸೀಡಿಂಗ್ಸು ಓದಿದ್ದಾಯಿತು.

(3) ನಮ್ಮ ಜಿಲ್ಲಾ ಕಲೆಕ್ಟರರಾದ ಶ್ರೀ ರಾವ್ ಬಹದ್ದೂರ್ ಪಿ. ರಾಮದಾಸ್ ಬಿ. ಎ.ಯವರಿಗೆ ಚಂಗಲ್ಪಟ್ಟಿಗೆ ವರ್ಗವಾದುದನ್ನು ತಿಳಿಯುತ್ತಾ, ಗ್ರಾಮಾಭಿವೃದ್ಧಿ ಕಮಿಟಿ ಮತ್ತು ಇದರ ಚಟುವಟಿಕೆಗಳಿಗೆ ಅವರು ತೋರಿಸಿದ ರೀತಿ, ಕೊಟ್ಟ ಸಹಕಾರ ಪ್ರೋತ್ಸಾಹಗಳನ್ನು ಕೃತಜ್ಞತಾಪೂರ್ವಕ ರಿಕಾರ್ಡುಮಾಡುವುದಾಗಿಯೂ, ಈ ಸಂಸ್ಥಾನಕ್ಕೆ ಬಹುಕಾಲ ಅವರು ಇನ್ನಷ್ಟು ಹೆಚ್ಚಿನ ಸೇವೆ ಮಾಡಲೆಂದು ಕೋರಿ ಪ್ರಾರ್ಥಿಸಿಕೊಳ್ಳುವುದಾಗಿಯೂ, ನಿರ್ಣಯಿಸಿ ಇದನ್ನು ಅವರಿಗೆ ಸೆಕ್ರಟರಿಯು ತಿಳಿಸಬೇಕಾಗಿ ನಿಶ್ಚಯಿಸಲಾಯಿತು.

(4) ವ್ಯಾಯಾಮ ಕುರಿತು ದರಕಾಸ್ತಿಗೆ ಕೇಳಿದ ಕಾರ್ನಾಡು ಗ್ರಾಮದ ಸ. ನಂ. 57ರಲ್ಲಿ 4 ಯಾ 5 ಎಕ್ರೆ ಸ್ಥಳದ ನಕ್ಷೆಮಾಡಿ ಡಿಪ್ಟಿ ತಹಸಿಲ್ದಾರರು ಬರೆದು ತಿಳಿಸಿದಂತೆ ಏಲಿಯನೇಶನಿಗೆ ಸೆಕ್ರಟರಿಯು ಕೇಳಬೇಕಾಗಿ ನಿಶ್ಚಯಿಸಲಾಯಿತು.

(5) ಗ್ರಾಮಾಭಿವೃದ್ಧಿಪರವಾದ ಕೆಲಸವನ್ನು ತಾ. 25—2—45ರಿಂದ ಮಾಡುತ್ತಾ ಬಂದುದರಿಂದ ಕ್ಷೇತ್ರದಲ್ಲಿ ಅದರ ಪರಿಣಾಮವನ್ನು ತಿಳಿಯುವಂತೆ ಮಂಗಳೂರು ತಾಲೂಕಿನ ಪ್ರತಿ ರೆವಿನ್ಯೂ ಪಿರ್ಕಿಯಲ್ಲಿ 1944-45 ಮತ್ತು 1945-46 ಈ ಎರಡು ವರ್ಷಗಳಲ್ಲಿ ಮೂರು ಬೆಳೆಯಲ್ಲಿ ರಿಕ್ವಿಜೀಶನ್ ಮೂಲಕ ಜಮೆಯಾದ ಅಕ್ಕಿ ವ ಬತ್ತದ ಲೆಕ್ಕ ಕಮಿಟಿಯವರಿಗೆ ಕೊಡುವಂತೆ ಕಲೆಕ್ಟರರನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು.

(6) ಸ್ವಯಂಸೇವಕರು ಮುಂದೆ ಬರುವ ಗ್ರಾಮಗಳಲ್ಲಿ ಅನುಕೂಲವಾದಷ್ಟು ಕುಟುಂಬದ ಜನಸಂಖ್ಯೆ ಮತ್ತು ಮುನಾಫೆ ಲೆಕ್ಕವನ್ನು ತೆಗಿಯಲು ಪ್ರಯತ್ನಿಸಬೇಕು.

(7) ತಾ. 3—3—46ರ ಸಭೆಯ ನಂ. 11ನೇ ನಿರ್ಣಯ ಪ್ರಕಾರ ಬಿತ್ತು ಬೇಕಾದ ರೈತರು ಡಿಪೊಗಳಲ್ಲಿ ಬರಹಮೂಲಕ ತಿಳಿಸಬೇಕಾಗಿ ಮೂಲ್ಕಿ ಡಿಪೊ ಕೀಪರ್ ಶ್ರೀ ವಿಟ್ಠಲ ಶೆಟ್ರು ಹೇಳಿದ್ದನ್ನು ಎಲ್ಲವರಿಗೂ ತಿಳಿಸಿದ್ದಾಯಿತು.

(8) ತಾ. 3—3—46ರ ಸಭೆಯ ನಂ. 3ನೇ ನಿರ್ಣಯದಂತೆ ಸೆಸಿ ನಡುವ ದಿನಾಚರಣೆ ಮತ್ತು ದಶಂಬರ ತಿಂಗಳಲ್ಲಿ ಮೂಲ್ಕಿಯಲ್ಲಿ ಜರಗಿಸಲು ನಿಶ್ಚಯಿಸಿದ ಕೇಂದ್ರ ಪ್ರದರ್ಶನ ಯಶಸ್ವಿಯಾಗುವಂತೆ ಎಲ್ಲವರೂ ಪ್ರಯತ್ನಿಸಬೇಕು.

(9) ಮೂಲ್ಕಿ ಕಡವಿನ ಬಳಿ ಶ್ರೀ ಶಾಂಭವಿ ಗಾರ್ಡನಿನಲ್ಲಿ ನಡಿಯುವ ಹುರಿಹಗ್ಗ ಕೈಗಾರಿಕೆಯಲ್ಲಿ ತರ್ಬೇತುಹೊಂದಿ ಗುಡಿ ಕೈಗಾರಿಕೆಯಾಗಿ ಇದನ್ನು ಅನುಸರಿಸಲು ಯತ್ನಿಸಬೇಕು.

(10) ಆಹಾರದ ಕಷ್ಟ ಸಮಸ್ಯೆಯನ್ನು ವಿಚಾರಿಸುತ್ತಾ ಸರ್ಕಾರ ಮತ್ತು ಕೊಂಗ್ರೆಸು ಹೇಳಿಕೆಗಳನ್ನು ಗಮನಕ್ಕೆ ತಂದುಕೊಂಡು ಎಲ್ಲವರೂ ತರತರದ ಧಾನ್ಯ, ಗೆಣಸು, ಫಲವಸ್ತು, ಕಾಯಿಪಲ್ಯ, ಮೀನು ವಗೈರೆ ಅವರವರ ಅನುಕೂಲಕ್ಕೆ ಸರಿಯಾಗಿ ಹೆಚ್ಚೆಚ್ಚಾಗಿ ಉಪಯೋಗಿಸಿ ಆದಷ್ಟು ಅಕ್ಕಿಯನ್ನು ಉಳಿಸಿಕೊಂಡು ಬರಬೇಕಾಗಿಯೂ, ಭತ್ತ ಸಾಗುವಳ್ಳಿಗೆ ಅನುಕೂಲವಲ್ಲದ ಇತರ ಎಲ್ಲಾ ಸ್ಥಳಗಳಲ್ಲಿ ಆಹಾರಕ್ಕೆ ಉಪಯುಕ್ತವಾದ ಒಂದಲ್ಲ ಒಂದು ತರದ ಧಾನ್ಯ, ಗೆಣಸು, ಕಾಯಿಪಲ್ಯ, ಹಣ್ಣುಹಂಪಲು ಬೆಳಸಿ ಪೈದಾಸ್ತಿನ ಯತ್ನವಿಡಬೇಕಾಗಿ ನಿರ್ಧರಿಸಿಕೊಳ್ಳಲಾಯಿತು.

(11) ಗ್ರಾಮಾಭಿವೃದ್ಧಿಯ ಮುಂದಿನ ಯೋಜನೆಯನ್ನು ಆಲೋಚಿಸುತ್ತಾ ಪ್ರತಿ ಗ್ರಾಮಗಳಲ್ಲಿ ಆದಷ್ಟು ರೈತರು ಈ ಕಾರ್ಯದಲ್ಲಿ ನೆರವಾಗಿ ಮುಂದೆ ಬರುವಂತೆ ಪ್ರಯತ್ನಿಸುವುದಲ್ಲದೆ, ಸದ್ರಿ ಯೋಜನೆಯ ಕಲಂ III 3ನೇ ಪ್ರಕಾರ ಪ್ರತಿ ಗ್ರಾಮಗಳಲ್ಲಿ ಮಾದರಿ ಕುಟುಂಬವಾಗಿ ಬೆಳೆಯಲು ಪ್ರಯತ್ನಿಸಿದವರಿಗೆ ಇನಾಮು ಕೊಡುವ ಏರ್ಪಾಡಿಗಾಗಿ ಸಾಗುವಳ್ಳಿಯಾಗುವ ಪ್ರತಿ ಎಕ್ರೆ ಒಂದರ ಅಕ್ಕಿ ಸೇರು ಒಂದರಂತೆ ಒಂದನೇ ಬೆಳೆಯಲ್ಲಿ ಜಮೆಮಾಡಬೇಕಾಗಿ ನಿರ್ಣಯಿಸಲಾಯಿತು.

(12) ಗ್ರಾಮಾಭಿವೃದ್ಧಿ ಯೋಜನೆಯ ಕಲಂ IIರ 14 ವಿಷಯಗಳ ಸಾಧನೆಗಾಗಿ ಆಲೋಚಿಸುತ್ತಾ ಪಲಿಮಾರು, ಮಂಡ್ಕೂರು, ಹಳೆಯಂಗಡಿ ಕೇಂದ್ರಗಳಲ್ಲಿ ಸಾಧನೆ ಇಡುವುದಾಗಿ ತಿಳಿಸಿದ ವಿಷಯಗಳು ಬೇರೆಯಿದ್ದು ಈ ಕೆಳಗಿನ ವಿಷಯಲ್ಲಿ ಪ್ರಯತ್ನವಿಡಬೇಕಾಗಿ ನಿಶ್ಚಯಿಸಲಾಯಿತು:

(*a*) ಸರಳ ಜೀವನದ ಅಭ್ಯಾಸ—ಮಾದಕ ಪದಾರ್ಥ ಸೇವನೆಯನ್ನು ಎಲ್ಲವರೂ ಬಿಡಬೇಕು. ಚಾ, ಕಾಫಿಮುದಿ ಯುವ ಅಭ್ಯಾಸವು ಹೆಚ್ಚುತ್ತಾ ಬರುವುದು ದೋಷಕರವಾದುದರಿಂದ ಬೇಕೆನ್ನುವವರು ಮನೆಯಲ್ಲಿ ತಯಾರಿಸಿ ಉಪಯೋಗಿಸಬೇಕು. ತಮ್ಮ ಮನೆಯ 2 ಮೈಲು ಫಾಸಿಲೆ ಒಳಗೆ ಯಾವ ಹೊಟೆಲಲ್ಲಿಯೂ ಅವನ್ನು ಉಪಯೋಗಿಸಬಾರದು.

(*b*) ಅನಾವಶ್ಯಕ ಮತ್ತು ದುಂದುಗಾರಿಕೆ ಕರ್ಚುಗಳನ್ನು ಕಡಿಮೆ ಮಾಡುವುದರಲ್ಲಿ ಮದುವೆ ವಗೈರೆ ಕಾರ್ಯ ಗಳನ್ನು ಕೂಡಿದಷ್ಟು ಕಡಿಮೆ ಖರ್ಚಿನಿಂದ ಅವರವರ ಮನೆಯಲ್ಲಿ ಮಾಡುವಂತೆ ಯತ್ನಿಸಬೇಕು.

(*c*) ಅಸ್ಪರ್ಶತ ನಿವಾರಣೆ:—ಈ ಕ್ಷೇತ್ರದಲ್ಲಿ ಆದಷ್ಟು ಬೇಗನೆ ಇದು ಮಾಯವಾಗಬೇಕು. ಈ ಸಾಧನೆಗಳಿಗೆಲ್ಲಾ ಬೇಕಾದ ಪ್ರಬಲ ಚಳವಳಿ ಕಮಿಟಿಯು ಹೂಡಬೇಕು.

(*d*) ಓದುವುದು, ಬರಿಯುವುದು, ಹಾಡುವುದು—ವಗೈರೆ ಸಾಧನೆಗಳಿಗಾಗಿ ಪ್ರತಿ ಉಪ ಕ್ಷೇತ್ರದಲ್ಲಿ ಒಮ್ಮೊಮ್ಮೆ ವಾಚಕ ಏರ್ಪಡಿಸಿ ರಹಿಕ ವರ್ಗದಲ್ಲಿ ಅದರ ಮೇಲಿನ ಪ್ರೀತಿ ಹುಟ್ಟುವಂತೆ ಮಾಡಬೇಕಾಗಿಯೂ ಪ್ರದರ್ಶನದ ಸಮಯ ಮುಂದೆ ಬಂದವರಿಗೆ ಬಹುಮಾನ ಮೂಲಕ ಪ್ರೋತ್ಸಾಹಿಸಬೇಕಾಗಿಯೂ ನಿಶ್ಚಯಿಸಲಾಯಿತು.

(13) ಕಾರ್ನಾಡು ಮಿಶನ್ ಶಾಲಾ ಆಡಳಿತೆಯವರು ಗ್ರಾಮಾಭಿವೃದ್ಧಿಪರವಾದ ಪ್ರತಿಯೊಂದು ಸಭೆ ಜರಗಲು ಶಾಲಾ ಕಟ್ಟಡ ವನ್ನು ಕೊಟ್ಟುದಕ್ಕೆ ವಂದನೆ ಸೂಚಿಸುತ್ತಾ ಶಾಲೆಯ ಉಪಯೋಗಾರ್ಥವಾಗಿ ಗಡಿಯಾರ ಒಂದನ್ನು ಒದಗಿಸಿಕೊಡಬೇಕಾಗಿ ನಿಶ್ಚಯಿಸ ಲಾಯಿತು.

(14) ಶ್ರೀ ಮೈಂದಪ್ಪ ರೈ, ಶ್ರೀ ಕಿಲ್ಲೆಯವರ ವಾಚಕವಾಗುತ್ತಾ ಬರುವ 28ನೇ ಸಭೆಯನ್ನು ಪಂಜ ಗ್ರಾಮದಲ್ಲಿ ತಾ. 31-3-'46ನೇ ಆದಿತ್ಯವಾರ 3 ಘಂಟೆಗೆ ಜರಗಿಸಬೇಕಾಗಿಯೂ ಅಂದು ಕೂಡ ವಾಚಕ ಮಾಡಿಸಬೇಕಾಗಿಯೂ ನಿಶ್ಚಯಿಸಲಾಯಿತು.

ಮೂಲ್ಕಿ,
ತಾ. 17—3—1946.

ಎಮ್. ಆರ್. ಪೂಂಜ,
ಸೆಕ್ರಟರಿ.

ಎ. ಟಿ. ಪೂಂಜ,
ಅಧ್ಯಕ್ಷ.

[illegible] ಸಭೆಯು ಮುಂದಿಟ್ಟು ಮಂಜೂರು ಮಾಡಲ್ಪಟ್ಟು ನಂತರ ಹಳೆಯಂಗಡಿ, ಮೂಲ್ಕಿ ಸಭೆಗಳಲ್ಲಿ ಅನುಮೋದಿಸಲಾದ

ಮೂಲ್ಕಿ ಗ್ರಾಮಾಭಿವೃದ್ಧಿಪರವಾದ ಮುಂದಿನ ಕೆಲಸದ ಯೋಜನೆ.

1-9-45ರಲ್ಲಿ ಮಂಜೂರಾದ ಈ ಕೆಳಗಿನ ನಾಲ್ಕು ನಿರ್ಣಯಗಳನ್ನು ಜಾರಿಗೆ ತರುವ ಪ್ರಯತ್ನದಲ್ಲಿ:—

1. 1945ರಲ್ಲಿ ನಡೆಸಲಿರುವ ಜಿಲ್ಲಾ ಪ್ರದರ್ಶನ.
2. 1946ರಲ್ಲಿಯ ಕೇಂದ್ರ ಪ್ರದರ್ಶನ.
3. ಪ್ರತಿಯೊಂದು ಉಪಕೇಂದ್ರಕ್ಕೆ ಆಟದ ಬಯಲ
4. ಪ್ರತಿ ಗ್ರಾಮಕ್ಕೆ ಒಂದು ಸೇವಕ ದಳ.

ಕುಟುಂಬವು ಮಾದರಿಕುಟುಂಬವಾಗುವಂತೆ ಸಾಧಿಸಲು ಮತ್ತು ಕ್ರಮೇಣ ಪ್ರತಿ ಗ್ರಾಮವು ಮಾದರಿಗ್ರಾಮವಾಗುವಂತೆ ಯೋಜನೆಯ ಕಾರ್ಯವನ್ನು ರೂಪಿಸಲಾಗುವುದು.

ಕುಟುಂಬವು ಈ ಕೆಳಗಿನ ನಾಲ್ಕು ಅತ್ಯಾವಶ್ಯಕ ವಿಷ[illegible]:—

ನಿರ್ಮಲವಾದ ಒಂದು ಮನೆ, ತೋಟ ಮತ್ತು ಬಾವಿ.

ಗೊಬ್ಬರ ಅಥವಾ ಕಸಕಡ್ಡಿಗಳನ್ನು ಹಾಕುವ ಹೊಂಡ.

ಇಡೀ ವರ್ಷ ಒಂದಲ್ಲ ಒಂದು ತರಕಾರಿಯನ್ನು ಮನೆ ಉಪಯೋಗಕ್ಕೆ ಬೆಳೆಸಿಕೊಡುವ ಒಂದು ತರಕಾರಿಗಳ ತೋಟ.

ಸರಾಸರಿ ತಲೆಯೊಂದರ ತಿಂಗಳೊಂದರ 4 ಆಣೆಗಳಷ್ಟಾದರೂ ಸಂಪಾದನೆ ಕೊಡುವ ಯಾವದಾದರೊಂದು ಉಪಕೈಗಾರಿಕೆಯನ್ನು ಕುಟುಂಬದಲ್ಲಿ ಪ್ರತಿಯೊಬ್ಬನೂ ಅನುಸರಿಸುವುದು.

ನೇಯದಾಗಿ ಈ ಕೆಳಗೆ ಕಾಣಿಸಿದ ಅಥವಾ ಇದಕ್ಕೆ ಇನ್ನು ಕೂಡಿಸಬಹುದಾದ ಹೆಚ್ಚಿನ ಆವಶ್ಯಕತೆಗಳ ಪಟ್ಟಿಯಲ್ಲಿ ನಾಲ್ಕು ಷಯಗಳನ್ನು ಸಾಧಿಸುವ ಉದ್ದೇಶ ಇಟ್ಟುಕೊಳ್ಳಬೇಕು:—

ಶಾಲೆಗೆ ಹೋಗುವ ಪ್ರಾಯದ ಎಲ್ಲಾ ಮಕ್ಕಳು ಶಾಲೆಗೆ ಹೋಗಬೇಕ

ಒಂದು ದನ ಅಥವಾ ಎಮ್ಮೆಯನ್ನು ಸಾಕಬೆ

ಸರಳಜೀವನವನ್ನು ಅಭ್ಯಾಸಿಸಬೇಕು.

ಅನಾವಶ್ಯಕ ಮತ್ತು ದುಂದುಗಾರಿಕೆಯ ಖರ್ಚುಗಳನ್ನು ಕಡಿಮೆ ಮಾ

ಎಲ್ಲಾ ಸಾಲಗಳಿಂದ ಬಿಡುಗಡೆ.

ದೊರೆಯುವ ಭೂಮಿಯಲ್ಲೆಲ್ಲಾ ಸಾಗುವಳಿ ಮಾಡುವುದು.

ಪ್ರತಿ ತಿಂಗಳಲ್ಲಿ ಒಂದು ಒಳ್ಳೆಯ ಕೆಲಸಮಾಡುವುದು.

ಪ್ರಾಯಕ್ಕೆ ಬಂದ ಪ್ರತಿಯೊಬ್ಬನು ಉಪಯುಕ್ತ, ಉತ್ಪತ್ತಿದಾಯಕ ಮತ್ತು ನ್ಯಾಯವಾದ ಕಸಬಿನಲ್ಲಿ ನಿರತನಾಗಿರಬೇಕು. ಓದುವುದು, ಬರೆಯುವುದು, ಭಾಷಣಮಾಡುವುದು, ಹಾಡುವುದು, ದೇಹದಾರ್ಢ್ಯ ಬೆಳಸುವುದೇ ಮೊದಲಾದುವನ್ನು ಅಭ್ಯಾಸಿಸುವುದು. ಇದರಿಂದ ಸಮಾಜದ ಪ್ರತಿಯೊಬ್ಬ ಸದಸ್ಯನ ಜ್ಞಾನ, ಸಾಮರ್ಥ್ಯ ಮತ್ತು ಆರೋಗ್ಯ ಇವು ಉತ್ತಮ ವಾಗುತ್ತವೆ.

ಪಕ್ಷ ಕಲಹಗಳು ಮತ್ತು ಕೋರ್ಟು ವ್ಯಾಜ್ಯಗಳನ್ನು ಬಿಡುವುದು.

ಮಿತ ಸಂತತಿ.

ಸಹಕಾರೀ ಸಂಸ್ಥೆಗಳನ್ನು ಬೆಳೆಸುವುದು.

ಅಸ್ಪೃಶ್ಯತಾ ನಿವಾರಣೆಗಾಗಿ ಯತ್ನಿಸುವುದು.

ಹೊಡುವುದಕ್ಕಾಗಿ ಒಂದು ಒಳ್ಳೆಯ ಕೋಣದ ಜೋಡನ್ನು ಸಾಕುವುದು.

ರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾದರೆ:—

ರೈತರ ಕಲ್ಯಾಣದಲ್ಲಿ ಅಭಿರುಚಿಯುಳ್ಳ ಇಬ್ಬರು ಅಥವಾ ಹೆಚ್ಚು ಮಂದಿ ಗೃಹಸ್ಥರನ್ನು 1945ರಲ್ಲಿ ಒಮ್ಮೆ ಮತ್ತು 1946ರಲ್ಲಿ ಒಮ್ಮೆ ಪ್ರತಿ ಗ್ರಾಮವನ್ನು ಸಂದರ್ಶಿಸುವಂತೆ ಕೇಳಿಕೊಳ್ಳುವುದು.

ಕೃಷಿ, ಗುಡಿಕೈಗಾರಿಕೆ ಅಥವಾ ಇನ್ನಾವ ಉಪಯುಕ್ತ ಕಾರ್ಯವನ್ನು ಕೈಕೊಂಡು ಇತರರಿಗೆ ಮಾದರಿಯಾಗುವಂತೆ ನಡೆಸುವವರಿಗೆ ರತ್ನ, ಭೂಷಣ, ಪ್ರವೀಣ, ಚಂದ್ರ, ವಿನೋದ ಇತ್ಯಾದಿ ಬಿರುದುಗಳನ್ನು ಕೊಡುವ ಏರ್ಪಾಡು ಮಾಡುವುದು.

ಸಾಗುವಳಿ ಮಾಡಲ್ಪಟ್ಟ ಭೂಮಿಯ ಪ್ರತಿ ಒಂದು ಎಕ್ರೆಗೆ ಒಂದು ಸೇರು ಅಕ್ಕಿಯಂತೆ ಒಕ್ಕಲು ಮತ್ತು ಧನಿಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ವಂತಿಗೆ ವಸೂಲುಮಾಡುವುದು. ಪ್ರತಿ ಗ್ರಾಮದಲ್ಲಿ ಸಂಗ್ರಹವಾದುದರಲ್ಲಿ $\frac{7}{8}$ನೇ ಪಾಲನ್ನು ಆ ಗ್ರಾಮದ ಮೂರು ಉತ್ತಮವಾದ ಮಾದರಿಕುಟುಂಬಗಳಿಗೆ 4: 2: 1 ಈ ದಾಮಾಶೆಯ ಮೌಲ್ಯದ ಮೂರು ಬಹುಮಾನಗಳನ್ನು ಹಂಚಲು ಉಪಯೋಗಿಸಬೇಕು. ಉಳಿದ $\frac{1}{8}$ ಅಂಶವನ್ನು ಎಲ್ಲಾ ಗ್ರಾಮಗಳಿಂದ ಸಂಗ್ರಹಿಸಿ ಖರ್ಚು ಕಳೆದು ಉಳಿದುದನ್ನು 38 ಗ್ರಾಮಗಳಲ್ಲಿ ಉತ್ತಮ ಮಾದರಿ ಎನ್ನಿಸುವ ಬಹುಮಾನಗಳು ಮತ್ತು ಎಲ್ಲಾ ಗ್ರಾಮಗಳ ಕುಟುಂಬಕ್ಕೆ ಬಹುಮಾನ ಕೊಡಲು ಉಪಯೋಗಿಸಬೇಕು. ಪ್ರತಿ ಗ್ರಾಮದ ಮೊದಲ ಎರಡು ಬಹುಮಾನಗಳು ಮತ್ತು ಎಲ್ಲಾ ಗ್ರಾಮಗಳ ಒಂದು ಬಹುಮಾನವನ್ನು ಇವನ್ನು ರೈತರಿಗೆ ಮಾತ್ರ ಕೊಡಬೇಕು. ಪ್ರತಿ ಗ್ರಾಮದ ಮೂರನೆ ಬಹುಮಾನವನ್ನು ರೈತ ಹಾಗೂ ರೈತೇತರ ಎಂಬ ಭೇದವಿಲ್ಲದೆ ಕೊಡಬಹುದು.

ಪ್ರತಿಯೊಂದು ಬಗೆಯ ಕಾರ್ಯಕ್ಕೆ ಪಂಚಾಯತು ಬೋರ್ಡಿನಿಂದ ಅಥವಾ ಇತರ ವಿದಿತ ದಸ್ತಾವೇಜು ಸಾಧನಗಳು ಪ್ರಯುಕ್ತಿಸಬೇಕು.

ವಿವರಗಳು:—

(1) ಇದು ಆಯಾ ಕುಟುಂಬದ ಪರಿಸ್ಥಿತಿ ಮತ್ತು ಉತ್ಪತ್ತಿಯನ್ನು ನೋಡಿ ಪರೀಕ್ಷಿಸಲಾಗುವುದು. ಅದರ ಪ್ರತಿ ಜಾಗೆ ಸುತ್ತ ಗೋಡೆ ಇದ್ದು ಮಳೆನೀರು ಇದರಲ್ಲಿ ಹರಿಯಬಾರದು ಮತ್ತು ಸೊಪ್ಪು ಇತ್ಯಾದಿ ಕಸವೇಳಬಾರದು. ಕೋಟಿದಲ್ಲಿ ಕೊಳಕು ನೀರು ನಿಲ್ಲಬಾರದು.

(2) ಗೊಬ್ಬರದ ಹೊಂಡಕ್ಕೆ ಮಾಡು ಮಾಡಬೇಕು. ಕಸಕಡ್ಡಿಗಳ ಹೊಂಡದಲ್ಲಿ ಮುಂದಿನ ವರ್ಷ ಸಸಿ ನೆಡಲು ಇದನ್ನು ಸಾಧ್ಯವಿದ್ದರೆ ಉಪಯೋಗಿಸಬೇಕು.

(3) ಉಪಕೈಗಾರಿಕೆ ಈ ಕೆಳಗಿನವುಗಳಲ್ಲಿ ಒಂದು ಆಗಬಹುದು. ತರಕಾರಿ ಮತ್ತು ಹಣ್ಣುಹಂಪಲು ಕೋಟಿಗಾರಿಕೆ, ಜೇನು ವ್ಯವಸಾಯ, ಕೋಳಿ ಸಾಕುವುದು, ಜಾನುವಾರು ಸಾಕಿ ಹಾಲು ತುಪ್ಪ ತಯಾರಿ, ಹಂದಿ ಸಾಕುವುದು, ನೂಲುವುದು, ನೇಯುವುದು. ಕತ್ತದ ಹಾಗೂ ಸಂಬಂಧಪಟ್ಟ ಕೈಗಾರಿಕೆಗಳು, ಚಾಪೆ ಹೆಣೆಯುವುದು, ಹಿಡಿಸೂಡಿ ಮಾಡುವುದು, ಕುಂಬಾರವೃತ್ತಿ, ಮರದ ಕೆಲಸ ಇತ್ಯಾದಿ.

II. (7) ಸಾರ್ವಜನಿಕ ಹಿತದ ಒಂದು ಒಳ್ಳೆಯ ಕೆಲಸದಲ್ಲಿ ಈ ಗ್ರಾಮೋನ್ನತಿಕಾರ್ಯಕ್ಕೆ ಒಬ್ಬ ಶಿಕ್ಷಕನನ್ನು ನೇಮಿಸುವುದು ಕೂಡ ಎಣಿಸಲಾಗುತ್ತದೆ.

(8) ಉಪ ಕೈಗಾರಿಕೆಯನ್ನು I ರಲ್ಲಿ ಅತ್ಯಾವಶ್ಯಕ ವಿಷಯವಾಗಿ ಇಡಲಾಗಿದೆ. ಕುಟುಂಬದ ಪ್ರತಿಯೊಬ್ಬನೂ ಉಪಯುಕ್ತ ಕಾರ್ಯದಲ್ಲಿ ನಿರತನಾಗಿರಬೇಕೆಂಬುದೇ ಇದರ ಅಭಿಪ್ರಾಯವಿರುತ್ತದೆ.

(9) ಪ್ರಾಯಸ್ಥರ ಹಾಗೂ ಸಾರ್ವಜನಿಕ ಓದುಬರಹ ಪ್ರಚಾರವೇ ಉದ್ದೇಶ.

(10) ಕಸಬು ಮಾಡುತ್ತ ಇರುವುದೇ ಪಕ್ಷಕಲಹ ಮತ್ತು ಕೋರ್ಟು ವ್ಯಾಜ್ಯಗಳಿಂದ ದೂರ ಹೋಗಲು ದಾರಿ. ಇದಕ್ಕೆ ಪ್ರತ್ಯೇಕ ಪ್ರಯತ್ನಪಟ್ಟಲ್ಲಿ ಇನ್ನೂ ಸಹಾಯವಾಗುತ್ತದೆ.

(11) ಇದು ಎಲ್ಲರಿಗೂ ಮೆಚ್ಚಲಿಕ್ಕಿಲ್ಲ—ಒಂದು ಸೂಚನೆಯಾಗಿ ಮಾತ್ರ ಕೊಡಲಾಗಿದೆ.

III. (1) ಸಾರ್ವಜನಿಕ ಹಿತಾಕಾಂಕ್ಷಿಗಳಾದ ಗೃಹಸ್ಥರು ಅವಶ್ಯವುಳ್ಳ ತೊಂದರೆಗೆ ಸಿದ್ಧರಿದ್ದವರು ಯಾವಾಗಲೂ ದೊರೆಯುತ್ತಾರೆ. ಇವರ ಸಂದರ್ಶನದಿಂದ ಉತ್ತೇಜನ ಸಿಕ್ಕಿ ಒಬ್ಬರಿಂದೊಬ್ಬರು ಮಿಗಿಲೆನಿಸಲು ಉತ್ಸಾಹ ದೊರೆಯುತ್ತದೆ.

(2) ಒಳ್ಳೆಯ ಕೆಲಸವನ್ನು ಉತ್ತಮವಾಗಿ ಮಾಡಿದ ಬಗ್ಗೆ ಬಹುಮಾನಿಸಲು ಇದು ಅತೀ ಸುಲಭ ಹಾಗೂ ಖರ್ಚಿಲ್ಲದ ದಾರಿ.

(3) ಅಂಚೆ ರೋಗಗಳು ಬಂದಾಗ ಗ್ರಾಮಗಳಲ್ಲಿ ಇಂಥ ವಂತಿಗೆ ಸಂಗ್ರಹಿಸುವುದು ಸಾಮಾನ್ಯ—ಇಲ್ಲಿ ಒಂದು ಒಳ್ಳೆಯ ಉದ್ದೇಶಕ್ಕಾಗಿ ಸಂಗ್ರಹಿಸಲು ಸೂಚಿಸಿದ್ದು-ಇದಕ್ಕೆ ಹೆಚ್ಚಿನ ಕಷ್ಟವಾಗುವಂತಿಲ್ಲ.

ಎಮ್. ಆರ್. ಪೂಂಜ,

ಕಾರ್ಯದರ್ಶಿ.

1945ನೇ ಫೆಬ್ರವರಿಯಿಂದ ಮೂಲ್ಕಿ ಸರ್ಕಲಿನಲ್ಲಿ ನಡೆಸಿದ ಗಾಢವಾದ ಗ್ರಾಮ ಸಂಘಟನಾ ಕಾರ್ಯದ ಸಂಕ್ಷಿಪ್ತ ವರದಿ.

C. N.
15 JAN. 1947
MADRAS.

(ತಾ. 1-9-1946ನೇ ದಿನ ನಡೆದ ಎರಡನೇ ಸಸಿ ನೆಡುವ ಸಮಾರಂಭದ ಸಂದರ್ಭದಲ್ಲಿ ಒಪ್ಪಿಸಿದ್ದು)

ಮೂಲ ಮತ್ತು ಸಂಘಟನೆ.

1. ಬಂಟರ ಯಾನೆ ನಾಡವರ ಸಂಘವು ಗ್ರಾಮ ಸುಧಾರಣೆಯ ಕಾರ್ಯವನ್ನು ಕೈಕೊಳ್ಳಬೇಕೆಂದು, ಸಂಘದ ಕೆಲವು ಸದಸ್ಯರಲ್ಲಿದ್ದ ಉತ್ತಮ ಅಭಿಪ್ರಾಯದಿಂದ ಗ್ರಾಮೋನ್ನತಿ ಕಮಿಟಿಯು ಅಸ್ತಿತ್ವಕ್ಕೆ ಬಂದಿತು. 1945ನೇ ಫೆಬ್ರವರಿ ತಾ. 25ರಲ್ಲಿ ಕಾರ್ನಾಡು ಬಿ. ಇ. ಎಮ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸೇರಿದ ರೈತರ ಸಭೆಯಲ್ಲಿ ಮೂಲ್ಕಿ ಸುತ್ತಲಿನ 38 ಗ್ರಾಮಗಳಲ್ಲಿ ಗಾಢರೀತಿಯ ಗ್ರಾಮೋನ್ನತಿ ಕಾರ್ಯ ಆರಂಭಿಸಬೇಕೆಂದು ನಿರ್ಣಯವಾದಾಗ ಈ ಕಾರ್ಯವು ಈಗಿನ ಸ್ವರೂಪವನ್ನು ತಾಳಿತು. ಕಾರ್ಯವನ್ನು ಉತ್ತಮವಾಗಿ ಹೇಗೆ ಸಾಧಿಸಬಹುದೆಂದು ಸಭೆಯಲ್ಲಿ ಚರ್ಚೆಯಾಗಿ ಕಾರ್ಯಕ್ರಮವನ್ನು ರೂಪಿಸಲು ಒಂದು ಕೇಂದ್ರ ಕಮಿಟಿಯನ್ನು ನೇಮಿಸಲಾಯಿತು. ಅನುಕೂಲತೆಗಾಗಿ ಇಡೀ ಪ್ರದೇಶವನ್ನು ಗ್ರಾಮಗಳ ಐದು ಗುಂಪುಗಳಾಗಿ ವಿಭಾಗಿಸಿ ಅಲ್ಲಲ್ಲಿ ಕಾರ್ಯಕ್ರಮವನ್ನು ಜಾರಿಗೆ ತರಲು ಸ್ಥಳೀಕ ಕಮಿಟಿಗಳನ್ನು ನೇಮಿಸಲು ನಿರ್ಣಯವಾಯಿತು. ಕೇಂದ್ರ ಹಾಗೂ ಸ್ಥಳೀಕ ಕಮಿಟಿಗಳಿಗೆ ಚುನಾಯಿತರಾದ ಸದಸ್ಯರು, ಕೆಲವು ಬದಲಾವಣೆಗಳು ಮಾತ್ರವಿದ್ದು, ಈಗಲೂ ಕೆಲಸ ಮಾಡುತ್ತಿದ್ದಾರೆ. (ಪರಿಶಿಷ್ಟ 1)

ಪ್ರದೇಶದ ಪರಿಶೀಲನ.

2. ಈ ಗ್ರಾಮೋನ್ನತಿ ಕಾರ್ಯ ನಡೆಸಲಾಗುವ ಪ್ರದೇಶದ ಸಂಕ್ಷಿಪ್ತ ಪರಿಶೀಲನ ಮಾಡಿ ಮುಂದೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು

ಸಾಧಿಸಲು ಇಲ್ಲಿ ಎಷ್ಟರ ಮಟ್ಟಿನ ಅನುಕೂಲತೆಗಳಿವೆಯೆಂದು ಸಾಧಿಸುವುದು ಇಲ್ಲಿ ಅನುಚಿತವಾಗಲಾರದು. 38 ಗ್ರಾಮಗಳಲ್ಲಿ 34 ಮೂಲ್ಕಿ ರೆವಿನ್ಯೂ ಫಿರ್ಕಾಕ್ಕೆ ಸೇರಿದವುಗಳಿದ್ದು ಮಂಗಳೂರು ತಾಲೂಕಿಗೆ ಸೇರಿವೆ. ಈ ಪ್ರದೇಶದಲ್ಲಿ ಹಿಂದೆ ಜೈನ ಅರಸರು ಆಳುತ್ತಿದ್ದು ಇದಕ್ಕೆ "ಶಾಮಂತರ ಸೀಮೆ" ಎಂಬ ಹೆಸರಿದೆ. ಉಳಿದ ನಾಲ್ಕು ಗ್ರಾಮಗಳು ಉಡುಪಿ ತಾಲೂಕಿಗೆ ಸೇರಿದವು. ಇವೆಲ್ಲ ಗ್ರಾಮಗಳು ಒಮ್ಮುಖ ಪ್ರದೇಶವಾಗಿವೆ. ಈ ಪ್ರದೇಶದಲ್ಲಿ ಎರಡು ಸಾಧಾರಣ ದೊಡ್ಡ ನದಿಗಳು ಹರಿಯುತ್ತಿವೆ. 24 ಗ್ರಾಮಗಳು ಈ ನದಿಗಳ ದಡಗಳಲ್ಲಿವೆ. ಮಾತ್ರವಲ್ಲ, ಕೆಲವೇ ಗ್ರಾಮಗಳ ವಿನಾ ಉಳಿದವಕ್ಕೆಲ್ಲ ಈ ಹೊಳೆಗಳ ಶಾಖೆಗಳಿಂದ ಪ್ರಯೋಜನವಾಗುತ್ತಿದೆ. ಸಾಗುವಳ್ಳಿ ನೀರಾವರಿಗೆ ಇವು ತುಂಬಾ ಉಪಯುಕ್ತವಿರುತ್ತವೆ. ಪ್ರತಿವರ್ಷ ತಾತ್ಕಾಲಿಕ ಕಟ್ಟೆಗಳನ್ನು ಹಾಕಿ ಗ್ರಾಮಸ್ಥರು ಇವುಗಳ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಸರಕಾರದವರು ಕೆಲವು ಚಿಕ್ಕ ನೀರಾವರಿ ಕೆಲಸಗಳನ್ನು ಆರಂಭಿಸಿದರೆ ಇಲ್ಲಿಯ ಜನರ ಸಂಪತ್ತನ್ನು ಹೆಚ್ಚಿಸಲು ಇನ್ನೆಷ್ಟೊ ಸಹಾಯಮಾಡಬಹುದು.

3. ಈ ಪ್ರದೇಶದಲ್ಲಿ ಮೂಲ್ಕಿಯು ಅತೀ ದೊಡ್ಡ ಪಟ್ಟಣ. ಇದು ಒಮ್ಮೆ ಒಳ್ಳೆಯ ವ್ಯಾಪಾರಕೇಂದ್ರವಿತ್ತು. ಮಲಬಾರು, ಕೊಚ್ಚಿ, ಗೋವೆ ಮತ್ತು ಕೆಲವು ಬಾರಿ ಹಿಂದುಸ್ಥಾನದ ಹೊರ ಊರುಗಳಿಗೆ ಕೂಡಾ ಇಲ್ಲಿಂದ ಅಕ್ಕಿ ಮತ್ತಿತರ ಮ್ಹಾಲುಗಳು ರಫ್ತಾಗುತ್ತಿದ್ದವು. ಒಳಭಾಗದ ಗ್ರಾಮಗಳಿಗೆ ಹೋಗಿ ಬರಲು ಇಲ್ಲಿಯ ಹೊಳೆಗಳು ಸುಲಭದ ರಹದಾರಿಯಿದ್ದವು. ಮಾತ್ರವಲ್ಲ ಈಗಲೂ ಉಪಯುಕ್ತ ದಾರಿಗಳಾಗಿವೆ. ಇದೊಂದು ಚಿಕ್ಕ ಬಂದರವಿದ್ದು ಯುದ್ಧಕ್ಕೆ ಪೂರ್ವದಲ್ಲಿ ಇಲ್ಲಿ ಕರಾವಳಿಯಲ್ಲಿ ಚಲಾವಣೆಯಲ್ಲಿದ್ದ ಸ್ಟೀಮರು ನಿಲ್ಲುತಿತ್ತು. ಮೋಟರ್ ಚಲಾವಣೆ ದೃಷ್ಟಿಯಿಂದಲೂ ಈ ಪಟ್ಟಣವು ಒಂದು ಮುಖ್ಯ ಕೇಂದ್ರವಿರುತ್ತದೆ. ಉಡುಪಿ, ಮಂಗಳೂರು ಮತ್ತು ಕಾರ್ಕಳ ತಾಲೂಕು ಕೇಂದ್ರಗಳಿಂದಾಗುವ ತ್ರಿಕೋಣದೊಳಗೆ ಈ ಗ್ರಾಮಗಳಿರುವುದರಿಂದ ಇಲ್ಲಿ ಈ ಮುಖ್ಯ ಪಟ್ಟಣಗಳಿಗೆ ಹೋಗುವ ಮುಖ್ಯ ರಸ್ತೆಗಳಿದ್ದು ಈ ಗ್ರಾಮಗಳಿಗೆ ಉಪಯುಕ್ತವಾಗುತ್ತಿವೆ.

4. ಗ್ರಾಮಸ್ಥರ ಮುಖ್ಯ ಕಸಬು ಸಾಗುವಳ್ಳಿ. ಹಲವರು ತಮ್ಮ ಸ್ವಂತ ಚಿಕ್ಕ ಭೂಮಿಗಳನ್ನು ಕೃಷಿ ಮಾಡುತ್ತಾರೆ. ಕೆಲವರು ಇತರರ ಭೂಮಿಗಳನ್ನು ಒಕ್ಕಲುಗಳಾಗಿ ಸಾಗುಮಾಡುತ್ತಾರೆ. ಈ ಭೂಮಿಗಳ ಮ್ಹಾಲಿಕರು ಹೆಚ್ಚಾಗಿ ಪರವೂರುಗಳಲ್ಲಿರುತ್ತಾರೆ. ಅಥವಾ ದೇವಸ್ಥಾನಗಳು,

ಮಠಗಳು, ಇಗರ್ಜಿಗಳು ಇತ್ಯಾದಿಗಳ ಭೂಮಿಗಳೂ ಇರುತ್ತವೆ. ಭೂಮಿಗಳನ್ನೆಲ್ಲ ಸುಧಾರಣೆ ಮಾಡಲು ಸಾಕಷ್ಟು ಆಸ್ಪದವಿದೆ. ಹೆಚ್ಚಿನ ಹಾಗೂ ಉತ್ತಮ ತರದ ನೀರಾವರಿ ಅನುಕೂಲತೆಗಳನ್ನು ಒದಗಿಸುವುದು ಮತ್ತು ರೈತರು ಕೃಷಿಯ ಹೊಸ ಕ್ರಮಗಳನ್ನು ಕೈಕೊಳ್ಳುವಂತೆ ಪ್ರೋತ್ಸಾಹಿಸುವುದು, ಇವುಗಳ ಮೂಲಕ ಸುಧಾರಣೆ ಸಾಧಿಸಬಹುದು. ಇಲ್ಲಿಯ ಭೂಮಿಯು ಹೆಚ್ಚು ಫಲವತ್ತಾದುದಲ್ಲ. ನಮ್ಮ ತಾಲೂಕಿನ ಬಂಟ್ವಾಳ ಫಿರ್ಕಾದಲ್ಲಿ 31 ಗ್ರಾಮಗಳಿದ್ದು 24,000 ಎಕ್ರೆ ಭೂಮಿ ಇರುತ್ತದೆ. ಇಲ್ಲಿಂದ 85,000 ಮುಡಿ ಅಕ್ಕಿ ಸಂಗ್ರಹ ಮಾಡಲಾಯಿತು. ಮೂಲ್ಕಿ ಫಿರ್ಕಾದಲ್ಲಿ 34 ಗ್ರಾಮಗಳಲ್ಲಿ 28,100 ಎಕ್ರೆ ಭೂಮಿ ಇದ್ದರೂ ಈ ವರ್ಷ 52,000 ಮುಡಿ ಅಕ್ಕಿ ಸಂಗ್ರಹಮಾಡಲಾಯಿತು. ಹಿಂದಿನ ವರ್ಷ 37,300 ಮುಡಿ ಮಾತ್ರ ಸಂಗ್ರಹಿಸಲ್ಪಟ್ಟಿತು. ಇಲ್ಲಿ ಕಬ್ಬು, ಶುಂಠಿ, ಗೆಣಸು ಮತ್ತು ಸ್ವಲ್ಪ ಮಟ್ಟಿಗೆ ಮೆಣಸು ಕೂಡಾ ಬೆಳೆಸುತ್ತಾರೆ. ನಮ್ಮ ಮುಖ್ಯ ಕೆಲಸವನ್ನು ಕೃಷಿ ವಿಷಯದ ರಾಯಲ್ ಕಮಿಷನಿನವರ ಮಾತುಗಳಲ್ಲಿ ಹೇಳುವುದಾದರೆ ತಮ್ಮ ಭೂಮಿಗಳಿಂದ ಆದಷ್ಟು ಹೆಚ್ಚಿನ ಪ್ರಯೋಜನ ಹೊಂದಲು ರೈತರಲ್ಲಿ ಉತ್ಸಾಹ ಹುಟ್ಟಿಸುವುದು ಮತ್ತು ಅವರು ಅದನ್ನು ಸಾಧಿಸುವಂತೆ ಅವರಿಗೆ ಸಹಾಯ ಮಾಡುವುದು ಎನ್ನಬಹುದು.

5. ಇಲ್ಲಿ ಕೈಮಗ್ಗಗಳ ಕೈಗಾರಿಕೆಯು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇದರ ಉಪಯೋಗಕ್ಕಾಗಿ ಒಂದು ನೇಕಾರರ ಸಹಕಾರೀ ಸಂಘವು ಕೆಲಸ ಮಾಡುತ್ತಿದೆ. ಈ ಕೈಗಾರಿಕೆಯು ಇಲ್ಲಿ ಒಳ್ಳೆಯ ಸ್ಥಿತಿಯಲ್ಲಿದೆ. ಇದನ್ನು ಇನ್ನಷ್ಟು ಬಲಪಡಿಸಿದರೆ ಇನ್ನೂ ಹೆಚ್ಚಿನ ಕುಟುಂಬಗಳಿಗೆ ಪ್ರಯೋಜನ ಸಿಕ್ಕುವಂತೆ ಮಾಡಬಹುದು. ನೂಲುವುದು ಮತ್ತು ನೇಯುವುದನ್ನು ಆಧುನಿಕ ಹಾಗೂ ಮಾದರಿ ಕ್ರಮದಲ್ಲಿ ಒಂದು ಗ್ರಾಮ ಉದ್ಯೋಗವಾಗಿ ಶ್ರೀ ಕರಿಯಣ್ಣ ಶೆಟ್ಟರ ಆಡಳಿತೆಯಲ್ಲಿ ಪಡುಬಿದ್ರೆ ಖಾದಿ ವಸ್ತ್ರಾಲಯದವರು ನಡೆಸುತ್ತಿದ್ದಾರೆ. ಯೋಗ್ಯ ಪ್ರೋತ್ಸಾಹವಿದ್ದರೆ ಇಂಥ ವ್ಯವಸ್ಥೆಗಳನ್ನು ಪ್ರತಿಯೊಂದು ಗ್ರಾಮದಲ್ಲಿಯೂ ಬೆಳೆಸಬಹುದು. ಮೀನು ಮತ್ತು ಮೀನಿನ ಎಣ್ಣೆ ಕೈಗಾರಿಕೆಯೂ ಇಲ್ಲಿರುತ್ತದೆ. ಜೇನುನೊಣ ಸಾಕುವುದು, ಹಣ್ಣುಹಂಪಲು ಬೆಳೆಸುವುದು, ಬೆಲ್ಲ ತಯಾರಿ, ಬಲೆ, ಚಾಪೆ ಹಾಗೂ ಬುಟ್ಟಿ ಹೆಣೆಯುವುದು, ಕತ್ತದ ಕೆಲಸ ಇವು ಚಿಕ್ಕ ಪ್ರಮಾಣದಲ್ಲಿ ನಡೆಯುತ್ತಿರುವ ಇತರ ಗ್ರಾಮ ಉದ್ಯೋಗಗಳು. ಕತ್ತದ ಕೆಲಸವನ್ನು ಬೆಳೆಸಲು ಒಳ್ಳೆಯ ಅನುಕೂಲತೆಗಳಿವೆ. ಗ್ರಾಮೋನ್ನತಿ ಕಮಿಟಿಯ ವಿನಂತಿ ಮೇರೆಗೆ ಕೈಗಾರಿಕೆ

ರಂಭದಲ್ಲಿ ಸ್ವಲ್ಪ ಸಹಾಯ ಹಾಗೂ ಅಗತ್ಯವುಳ್ಳ ಮಾಹಿತಿ ಒದಗಿಸುವುದ
ಂದ, ಹಾಗೂ ಉತ್ಪತ್ತಿಯಾಗುವ ಮಾಲುಗಳ ವಿಕ್ರಯಕ್ಕೆ ಉತ್ತಮ ತರದ
ಹಕಾರೀ ವ್ಯವಸ್ಥೆ ಇವುಗಳಿಂದ ಈಗಿರುವ ಮತ್ತು ಇತರ ಗುಡಿಕೈಗಾರಿಕೆ
ಳನ್ನು ಕ್ರಮೇಣ ಅಭಿವೃದ್ಧಿಗೊಳಿಸಿ ಗ್ರಾಮಸ್ಥರ ಜೀವನೋಪಾಯವನ್ನು
ಉತ್ತಮಗೊಳಿಸಬಹುದು.

6. ಈ ಪ್ರದೇಶದಲ್ಲಿ ಹುಡುಗರ ಹೈಸ್ಕೂಲುಗಳು ಎರಡು, ಹುಡು
ಗರ ಹೈಸ್ಕೂಲುಗಳು ಎರಡು, ಹಾಯರ್ ಎಲಿಮೆಂಟರಿ ಶಾಲೆಗಳು ಹತ
ತ್ತು ಲೋವರ್ ಎಲಿಮೆಂಟರಿ ಶಾಲೆಗಳು 44 ಇರುತ್ತವೆ. ಇವುಗ
ಳಿಕೆ ಹರಿಜನ ಮಕ್ಕಳ ಬಗ್ಗೆ ಲೇಬರ್ ಇಲಾಖೆಯವರು ನಡೆಸುವ ಶಾ
ಳು 2, ಫಿಶರೀಸ್ ಖಾತೆಯವರು ನಡೆಸುವ ಒಂದು ಹಾಯರ್ ಎಲಿಮೆಂಟ
ರಿ ಶಾಲೆ, ಬಾಸೆಲ್ ಮಿಶನಿನವರು ನಡೆಸುವ ಹುಡುಗಿಯರ ಅನಾಥ ಶಾ
ಲೆ ಮತ್ತು ಪ್ರಾಯಸ್ಥರಿಗಾಗಿ ನಡೆಸುವ ಒಂದು ರಾತ್ರಿ ಶಾಲೆ ಇವನ್ನು ಪ್ರತ್ಯೇ
ಕವಾಗಿ ಹೇಳಬಹುದು.

7. ಮೂಲ್ಕಿಯಲ್ಲಿ ಒಂದು ಲೋಕಲ್‌ಫಂಡ್ ಆಸ್ಪತ್ರೆ ಮತ್ತು
ಲಿಮಾರಿನಲ್ಲಿ ಒಂದು ರೂರಲ್ ಡಿಸ್ಪೆನ್ಸರಿಗಳಿವೆ. ಇವಲ್ಲದೆ ಹಳೆಯಂಗಡಿ
ನ್ನಿಗೋಳಿ ಮತ್ತು ಪಡುಬಿದ್ರೆಗಳಲ್ಲಿ ಎಲ್ಲೋಪೆಥಿಕ್ ಹಾಗೂ ಆಯ
ರ್ವೇದ ಕ್ರಮಗಳ ಡಾಕ್ಟರರೂ, ವೈದ್ಯರೂ ಇದ್ದಾರೆ. ಡಿಸ್ಟ್ರಿಕ್ಟ್ ಬೋರ್ಡಿ
ನವರು ಮೂಲ್ಕಿಯಲ್ಲಿ ಮತ್ತು ಪಡುಬಿದ್ರಿಯಲ್ಲಿ ಒಟ್ಟಿಗೆ ಇಬ್ಬರು ಸೂಲಗಿ
ತಿರನ್ನಿಟ್ಟಿದ್ದಾರೆ. ಈಗ ಈ ಪ್ರದೇಶಕ್ಕಿರುವ ವೈದ್ಯಕೀಯ ಸಹಾಯ
ಸಾಲದು. ಆದರೆ ಅದನ್ನು ಎಲ್ಲರಿಗೂ ಸಿಕ್ಕುವಂತೆ ವ್ಯವಸ್ಥೆಗೊಳಿಸಲು ಇ
ನಾಕಷ್ಟು ಅನುಕೂಲತೆಗಳಿವೆ.

8. 38 ಗ್ರಾಮಗಳ ಪೈಕಿ 36 ಗ್ರಾಮಗಳನ್ನಾವರಿಸುವ ಹದಿನಾಲ್
ಕು ಪಂಚಾಯತು ಬೋರ್ಡುಗಳಿವೆ. ಒಂದು ಜೀವಂತ ಪಂಚಾಯ
ತ್ ಬೋರ್ಡು ಗ್ರಾಮಜೀವನವನ್ನು ಸುಗಮಗೊಳಿಸುವುದರಲ್ಲಿ ತುಂಬಾ ಕೆಲ
ಸ ಮಾಡಬಲ್ಲುದು. ಪಂಚಾಯತು ಬೋರ್ಡುಗಳನ್ನು ಸ್ಥಾಪಿಸಿದ ಕಾನೂ
ನ್ರಕಾರದ ಕಾರ್ಯಗಳನ್ನು ಮಾಡುವುದು ಮಾತ್ರವಲ್ಲ, ಗ್ರಾಮಗಳು ಸ್ವಾ
ವಲಂಬಿಯಾಗುವಂತೆ ಇವುಗಳ ಮೂಲಕ ಸಾಧಿಸಬಹುದು. ಗ್ರಾಮೋನ್ನ
ತಿ ಕಾರ್ಯವೆಲ್ಲವೂ ಸ್ವಾವಲಂಬನ ತತ್ವದ ಮೇಲೆಯೇ ಸಾಧಿಸಲ್ಪಡತಕ್ಕದ
ಗ್ರಾಮೋನ್ನತಿ ಕಾರ್ಯದಲ್ಲಿ ನಿಜವಾಗಿ ಪ್ರಯೋಜನಕಾರಿಯಾಗಬ

ಇನ್ನೊಂದು ಬಗೆಯ ಸಂಸ್ಥೆಗಳೆಂದರೆ ಸಹಕಾರೀ ಸಂಘಗಳು. ಈ ಪ್ರದೇಶ ದಲ್ಲಿ 18 ಸಹಕಾರೀ ಸಂಘಗಳೂ, 2 ಸಹಕಾರೀ ಸ್ಟೋರುಗಳೂ ಒಂದಕ್ಕೆ 3 ಶಾಖೆಗಳೂ 3 ಡಿಪೋಗಳೂ ಮತ್ತು ಒಂದು ನೇಕಾರರ ಸಹಕಾರೀ ಸಂಘವೂ ಇರುತ್ತದೆ. ಸಹಕಾರವೆಂದರೆ ಸ್ವಾವಲಂಬನ ಮಾತ್ರವಲ್ಲ ಪರಸ್ಪರ ಸಹಾ ಯ. ಈ ಗ್ರಾಮೋನ್ನತಿಕಾರ್ಯ ಕಮಿಟಿಯವರ ಕಾರ್ಯಕ್ರಮದಲ್ಲಿ ಇನ್ನು ಹೆಚ್ಚಿನ ಸಹಕಾರೀ ಸಂಸ್ಥೆಗಳ ಸ್ಥಾಪನೆಯು ಒಂದು ಮುಖ್ಯ ವಿಚಾರ ವಿರುತ್ತದೆ. ಇಲ್ಲಿ ಕೆಲವು ಜೈಂಟ್ ಸ್ಟಾಕ್ ಕಂಪೆನಿಗಳೂ ಇವೆ. ಧಾರ್ಮಿಕ ಮತ್ತು ಧಾರ್ಮಿಕ ರೀತಿಯ ದೇವಸ್ಥಾನಗಳು, ಇಗರ್ಜಿಗಳು, ಮಶೀದಿಗಳು, ಸಮಾಜಗಳು ಇತ್ಯಾದಿ ಸಂಸ್ಥೆಗಳೂ ಇವೆ. ಇವುಗಳಲ್ಲಿ ಕೆಲವು ಇಡೀ ಜಿಲ್ಲೆ ಯಲ್ಲಿ ಪ್ರಸಿದ್ಧವಿದ್ದು ಇವಕ್ಕೆ ತುಂಬಾ ಉಂಬಳಿಗಳೂ ಇವೆ. ಹಿಂದುಳಿದ ಜಾತಿಗಳೆನ್ನಿಸುವ ಬಿಲ್ಲವರು, ಮೊಗವೀರರು ಮತ್ತು ಹರಿಜನರು ತಮ್ಮ ಸಮಾಜಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಇವು ಇತ್ತೀಚೆಗೆ ವ್ಯವಸ್ಥೆಗೊಂಡವು ಗಳೆಂದರೂ ಉತ್ತಮವಾಗಿ ಸಾಮಾಜಿಕ ಸೇವೆ ಸಲ್ಲಿಸಿ ದೃಢಮನಸ್ಸಿನ ಸ್ವಾವ ಲಂಬನವು ಏನನ್ನು ಸಾಧಿಸಬಲ್ಲದೆಂಬುದಕ್ಕೆ ಉದಾಹರಣೆಗಳಾಗಿವೆ. ಇವೆಲ್ಲ ಸಂಸ್ಥೆಗಳನ್ನು ಒಟ್ಟು ಸೇರಿಸಿ ಗ್ರಾಮಜೀವನವನ್ನು ಸುಧಾರಿಸಿ ಪರಸ್ಪರ ಸ್ಥಾಯಿ ಅಭಿವೃದ್ಧಿಯನ್ನು ಹೇಗೆ ತಂದೊಡ್ಡಬಹುದೆಂದು ಚೆನ್ನಾಗಿ ಯೋಚಿಸಹತ್ತುವಂತೆ ಮಾಡಬೇಕಾಗಿದೆ.

ನಮ್ಮ ಕಾರ್ಯಕ್ರಮ.

9. ಆರ್ಥಿಕದೃಷ್ಟಿ, ಆರೋಗ್ಯದೃಷ್ಟಿ ಮತ್ತು ಸಾಮಾಜಿಕದೃಷ್ಟಿಯ ಸರ್ವತೋಮುಖ ಗ್ರಾಮ ಜೀವನ ಪ್ರಮಾಣವನ್ನು ಉನ್ನತಿಗೊಳಿಸುವುದು. ಒಂದೇ ಮಾತಿನಲ್ಲಿ ಉತ್ತಮ ಗೃಹಗಳು, ಉತ್ತಮ ಜೀವನ ಮತ್ತು ಉತ್ತಮ ಜೀವನೋಪಾಯ ಇವು ಕಮಿಟಿಯ ಉದ್ದೇಶ. ನಾವು ಗ್ರಾಮಸ್ಥರ ಮುಂದಿಟ್ಟ ಸರಳ ಕಾರ್ಯಕ್ರಮವನ್ನು (ಪರಿಶಿಷ್ಟ 2) ಅನುಸರಿಸಿದರೆ, ತಾನಾಗಿ ಸಾಧಿಸಲ್ಪ ಡುವ ಉತ್ತಮ ಜೀವನ ಪ್ರಮಾಣವನ್ನು ಪಡೆಯಲು ಆಗತ್ಯವುಳ್ಳ ಸ್ವಂತ ಸುಧಾರಣೆ ಮಾಡಿಕೊಳ್ಳುವ ಇಚ್ಛೆ ಗ್ರಾಮಸ್ಥರಲ್ಲಿ ಬೇರೂರುವಂತೆ ಮಾಡುವುದರಿಂದ ನಮ್ಮ ಉದ್ದೇಶವನ್ನು ಕೈಗೂಡಿಸಬಹುದು. ಗ್ರಾ ಮೋನ್ನತಿ ಕಾರ್ಯದ ಕುರಿತು ಹೆಚ್ಚಿನ ಅಧಿಕಾರದಿಂದ ಮಾತನಾಡುವುದು ಸಾಧ್ಯವಿದ್ದ ಬೈನ್‌ರೆಂಬವರು ಗ್ರಾಮೋನ್ನತಿ ಕಾರ್ಯಕ್ಕೆ ಗ್ರಾಮದ ಜನರಲ್ಲಿ ಗಂಡಸರು, ಹೆಂಗಸರು ಮತ್ತು ಮಕ್ಕಳಲ್ಲಿ ಈ ಬಗ್ಯೆ ಬೇಕಾದ

ಸರಿಯಾದ ಭಾವವನ್ನು ಹುಟ್ಟಿಸುವುದೇ ಅತೀ ಮುಖ್ಯ ವಿಷಯವೆಂದಿದ್ದಾರೆ. ಬೈನರ ಮಾತುಗಳನ್ನೆ ಹೇಳುವುದಾದರೆ "ತನ್ನ ಮನೆ ಮತ್ತು ತನ್ನ ಗ್ರಾಮ ತಾನೇ ಸರಿಪಡಿಸುವಂತೆ ಗ್ರಾಮಸ್ಥನಲ್ಲಿ ಉತ್ಸಾಹಬರುವಂತಾಗಬೇಕು. ಉನ್ನತಿ ಕಾರ್ಯಕ್ರಮದ ಮುಖ್ಯ ಪ್ರಶ್ನೆ, ಯಾವುದು ಸರಿಯಿಲ್ಲ ಮತ್ತು ಅದನ್ನು ಹೇಗೆ ಸರಿಪಡಿಸುವುದೆಂಬುದರ ಮಟ್ಟಿಗಲ್ಲ. ಗ್ರಾಮಸ್ಥನು ಈ ಕುರಿತು ತಾನೇ ಯೋಚಿಸಿ ಇತರ ಗ್ರಾಮಸ್ಥರ ಜೊತೆಗೂಡಿ ಸರಿಪಡಿಸಲು ಹೊರಡುವಂತೆ ಮಾಡಲು ಬೇಕಾದ ಶಕ್ತಿಯನ್ನು ಒದಗಿಸುವುದೇ ಮುಖ್ಯ. ಜೀವನದ ಮಟ್ಟ ವನ್ನು ಏರಿಸಬೇಕೆಂಬ ಆತುರವೇ ಈ ಶಕ್ತಿಯಾಗಬಹುದು". ಉನ್ನತ ಜೀವನ ಪ್ರಮಾಣವೆಂದರೆ ಆರೋಗ್ಯ ದೃಷ್ಟಿಯಿಂದ ಉತ್ತಮವಾದ ಮನೆಗಳು, ಶುಚಿಯಾದ ಸರಹದ್ದು, ನಿರ್ಮಲವಾದ ಕುಡಿಯುವ ನೀರು, ಒಳ್ಳೆಯ ಆಹಾರ, ಬಟ್ಟೆಗಳು, ವಿದ್ಯೆ, ವೈದ್ಯಕೀಯ ಸಹಾಯ, ಬಾಣಾಂತಿತನಕ್ಕೆ ಅನು ಕೂಲತೆಗಳು, ಶುಚಿಯಾದ, ಚೆನ್ನಾಗಿ ಸಾಕಲ್ಪಟ್ಟ, ಕ್ರಮದಂತೆ ವರ್ತಿಸುವ ಸುಖಿಯಾದ ಮಕ್ಕಳು, ಸಂಸ್ಕೃತಿ, ಹೂವುಗಳು, ಪುಸ್ತಕಗಳು, ವಾರ್ತಾ ಪತ್ರಿಕೆ ಗಳು, ಸಂಗೀತ, ರೇಡಿಯೋಗಳು, ಸ್ವಚ್ಛವಾದ ನಿರ್ಮಲ ಗ್ರಾಮಗಳು, ಸಹ ಕಾರೀ ಸಂಸ್ಕೃತಿಕ ಹಾಗೂ ವಿಹಾರ ಸಂಘಗಳ ಸದಸ್ಯತನ, ಸಂಚಯ ಠೇವ ಣಾತಿಗಳು, ವ್ಯವಸ್ಥಿತ ಆಟಗಳು, ಒಳ್ಳೆಯ ಸ್ಥಿತಿಯಲ್ಲಿರುವಿಕೆ ಇವೇ ಅಲ್ಲದೆ ಬೆಲೆ ಬಾಳುವ ಆಭರಣಗಳಲ್ಲ, ವಿಪರೀತಕರ್ಚಿನ ಸಮಾರಂಭಗಳು, ಕೋರ್ಟು ವ್ಯವಹಾರಗಳು ಇತ್ಯಾದಿಯಲ್ಲ. ಕಾರ್ಯಕ್ರಮದಲ್ಲಿ ಕಾಣಿಸಿದ ಕೆಲವು ಕಡ್ಡಾ ಯದ ಕೆಲವು ಐಚ್ಛಿಕ ವಿಷಯಗಳನ್ನು ಜಾರಿಗೆ ತಂದು ಇವನೆಲ್ಲ ಸಾಧಿಸ ಬಹುದು.

10. ಒಮ್ಮೆ ಈ ಆತುರ ಹುಟ್ಟುವಂತೆ ಮಾಡಿದರೆ ಉನ್ನತ ಜೀವನ ಪ್ರಮಾಣದ ಆವಶ್ಯಕತೆಗಳನ್ನು ಸಾಧಿಸಲು ಬೇಕಾದ ಅನುಕೂಲತೆಗಳು ಗ್ರಾಮಸ್ಥರಿಗೆ ಬೇಕಾಗುತ್ತವೆ. ಜೀವನೋಪಾಯ ಉತ್ತಮಗೊಳಿಸುವ ನಮ್ಮ ಕಾರ್ಯಕ್ರಮದ ಆರ್ಥಿಕ ಅಂಗವು ಈ ಅನುಕೂಲತೆಗಳನ್ನು ಒದಗಿಸಲು ಸಹಾಯಕವಾಗುವುದು. ಆದುದರಿಂದ ನಮ್ಮ ಕೆಲಸವೆಂದರೆ (i) ಸರಳ ಹಾಗೂ ಸ್ಪಷ್ಟವಾದ ವಿಷಯಗಳಿಂದ ಗ್ರಾಮಸ್ಥರ ಲಕ್ಷ್ಯವನ್ನು ಸೆಳೆದು ಅವರ ವಿಶ್ವಾಸಗಳಿಸುವುದು. (ii) ಉತ್ತಮ ಜೀವನದ ಆತುರವನ್ನು ಅವನಲ್ಲಿ ಹುಟ್ಟಿಸುವುದು ಮತ್ತು (iii) ಅವನ ಆರ್ಥಿಕ ಸ್ಥಿತಿ ಸುಧಾರಿಸಲು ದಾರಿ ತೋರಿಸಿ ತನ್ನ ಆತುರ ಸಾಧಿಸಲು ಸಹಾಯಮಾಡುವುದು. ಕಾರ್ಯಕ್ರಮ ವನ್ನು ಪರಿಶೀಲಿಸಿದರೆ ಗ್ರಾಮೋನ್ನತಿಯೆಂದರೆ ಕಷ್ಟಪಟ್ಟು ಕೆಲಸಮಾಡುವುದು,

ಮಿತವ್ಯಯ, ಸಂಯಮ, ಸ್ವಾಭಿಮಾನ, ಸ್ವಾವಲಂಬನ, ಪರಸ್ಪರ ಸಹಾಯ, ಪರಸ್ಪರ ಗೌರವ ಮೊದಲಾದ ಮಹಾತ್ಮಾ ಗಾಂಧಿಯವರು ತಮ್ಮ ದೈನಿಕ ಪ್ರಾರ್ಥನೆಗಳಲ್ಲಿ ಒತ್ತಿ ಹೇಳುವ ಹಳೆಯ ರೀತಿಯ ಸದ್ಗುಣಗಳನ್ನು ಪುನರುಜ್ಜೀವನಗೊಳಿಸುವುದು ಮಾತ್ರವೆಂಬುದು ಸ್ಪಷ್ಟವಾಗುವುದು.

ಇಷ್ಟರ ತನಕದ ನಮ್ಮ ಕೆಲಸ—ಕೃಷಿ.

11. ಕೃಷಿ ಸುಧಾರಣೆಯ ಕಡೆಗೆ ಕಮಿಟಿಯವರು ಮೊದಲಾಗಿ ಗಮನಕೊಟ್ಟುದು ಸ್ವಾಭಾವಿಕ. ಬಡತನವು ತೀಕ್ಷ್ಣ ಪ್ರಶ್ನೆ ಇದ್ದು ಹಳ್ಳಿಗರ ಹೃದಯ ಪ್ರವೇಶಕ್ಕೆ ಉತ್ತಮ ದಾರಿಯೆಂದರೆ, ಸ್ಪಷ್ಟವಾಗಿ ಲಾಭದಾಯಕವುಳ್ಳ ಉತ್ತಮ ಬೀಜ ಹಾಗೂ ಗೊಬ್ಬರಗಳನ್ನು ಒದಗಿಸುವುದರ ಮೂಲಕವೇ ಎನ್ನಬಹುದು. 1945ರಲ್ಲಿ 1ನೇ ಮತ್ತು 2ನೇ ಬೆಳೆಗಳಿಗೆ ಕ್ರಮವಾಗಿ 65 ಮತ್ತು 225 ಮುಡಿ ಸರಕಾರೀ ಸುಧಾರಿತ ಬೀಜಗಳನ್ನು ಒದಗಿಸಲಾಯಿತು. ಬೇಕಾದ ಪ್ರಮಾಣದಲ್ಲಿ ತಕ್ಕ ಸಮಯದಲ್ಲಿ ಈ ಬೀಜಗಳು ರೈತರಿಗೆ ಸುಲಭವಾಗಿ ದೊರೆಯುವ ಏರ್ಪಾಡುಮಾಡಲಾಯಿತು. ಮುಂದಿನ ಬೆಳೆಗೆ ಉತ್ತಮ ಬೀಜಗಳನ್ನು ತಾವೇ ಹೇಗೆ ಸಂಗ್ರಹಿಸಬಹುದೆಂಬುದನ್ನು ಹೇಳಿಕೊಡಲಾಯಿತು. ರಸಾಯನಿಕ ಗೊಬ್ಬರಗಳನ್ನು ನೆಲಗಡಲೆ ಹಿಂಡಿಯನ್ನು ಉಪಯೋಗಿಸುವಂತೆ ರೈತರಿಗೆ ತಿಳಿಸಲಾಯಿತು. ಈ ಬೀಜ ಗೊಬ್ಬರಗಳನ್ನು ಉಪಯೋಗಿಸಿದವರಿಗೆ ಒಳ್ಳೆಯ ಉತ್ಪತ್ತಿ ದೊರೆತಿದೆಯೆಂದು ಇವರೆಲ್ಲಾ ಒಪ್ಪುತ್ತಾರೆ. ಬೀಜ, ಗೊಬ್ಬರ ಮತ್ತು ನೀರಾವರಿ ಅನುಕೂಲತೆಗಳಿಂದ ರೈತರಿಗೆ ನಾವು ಮಾಡಿದ ಪ್ರಯತ್ನಗಳು ಒಳ್ಳೆ ಪರಿಣಾಮಕಾರಿಯಾಗಿವೆಯೆಂಬುದನ್ನು ಈ ಕೆಳಗಿನ ಅಂಕೆ ಸಂಖ್ಯೆಗಳು ತೋರಿಸುತ್ತವೆ. 1944-45 ಮತ್ತು 1945-46ರ ಮುಲ್ಕಿ ಫಿರ್ಕಾದ ಅಕ್ಕಿ ಸಂಗ್ರಹದ ಸಂಖ್ಯೆಗಳನ್ನು ತಾಲೂಕಿನ ಇತರ ಭಾಗಗಳ ಅಂಕೆಗಳೊಡನೆ ಹೋಲಿಸಿ ನೋಡಿದರೆ 1945-46ರಲ್ಲಿ ಇಡೀ ತಾಲೂಕಿನಲ್ಲಿ ಅಕ್ಕಿ ಸಂಗ್ರಹವು ಶೇಕಡಾ 15ರಷ್ಟು ಹೆಚ್ಚಿತೆಂದೂ ಮೂಲ್ಕಿ ಫಿರ್ಕಾದಲ್ಲಿ ಮಾತ್ರ ಶೇಕಡಾ 40 ರಷ್ಟು ಹೆಚ್ಚಾಗಿತ್ತೆಂದೂ ಕಂಡುಬರುತ್ತದೆ. ಇದರಲ್ಲಿ 3ನೇ ಬೆಳೆಯಿಂದ ಸಂಗ್ರಹಿಸಿದ ಅಕ್ಕಿ ಸೇರಿಲ್ಲ. ಇದನ್ನೂ ಸೇರಿಸಿದರೆ ದಾಮಾಶೆ ಇನ್ನೂ ಹೆಚ್ಚಾಗುವುದು. ಎರಡು ವರ್ಷಗಳಲ್ಲಿಯ ಸಂಖ್ಯೆಗಳನ್ನು ಹೋಲಿಸಿದರೆ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ. 1944-45ರಲ್ಲಿ ಇಲ್ಲಿ ಸಂಗ್ರಹಮಾಡಿದ ಅಕ್ಕಿ 37,300 ಮುಡಿ, 1945-46ರಲ್ಲಿ 52,000 ಮುಡಿ ಅಂದರೆ 9,000 ಚಿಲ್ಲರೆ ಮುಡಿ ಹೆಚ್ಚಿ ಒಂದು ವರ್ಷದ ಕೆಲಸದಿಂದ ಸುಮಾರು 95,000 ರೂಪ್ಯಾ ಹೆಚ್ಚಿನ

ಉತ್ಪತ್ತಿಯಾಗಿರುತ್ತದೆ. ಇದಕ್ಕಾಗಿ ನಾವು ಅಭಿಮಾನ ಪಡುವುದು ನ್ಯಾಯ ವಾಗಿದೆ.

ಇಡೀ ಪ್ರದೇಶಕ್ಕೆ ಈ ಮುಂಚೆ ಕೃಷಿಖಾತೆಯವರ ಒಂದು ಡಿಪೊ ಇತ್ತು. ನಮ್ಮ ವಿನಂತಿ ಮೇರೆಗೆ ಕಿನ್ನಿಗೋಳಿ ಮತ್ತು ಪಡುಬಿದ್ರೆಗಳಲ್ಲಿ ಎರಡು ಹೆಚ್ಚಿನ ಡಿಪೊಗಳನ್ನು ತೆರೆದರು. ಈ ಡಿಪೊಗಳು ವಿವಿಧ ಗೊಬ್ಬರಗಳನ್ನು ಒದಗಿಸಿದ್ದಲ್ಲದೆ ತಕ್ಕಾವಿ ಸಾಲಗಳನ್ನೂ ಏರ್ಪಡಿಸಿದವು. ಈ ಮೂರು ಡಿಪೊ ಗಳಿಂದ ಒದಗಿಸಿದ ಗೊಬ್ಬರಗಳ ಲೆಕ್ಕವನ್ನು ಕೃಷಿಖಾತೆಯ ಜಿಲ್ಲಾ ಆಫೀಸರರು ಈ ಕೆಳಗಿನಂತೆ ತಿಳಿಸುತ್ತಾರೆ. ಈ ವರ್ಷ ಒದಗಿಸಿದ ಗೊಬ್ಬರದ ಕ್ರಯ ಮೂಲ್ಕಿಯಲ್ಲಿ ರೂ. 3,937/- ಕಿನ್ನಿಗೋಳಿಯಲ್ಲಿ ರೂ. 3,465/- ಮತ್ತು ಪಡುಬಿದ್ರೆಯಲ್ಲಿ ರೂ. 1,953/- ಜುಮ್ಲಾ ರೂ. 9,355/- ಕಳೆದ ವರ್ಷ ಒಟ್ಟು ರೂ. 1,753/- ಮಾತ್ರವಿತ್ತು.

ಇಡೀ ತಾಲೂಕಿಗೆ ಒಬ್ಬರು ಕೃಷಿ ಡೆಮೊನ್‌ಸ್ಟ್ರೇಟರರಿದ್ದಾರೆ. ನಮ್ಮಲ್ಲಿ ಒಬ್ಬರನ್ನು ಹಾಗೂ ಒಬ್ಬ ಜೀನು ಮೆಸೆಂಜರರನ್ನೂ ಇರಿಸುವಂತೆ ಇಲಾಖೆಯವರನ್ನು ಕೇಳಿಕೊಂಡಿದ್ದೇವೆ. ನಮ್ಮ ವಿನಂತಿಯನ್ನು ಇಲಾಖೆಯ ವರು ವಿಚಾರಿಸುತ್ತಾ ಇದ್ದಾರೆ. ಇಡೀ ಸಮಯ ಕೆಲಸಮಾಡುವ ಒಬ್ಬ ಡಿಪೊ ಕೀಪರ್, ಒಬ್ಬ ಫೀಲ್ಡ್‌ಮ್ಯಾನ್ ಮತ್ತು ಎರಡು ಮೇಸ್ತ್ರಿ ಇಷ್ಟು ಮಂದಿಯನ್ನು ಹೆಚ್ಚಾಗಿ ನೇಮಿಸಿದ್ದಾರೆ. ಈ ಇಲಾಖೆಯವರ ನಮಗೆ ಸೌಹಾರ್ದಪೂರ್ವಕ ಸಹಕಾರಕ್ಕಾಗಿ ನಾವು ತುಂಬಾ ಋಣಿಗಳಿದ್ದೇವೆ.

ನೀರಾವರಿ.

12. ಮುಂಡ್ಕೂರು ಹೊಳೆಯ ಸುತ್ತಲಿನ ರೈತರು ಮುಂಡ್ಕೂರಲ್ಲಿ ಒಂದು ಕಟ್ಟೆ ಹಾಕುವಂತೆ ಪ್ರೋತ್ಸಾಹ ಕೊಡಲಾಯಿತು. ಹೊಳೆಯ ಇನ್ನೂ ಕೆಳಭಾಗದ ರೈತರಿಗೆ ಇದರಿಂದ ಸಂಶಯಕ್ಕೆ ಕಾರಣವಾಯಿತು. ತಮಗೆ ತೊಂದರೆಯಾಗುವುದೆಂದು ಇವರು ಎಣಿಸಿದರು. ಕೊನೆಗೆ ಮಂಗಳೂರು ತಹಸಿಲ್ದಾರರು ಸಂಬಂಧಪಟ್ಟ ಗ್ರಾಮಸ್ಥರ ಸಭೆಸೇರಿಸಿದರು. ಹಲವು ಮಂದಿ ವರ್ಗದಾರರೂ ರೈತರೂ ಬಂದಿದ್ದರು. ಮುಂಡ್ಕೂರಲ್ಲಿ ಒಂದು ಪರೀಕ್ಷಾರ್ಥ ವಾಗಿ ಕಟ್ಟಿಹಾಕಲು ಒಪ್ಪಿಗೆಯಾಯಿತು. ಕೆಳಭಾಗದ ರೈತರಿಗೆ ಇದರಿಂದ ಯಾವ ತೊಂದರೆಯೂ ಆಗಿಲ್ಲವೆಂದು ತಿಳಿಯಲು ನಮಗೆ ಸಂತೋಷವಾಗು ತ್ತದೆ. ಆದರೂ ಸಂಶಯವು ಇನ್ನೂ ಹೋಗಿಲ್ಲ. ಕೆಲವು ರೈತರಿಗೆ ನಷ್ಟ ವಾಗಿ ಉಳಿದ ಕೆಲವರಿಗೆ ಲಾಭಮಾಡುವುದು ನಮ್ಮ ಉದ್ದೇಶವಲ್ಲ. ಯಾರಿಗೂ

ತೊಂದರೆ ಇಲ್ಲದೆ ಕೆಲವರಿಗೆ ಪ್ರಯೋಜನವಾಗುವಂತಿದ್ದರೆ ಇಂಥ ಕಟ್ಟಗಳನ್ನು ಪ್ರತಿವರ್ಷ ಹಾಕಬೇಕು. ಪಾವಂಜೆ ಹೊಳೆಗೆ ಚೇಳ್ಯಾರಿನಲ್ಲಿಯೂ ಮೂಲ್ಕಿ ಹೊಳೆಗೆ ಫಲಿಮಾರಿನಲ್ಲಿಯೂ ತುಂಬಾ ಖರ್ಚಿನಿಂದ ಪ್ರತಿವರ್ಷ ಕಟ್ಟ ಹಾಕುತ್ತಾರೆ. ಸರಕಾರದವರು ಇವನ್ನು ಸರಿಯಾಗಿ ಪರಿಶೀಲಿಸಿ ಇಲ್ಲಿ ಕಾಯಂ ಕಟ್ಟಗಳನ್ನು ಏರ್ಪಡಿಸಬೇಕೆಂಬುದು ನಮ್ಮ ಸೂಚನೆ. ಮೇಲ್ಭಾಗದಲ್ಲಿ ಈ ಹೊಳೆಗಳಿಗೆ ಇನ್ನೂ ಕೆಲವು ವಾಡಿಕೆಯ ಕಟ್ಟಗಳಿವೆ. ಇವನ್ನು ಮುಂದಿನ ವರ್ಷಗಳಲ್ಲಿ ಪರಿಶೀಲಿಸಬಹುದು.

ಜಾನುವಾರು.

13. ಗ್ರಾಮಸ್ಥನ ಸಂಪತ್ತಿಗೆ ಮತ್ತು ಆರೋಗ್ಯಕ್ಕೆ ಬೆಳೆಗಳಷ್ಟರ ಮಟ್ಟಿಗೇನೇ ಜಾನುವಾರು ಕೂಡಾ ಅಗತ್ಯ. ಇಡೀ ಜಿಲ್ಲೆಯಲ್ಲಿರುವ ನಮ್ಮಲ್ಲಿಯ ಜಾನುವಾರು ಕೂಡಾ ಬಡ ತರಗತಿಯಲ್ಲಿದ್ದು ಇವನ್ನು ಸುಧಾರಿಸಲು ಬಹಳ ಪ್ರಯತ್ನಬೇಕು. ಶ್ರೀ ವೆಂಕಟ್ರಮಣ ದೇವಸ್ಥಾನ, ಫಲಿಮಾರು ಮಠ, ಮುಂಡ್ಕೂರಲ್ಲಿಯ ಗೌಡಸಾರಸ್ವತ ದೇವಸ್ಥಾನ ಇತ್ಯಾದಿ, ನಮ್ಮ ಕೆಲವು ಧಾರ್ಮಿಕ ಸಂಸ್ಥೆಗಳು ಬೀಜದ ಎತ್ತುಗಳನ್ನು ಸಾಕುತ್ತಾರೆಯಾದರೂ ಇವು ಸ್ಥಳೀಕ ಜಾತಿಯವಿದ್ದು ಜಾನುವಾರು ಸಂತತಿ ಸುಧಾರಿಸಲು ಇವು ಅಗತ್ಯ ಪ್ರಮಾಣಕ್ಕೆ ಉಪಯುಕ್ತವಾಗುತ್ತ ಇಲ್ಲ. ಪಂಚಾಯತ ಬೋರ್ಡಿನವರು ಒಟ್ಟು ಸೇರಿ ಕೆಲವು ಉತ್ತಮ ಜಾತಿಯ ಎತ್ತುಗಳನ್ನಿಡುವಂತೆ ನಾವು ವಿನಂತಿ ಮಾಡಿದೆವು. ಆದರೆ ಇದುವರೆಗೆ ಏನೂ ಮಾಡಿಲ್ಲ. ಕೆಲವು ದೇವಸ್ಥಾನಗಳಿಗೂ ವಿನಂತಿಮಾಡಿದೆವು. ಚಾಲ್ತಿ ವರ್ಷದಲ್ಲಾದರೂ ಸಹಕಾರೀ ಸಂಘಗಳು, ಪಂಚಾಯತುಗಳು, ದೇವಸ್ಥಾನ ಅಥವಾ ಇಗರ್ಜಿಗಳ ಮೂಲಕ ಈ ಉತ್ತಮ ಕಾರ್ಯ ಸಾಧಿಸಲಾದೀತೆಂದು ಕಮಿಟಿಯವರ ಆಸೆ ಇದೆ.

ಆರೋಗ್ಯ.

14. ಉತ್ತಮ ಗ್ರಾಮಗಳಿಗೆ ನಮ್ಮ ಕಾರ್ಯಕ್ರಮದಲ್ಲಿ ವ್ಯಕ್ತಿ ಮನೆ ಮತ್ತು ಗ್ರಾಮದ ಶುಚಿತ್ವಕ್ಕೆ ಪ್ರಧಾನಸ್ಥಾನ ಕೊಡಲಾಗಿದೆ. ಶುಚಿತ್ವವೆಂಬುದೆ ಉನ್ನತಿಯ ಸರ್ವಸ್ವವೆಂದು ಹಲವರು ತಿಳಿಯುತ್ತಾರೆ. ಇದು ಅಕ್ಷರಶಃ ಸರಿಯಲ್ಲವೆಂಬುದು ನಿಜವಿದ್ದರೂ ಇದು ಅಷ್ಟು ಮುಖ್ಯ ವಿಷಯವಿರುತ್ತದೆ. ಕಳೆದ ದಶಂಬರದಲ್ಲಿ ಮನೆ, ಮಾರ್ಗ ಹಾಗೂ ಗ್ರಾಮ ನಿರ್ಮಲೀಕರಣದ ಒಂದು ಕಾರ್ಯಕ್ರಮ ಯಶಸ್ವಿಯಾಗಿ ಜರಗಿಸಲಾಯಿತು. ಈ ಪ್ರದೇಶದ ಎಲ್ಲ ರಸ್ತೆಗಳನ್ನು ಸ್ವಚ್ಛಗೊಳಿಸುವಂತೆ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರು ಆಜ್ಞೆಕೊಟ್ಟು ಸಹಾಯಮಾಡಿದರು. ನಿರ್ಮಲವಿರಿಸಿದ ಮನೆ ಮತ್ತು ತೋಟಗಳಿಗೆ ಐದು ಬಹುಮಾನಗಳನ್ನು ಹಂಚಿದೆವು. ನಮ್ಮ ಕೇಂದ್ರದಲ್ಲಿ

ಈ ವರ್ಷ ಸನ್ನಿಪಾತ, ವಾಂತಿಭೇದಿ ಹಾಗೂ ಸಿಡುಬು ಇತ್ಯಾದಿ, ಕಡಿಯಲು ಸಾಧ್ಯವಿರುವ, ಕಾಯಿಲೆಗಳ್ಯಾವವೂ ತಲೆದೋರಿಲ್ಲವೆಂದು ತಿಳಿಸಲು ಸಂತೋಷ ವಾಗುತ್ತದೆ. ಬಾಣಂತಿತನದ ಸೌಕರ್ಯಗಳು ಕಡಮೆ ಇರುವುದನ್ನು ಕಂಡು ಕಮಿಟಿಯವರು ಪಂಚಾಯತು ಬೋರ್ಡುಗಳು ಸೇರಿ 5 ಯಾ 6 ಗ್ರಾಮಗಳಿಗೆ ಒಬ್ಬ ಶಿಕ್ಷಿತ ಸೂಲಗಿತ್ತಿಯನ್ನಾದರೂ ಇಡುವಂತೆ ಕೇಳಿಕೊಂಡೆವು. ಕಿನ್ನಿ ಗೋಳಿ ಪಂಚಾಯತು ಒಂದು ಮಾತ್ರ ಅಲ್ಲದೆ ಉಳಿದವು ಈ ವಿಚಾರದಲ್ಲಿ ಏನೂ ಮಾಡಿಲ್ಲ.

ವಿದ್ಯಾಭ್ಯಾಸ.

15. ಹಿಂದಿನ ವರ್ಷ ಇಲ್ಲಿಯ ಯಾವ ಕೇಂದ್ರವನ್ನೂ ಕಡ್ಡಾಯ ಶಿಕ್ಷಣಕ್ಕಾಗಿ ಆರಿಸದಿರುವುದನ್ನು ಕಂಡು ತಾ. 2-9-1945ರಲ್ಲಿ ನಡೆದ ಸಸಿ ನೆಡುವ ಕಾರ್ಯಕ್ರಮದ ಸಂದರ್ಭದಲ್ಲಿ ಇಡೀ ಪ್ರದೇಶದ ಜನರು ಸಿದ್ಧರಿರುವು ದರಿಂದ ಇಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ತರಬೇಕೆಂದು ಸರಕಾರವನ್ನು ಒತ್ತಾಯ ಪಡಿಸುವ ನಿರ್ಣಯಗಳನ್ನು ನಮ್ಮ ಐದು ಕೇಂದ್ರಗಳಲ್ಲಿಯೂ ಮಂಜೂರು ಮಾಡಿದೆವು. ಜಿಲ್ಲಾ ವಿದ್ಯಾ ಆಫೀಸರರು ಮತ್ತು ಸಂಬಂಧಪಟ್ಟ ಇತರ ಅಧಿ ಕಾರಿಗಳು ನಮ್ಮ ವಿನಂತಿಯನ್ನು ಮನ್ನಿಸಿ ಈ ವರ್ಷ ಪಡುಬಿದ್ರಿ, ಹೆಜಮಾಡ್ರಿ ಮೂಲ್ಕಿ ಮತ್ತು ಫಲಿಮಾರು ಕೇಂದ್ರಗಳಲ್ಲಿ ಕಡ್ಡಾಯ ಶಿಕ್ಷಣ ಜಾರಿಮಾಡಿರು ವರು. ಇದು ಮೊದಲ ಮೆಟ್ಟಲು ಮಾತ್ರವೆಂದೂ, ಮುಂದಿನ ಎರಡು ವರ್ಷ ಗಳೊಳಗೆ ಇಡೀ ಪ್ರದೇಶದಲ್ಲಿ ಕಡ್ಡಾಯ ಶಿಕ್ಷಣ ತರುವರೆಂದೂ ಆಶಿಸುತ್ತೇವೆ.

ರಹದಾರಿ.

16. ಹಳೆಯಂಗಡಿಯಿಂದ ಪಕ್ಷಿಕೆರೆಗೆ ಹೋಗುವ ಬಹಳ ಉಪ ಯುಕ್ತ ರಸ್ತೆಯನ್ನು ದುರಸ್ತಿ ಪಡಿಸುವಂತೆ ಹಳೆಯಂಗಡಿ ಪಂಚಾಯತ ಬೋರ್ಡಿನವರನ್ನು ಕೇಳಿಕೊಂಡೆವು. ಡಿಸ್ಟ್ರಿಕ್ಟ್ ಪಂಚಾಯತು ಆಫೀಸರರು ಕೂಡಾ ಈ ಸೂಚನೆಯನ್ನು ಶಿಫಾರಸು ಮಾಡಿದರು. ಪಂಚಾಯತು ಬೋರ್ಡಿ ನವರು ಈ ಕಾರ್ಯಕೈಕೊಂಡು ಜನರ ಕೃತಜ್ಞತೆಗೆ ಪಾತ್ರರಾಗುವರೆಂದು ಆಶಿಸುತ್ತೇವೆ. ಗ್ರಾಮಾಭಿವೃದ್ಧಿಯ ನಮ್ಮ ಕಾರ್ಯಕ್ರಮದಲ್ಲಿ ಗ್ರಾಮರಹ ದಾರಿಗಳ ಸುಧಾರಣೆಯು ಒಂದು ಕೆಲಸವಿದ್ದು ಹಲವು ಕಾಲು ದಾರಿಗಳು, ಒಳದಾರಿಗಳು ಮೊದಲಾದುವನ್ನು ಪಂಚಾಯತು ಬೋರ್ಡುಗಳ ಹಾಗೂ ಸ್ಥಳೀಕ ಜನರ ಸಹಾಯದಿಂದ ಒಳ್ಳೆಯ ರಸ್ತೆಗಳನ್ನಾಗಿ ಮಾರ್ಪಡಿಸಲು ನಾವು ಪ್ರಯತ್ನಪಡುವವರಿದ್ದೇವೆ. ಆಧುನಿಕ ಟರ್ಕೀ ದೇಶದಲ್ಲಿ 40 ವರ್ಷದ ಕೆಳ

ಿನ ಸಕ್ತಿ ದೇಹದ ಪ್ರತಿಯೊಬ್ಬ ಮನುಷ್ಯನು ವರ್ಷದಲ್ಲೆರಡು ಬಾರಿ ಆರು ವಿನ ರಸ್ತೆಗಳಿಗಾಗಿ ಕೆಲಸಮಾಡಬೇಕು ಇಲ್ಲವೆ ತನ್ನ ಬದಲಿಗೆ ಕೆಲಸಮಾಡು ವವರ ಖರ್ಚು ಕೊಡಬೇಕು. ಹಿಂದುಸ್ಥಾನದಲ್ಲಿ ಹಣ ಕಡಮೆ, ಕೆಲಸಗಾರರು ಹೆಚ್ಚು ಇರುವುದರಿಂದ ಈ ಉತ್ತಮ ಕಾನೂನನ್ನು ಇಲ್ಲಿಯೂ ಅನುಕರಣ ಮಾಡಲು ಇದು ಯೋಗ್ಯವಿದೆ.

ಕೇಂದ್ರ ಸಭೆಗಳು, ಸಸಿ ನಡುವುದು, ಪ್ರದರ್ಶನ.

17. ಈ ವರದಿಯಲ್ಲಿ ಇನ್ನೊಂದೆಡೆ ಹೇಳಿದಂತೆ ಸರಳ ಹಾಗೂ ಸ್ಪಷ್ಟ ಕೆಲಸಗಳಿಂದ ಗ್ರಾಮಸ್ಥರ ವಿಶ್ವಾಸಗಳಿಸುವುದು ನಮ್ಮ ಮೊದಲ ಉದ್ದೇಶ ವಿತ್ತು. ಹೀಗಾಗಿ ಬೇರೆ ಬೇರೆ ಕೇಂದ್ರಗಳಲ್ಲಿ ಸರ್ತಿಯಿಂದ 15 ದಿನಗಳಿ ಗೊಮ್ಮೆ ಸಭೆ ಜರಗಿಸಿ ಕಾರ್ಯಕ್ರಮ ಚರ್ಚಿಸಿ, ಕಷ್ಟಗಳನ್ನು ಪರಿಶೀಲಿಸಿ ನಿವಾರಣೋಪಾಯಗಳನ್ನು ಹುಡುಕಲು ನಿರ್ಣಯಿಸಿದೆವು. ಗ್ರಾಮ ಕೈಗಾರಿ ಕೆಗಳ ತಮ್ಮ ಪುಸ್ತಕದಲ್ಲಿ, ಸರ್. ಎಮ್. ವಿಶ್ವೇಶ್ವರಯ್ಯನವರು ಪ್ರತಿವಾರ ಸಭೆ ಸೇರಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ.

18. ನಮ್ಮ ಮುಖ್ಯ 5 ಕೇಂದ್ರಗಳಲ್ಲಿ ಹಾಗೂ ಇನ್ನಿತರ ಕೆಲವು ಗ್ರಾಮ ಕೇಂದ್ರಗಳಲ್ಲಿ ಒಟ್ಟಿಗೆ 35 ಸಭೆಗಳನ್ನು ನಡೆಸಿದೆವು. ಇತ್ತೀಚೆಗೆ ಈ ಸಭೆಗಳ ವರದಿಗಳನ್ನು ಅಚ್ಚುಹಾಕಿಸಿ ಒಂದೆಡೆ ನಡೆದುದು ಇನ್ನೊಂದೆಡೆಯವರಿಗೆ ತಿಳಿ ಯುವಂತೆ ಏರ್ಪಡಿಸುತ್ತಿದ್ದೇವೆ. ಈ ವರ್ಷದಲ್ಲಿ ಒಂದು ಸಸಿನೆಡುವ ದಿನಾಚ ರಣೆ ಮಾಡಿದೆವು. ಆ ಬಳಿಕ ಒಂದು ಜಿಲ್ಲಾ ಪ್ರದರ್ಶನವೂ ಇತ್ತು. ತಾ. 2-9-1945ರಲ್ಲಿ ಮೊದಲನೆ ಸಸಿ ನೆಡುವ ದಿನವನ್ನು 5 ಕೇಂದ್ರಗಳಲ್ಲಿಯೂ ಆಚರಿಸಲಾಯಿತು. 5,000ಕ್ಕೆ ಮಿಕ್ಕಿ ಈ ಕೇಂದ್ರಗಳಲ್ಲಿ ಜನರು ಸೇರಿದ್ದರು. 1,024 ರೈತರು ನಮ್ಮಲ್ಲಿ ಹೆಸರು ದಾಕಲು ಮಾಡಿಸಿ 2,100 ಸಸಿಗಳನ್ನು ತೆಟ್ಟರು. ಪ್ರತಿ ರೈತನು ತನ್ನ ಸಸಿಯೊಡನೆ ಸಭೆಗೆ ಬಂದು, ವರ್ಷದ ಕಾರ್ಯ ಕ್ರಮ ತಿಳಿದು, ಹಿಂದೆ ಹೋಗಿ ತಯಾರು ಮಾಡಿಟ್ಟ ಸ್ಥಳದಲ್ಲಿ ಆ ಸಸಿ ನೆಡು ವುದು ಇದರ ಕ್ರಮ. ಆದಷ್ಟು ರೈತರಿಗೆ ನಮ್ಮ ಕೆಲಸ ತಿಳಿಸುವುದೂ ಕೇಂದ್ರದ ಸಂಪತ್ತನ್ನು ಹೆಚ್ಚಿಸುವುದೂ ಇದರ ಉದ್ದೇಶ. ಈ ಹೊತ್ತು 13 ಕೇಂದ್ರಗಳಲ್ಲಿ ಎರಡನೆ ಸಸಿನೆಡುವ ದಿನಾಚರಣೆ ಮಾಡುತ್ತಿದ್ದೇವೆ. ಇದು ಕಳೆದ ವರ್ಷಕ್ಕಿಂತಲೂ ಯಶಸ್ವಿಯಾಗುವುದೆಂದು ಆಶಿಸುತ್ತೇವೆ. ಆ ಬಳಿಕ ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್ ಎಸೊಶಿಯೇಶನಿನ ಆಶ್ರಯದಲ್ಲಿ ದಶಂಬರ 21, 22 ಮತ್ತು 23ರಲ್ಲಿ ಒಂದು ಜಿಲ್ಲಾ ಪ್ರದರ್ಶನ ಏರ್ಪಡಿಸಿದೆವು. ರೈತರಿಗೆ ಪ್ರೋತ್ಸಾಹ,

ಜ್ಞಾನ, ಮಾಹಿತಿ ಹಾಗೂ ಸುಧಾರಣೆ ದೊರಕಿಸಿಕೊಡುವ ಒಂದು ಮಿಡಿ ಕೈಗಾ ಯನ್ನು ಅವರು ಕೈಕೊಳ್ಳುವಂತೆ ಯತ್ನಿಸುವುದು ಇದರ ಉದ್ದೇಶವಿತ್ತು. ಪ್ರದರ್ಶನವು ಬಹಳ ಯಶಸ್ವಿಯಾಯಿತು. ಸರಕಾರದ ಎಲ್ಲ ಅಭಿವೃದ್ಧಿಖಾತೆ ಗಳು ಕೃಷಿ, ಕೈಗಾರಿಕೆ, ಫಿಶರೀಸ್, ಆರೋಗ್ಯ, ಜಾನುವಾರು, ಟ್ರೇಡ್‌ಸ್ಕೂಲು ಇವರೆಲ್ಲ ತಮ್ಮ ತಮ್ಮ ಪ್ರದರ್ಶನದಂಗಡಿಗಳನಿಟ್ಟು ಯಶಸ್ವಿಮಾಡಲು ಆತುರ ತೋರಿದವು. ಖಾಸಗಿ ವಸ್ತುಗಳೂ ಪ್ರದರ್ಶಿಸಲ್ಪಟ್ಟವು. ಗುಡಿಕೈಗಾರಿಕೆಗಳು ಮತ್ತು ಕಲಾ ಕೈಗಾರಿಕೆಗಳೆಲ್ಲವುಗಳ ಮಾದರಿಗಳಿದ್ದವು. ಕೊಂಬಿನ ಕೆಲಸ, ಮಣ್ಣಿನ ಪಾತ್ರೆಗಳು, ಮೀನಿನ ಎಣ್ಣೆತೆಗೆಯುವಿಕೆ, ಸರಳವಾದ ಶೋಧಗಳು, ನೂಲುವುದು, ನೇಯುವುದು, ಕಸೂತಿ ಕೆಲಸ, ಕತ್ತ ಹಾಗೂ ಬೆತ್ತದ ಕೆಲಸ, ಚಿತ್ರಕಲೆ, ಸಸಿ ತಯಾರಿ ಹಾಗೂ ಎಣ್ಣೆ ತಯಾರಿ ಇವೆಲ್ಲ ಪ್ರದರ್ಶಿತವಾದವು. ಒಂದು ರೇಡಿಯೊ ಇರಿಸಿ ಹಾಗೂ ಕೆಲವು ಆಟ ಸ್ಪರ್ಧೆಗಳಿಂದ ಪ್ರದರ್ಶನವನ್ನು ಇನ್ನೂ ಆಕರ್ಷಣೀಯವಾಗಿ ಮಾಡಲಾಯಿತು. ಬಂದವರ ಅನುಕೂಲತೆಗಾಗಿ ಸ್ಥಳೀಕ ಸಹಕಾರೀ ಸ್ಟೋರಿನವರು ಹಣ್ಣು ಹಂಪಲು ಮತ್ತು ಪಾನೀಯಗಳ ಅಂಗಡಿ ಇಟ್ಟಿದ್ದರು. ಪ್ರದರ್ಶನದಿಂದ ಕೂಡಲೆ ಸಿಕ್ಕಿದ ಪರಿಣಾಮವೆಂದರೆ ಇಲ್ಲಿ ಕೈಗಾರಿಕೆ ಖಾತೆಯವರು ಕತ್ತದ ಕೆಲಸ ಕಲಿಸುವ ಕೇಂದ್ರ ತೆರೆದುದು. 1946ರ ದಶಂಬರದಲ್ಲಿ ನಮ್ಮ 2ನೇ ಪ್ರದರ್ಶನ ನಡೆಯಲಿಕ್ಕಿದೆ. ಇದರಲ್ಲಿ ಎರಡು ವಿಭಾಗಗಳಿರುವುವು. ಈ ಪ್ರದೇಶದಲ್ಲಿ ತಯಾರಾದ ಮ್ಹಾಲುಗಳ ಪ್ರದ ರ್ಶನ ಒಂದು ಭಾಗ. ಹೊರ ಊರುಗಳ ಮ್ಹಾಲುಗಳ ವಿಭಾಗ ಎರಡನೆ ಯದು. ನಮ್ಮ ಗ್ರಾಮಸ್ಥರು ತಮ್ಮ ವಿಭಾಗವನ್ನು ಯಶಸ್ವಿಗೊಳಿಸಲು ಯತ್ನಿಸುವರೆಂದು ಆಶಿಸುತ್ತೇವೆ. ಗ್ರಾಮ ಪ್ರದರ್ಶನಗಳ ಕುರಿತು ಬರೆಯುತ್ತ ಗಾಂಧಿಯವರು ಇವು ಗ್ರಾಮಸ್ಥರು ಕೈಕೊಳ್ಳಲು ಸಾಧ್ಯವಿರುವ ಗ್ರಾಮ ಕೈಗಾರಿಕೆಗಳ ಪ್ರದರ್ಶನಗಳಾಗಬೇಕೆಂದೂ ಹೆಚ್ಚು ಕಷ್ಟದ ಶಾಸ್ತ್ರೀಯ ಕೈಗಾರಿ ಕೆಗಳು ಫಲವಿಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ. ಸಸಿನೆಡುವ ದಿನ ಮತ್ತು ಪ್ರದರ್ಶನ ಇವು ಗ್ರಾಮಸ್ಥರನ್ನು ಒಟ್ಟುಗೂಡಿಸಿ ಅವರ ಉತ್ಸಾಹ ಉಳಿಸಲು ನಡೆಸಲಾಗುವ ನಮ್ಮ ವಾರ್ಷಿಕ ಜಾತ್ರೆಗಳಾಗುವವು.

ನಮ್ಮ ಮುಂದಿನ ಕೆಲಸ.

18. ಸಾಧಿಸಿದ ಕಾರ್ಯವನ್ನು ಬಲಪಡಿಸುವುದು ಮತ್ತು ಗ್ರಾಮ ಸ್ಥರ ಮುಂದೆ ನಾವಿಟ್ಟ ಸಮಾಜ ಸುಧಾರಣೆಯ ಸರಳ ಕಾರ್ಯಕ್ರಮವನ್ನು ಅವರು ವ್ಯಕ್ತಿಶಃ ಹಾಗೂ ಸಾಮೂಹಿಕವಾಗಿ ಸಾಧಿಸಲು ಇನ್ನೂ ಅವರನ್ನು ಹುರಿದುಂಬಿಸುವುದು ನಮ್ಮ ಮುಂದಿನ ಕೆಲಸ. ಒಂದು ಮನೆಯಲ್ಲಿರ

ವರು ತಾವಾಗಿ ಸುಧಾರಿಸಲು ಇಚ್ಛೆಪಡಿಯದೆ ಆ ಮನೆ ಸುಧಾರಿಸಲು ಸಾಧ್ಯ ವಿಲ್ಲ. ಅದರಂತೆಯೇ ಯಾವ ಗ್ರಾಮವನ್ನೂ ಕಾಯಮಾಗಿ ಹೊರಗಿನವ ರಿಂದ ಸುಧಾರಿಸಲು ಸಾಧ್ಯವಿಲ್ಲ. ಕಾಯಮಾಗಿ ಉಳಿಯುವ ಸುಧಾರಣೆ ಸ್ವಾಭಾವಿಕವಾಗಬೇಕು. ಗ್ರಾಮಸ್ಥರಿಗೆ ಉತ್ತಮ, ಪೂರ್ಣ, ಸುಖಕರ, ಆರೋಗ್ಯಕರ ಜೀವನದ ಆತುರವುಂಟಾಗುವಂತೆ ಕಲಿಸುವುದೂ ಜೀವನದ ಮಟ್ಟ ಏರಿಸುವ ಆಸೆ ಇವರಲ್ಲಿ ಹುಟ್ಟಿಸುವುದೂ ನಮ್ಮ ಕೆಲಸ. ಇವನ್ನು ಸಾಧಿಸಲು ಸಿಕ್ಕುವ ಉಪಾಯಗಳನ್ನು ಅವರೇ ಆತುರದಿಂದ ಕೈಕೊಳ್ಳು ವಂತಾಗಬೇಕು. ಇದಕ್ಕೆ ಸೇರುವವರೂ ಇದನ್ನು ನೋಡುವವರೂ ಸಿಕ್ಕಿದ ಫಲದಿಂದ ತೃಪ್ತರಾಗುವರೆಂದು ಎನಿಸುತ್ತೇವೆ. ನಮ್ಮ ಗ್ರಾಮಸ್ಥರು ಅನ್ಯವ ಸ್ಥಿತ ಸ್ಥಿತಿಯಲ್ಲಿದ್ದು, ಅಧಿಕಾರಿಗಳು ಅಥವಾ ಹೊರಗಿನವರ ಹೇಳಿಕೆಯಲ್ಲದೆ ಏನೂ ಮಾಡಲಾರದ ಸ್ಥಿತಿಯಲ್ಲಿರುವರು. ಒಂದು ಸಂಘ ಅಥವಾ ಸಂಸ್ಥೆ ವ್ಯವಸ್ಥೆಗೊಳಿಸಿ ತನ್ಮೂಲಕ ಸಾಮೂಹಿಕ ಕಾರ್ಯವನ್ನು ಸುಲಭವಾಗಿ ಸಾಧಿಸುವಂತೆ ಯತ್ನಿಸುವುದೇ ದಾರಿಯೆಂದು ಕಾಣುತ್ತದೆ. ನಾಗರಿಕತೆ ಪ್ರಚಾರವಾದಲ್ಲೆಲ್ಲ ಗ್ರಾಮಗಳ ಒಳಗೆ ತಮ್ಮದೇ ಸಂಸ್ಥೆ ಇದ್ದು ಇದರ ಮೂಲಕ ಗ್ರಾಮಜೀವನ ಸುಗಮವಾಗುವಂತೆ ಬೇಕಾಗುವ ಹಲವು ಕಾರ್ಯಗಳು ಉತ್ತಮ ರೀತಿಯಿಂದ ಸಾಧಿಸಲಾಗುತ್ತಿದೆ. ನಮ್ಮ ಕಾರ್ಯ ಕ್ರಮದಲ್ಲಿ ಸೂಚಿತವಾದಂತೆ ತಾವು ತಮ್ಮ ಜೀವನ ಸುಧಾರಿಸಿ ಇತರರನ್ನು ಸುಧಾರಿಸಲೆಳಸುವವರನ್ನೆಲ್ಲ ಇಂಥ ಸಂಸ್ಥೆಯಲ್ಲಿ ಒಟ್ಟು ಸೇರಿಸುವುದು ನಮ್ಮ ಉದ್ದೇಶವಿರಬೇಕು. ಇವೇ ಉದ್ದೇಶವುಳ್ಳ ಪಂಚಾಯತು ಬೋರ್ಡುಗಳೂ ಸಹಕಾರಿ ಸಂಘಗಳೂ ನಮ್ಮಲ್ಲಿವೆ. ಗ್ರಾಮಗಳು ಜೀವಿಸಲು ಸುಖ ಹಾಗೂ ಆರೋಗ್ಯದಾಯಕ ಸ್ಥಳಗಳಾಗುವಂತೆ ಮಾಡುವ ನಮ್ಮ ಯತ್ನಗಳಲ್ಲಿ ಇವುಗಳ ಪೂರ್ಣ ಸಹಕಾರ ನಾವು ಬಯಸುತ್ತೇವೆ. ಗ್ರಾಮದ ಜನರಿಗೆ ಉತ್ತಮ ಜೀವನೋಪಾಯ ತೋರಿಸುವುದೂ ನಮ್ಮ ಆಸೆ. ಇದು ಮಹ ತ್ವದ ದೊಡ್ಡ ಕೆಲಸವಿದ್ದು ಇದಕ್ಕೆ ಹಣವೂ ಸರಕಾರೀ ಸಹಾಯವೂ ಅಗತ್ಯ ವೆಂದು ನಮಗೆ ಗೊತ್ತಿದೆ.

ಸರಕಾರ ಮತ್ತು ನಮ್ಮ ಕೇಂದ್ರ.

19. ಕೃಷಿಯ ಗಾಢ ಸುಧಾರಣಾ ಕೇಂದ್ರಗಳನ್ನು ಹಿಂದುಸ್ಥಾನ ಸರಕಾರದವರು ನಡೆಸಲಿರುವರೆಂದು ಕಳೆದ ವರ್ಷ ಕೇಳಿದೆವು. ನಮ್ಮ ಕೇಂದ್ರವನ್ನು ಈ ಬಗ್ಯೆ ಆರಿಸುವಂತೆ ವಿನಂತಿ ಮಾಡಲು ನಿರ್ಣಯಿಸಿದೆವು. ಇದರ ಕುರಿತು ಇನ್ನೂ ನಮಗೆ ತಿಳಿದುಬಂದಿಲ್ಲ.

ಮದ್ರಾಸಿನ ಜನತಾ ಸರಕಾರವು ಈಗ ಗ್ರಾಮ ಪುನರುಜ್ಜೀವನದ ಒಂದು ಯೋಜನೆಯನ್ನು ಮುಂದೆ ತಂದಿರುತ್ತದೆ. ಈಗ ತಿಳಿಯುವ ಮಟ್ಟಿಗೆ ಈ ಕಾರ್ಯ ಅಧಿಕಾರಿಗಳ ಮೂಲಕ ನಡೆಯಲಿದೆ. ಇದು ನಿಜವಾದರೆ ಗ್ರಾಮಗಳಲ್ಲಿ ಬೇರೂರಬೇಕೆಂದು ಸರಕಾರದವರು ಆಶಿಸುವ ಗ್ರಾಮ ಸ್ವರಾಜ್ಯವು ಇದರಿಂದ ಬೆಳೆದುಬರಲಾರದು. ನಿತ್ಯಜೀವನದಲ್ಲಿ ಮನೆ, ಹೊಲ ಹಾಗೂ ಗ್ರಾಮದ ಕೆಲಸಗಳಲ್ಲಿ ಇದೇ ರೀತಿ ವರ್ತಿಸಬೇಕೆಂದು ಅಧಿಕಾರಿಗಳು ಹೇಳುವುದು ಯಾವ ಗ್ರಾಮಸ್ಥನಿಗೂ ಮೆಚ್ಚಿಕೆಯಾಗುವಂತಿಲ್ಲ. ನಮ್ಮ ಕೇಂದ್ರವನ್ನು ಸರಕಾರದವರು ಆರಿಸಲಿಲ್ಲವೆಂದು ಈ ರೀತಿ ನಾವು ಟೀಕಿಸುತ್ತಿದ್ದೇವೆಂದು ತಿಳಿಯಲಾಗದು. ನಾವು ಈ ಕೇಂದ್ರದಲ್ಲಿ ಆರಂಭದಲ್ಲಿ ಕೆಲಸ ಸ್ವಲ್ಪ ಮಾಡಿದ್ದೆವು. ಜಿಲ್ಲೆಯಲ್ಲಿಯ ಸರಕಾರದ ಎಲ್ಲ ಇಲಾಖೆಯವರೂ, ಜಿಲ್ಲಾ ಕಲೆಕ್ಟರರೂ, ನ್ಯಾಯವಿಧಾಯಕ ಸಭೆಗಳ ಸದಸ್ಯರೂ ನಮ್ಮನ್ನು ಶಿಫಾರಸು ಮಾಡಿರುವರೆಂದ ಮೇಲೆ ನಮ್ಮ ಕೇಂದ್ರವನ್ನು ಚುನಾಯಿಸುವಂತೆ ಕೇಳಲು ನಮಗೆ ಹಕ್ಕಿತ್ತು. ಅಂತೂ ಸರಕಾರದವರು ಬೇರೊಂದು ಪ್ರದೇಶ ಕೈಕೊಂಡಿರುವರು. ಅಲ್ಲಿಯ ಕೆಲಸವನ್ನು ನಾವು ಆತುರದಿಂದ ಇದಿರು ನೋಡುತ್ತ ಅಲ್ಲಿರಬಹುದಾದ ಹೊಸ ಹಾಗೂ ಉಪಯುಕ್ತ ವಿಷಯಗಳನ್ನು ಕಲಿತು ಅವನ್ನು ನಮ್ಮ ಕೆಲಸದಲ್ಲಿ ಸೇರಿಸಬಹುದು.

ಸಾಮಾಜಿಕ ಕಾರ್ಯ.

20. ಕುಡುಕತನ ಮತ್ತು ಅಸ್ಪೃಶ್ಯತೆಗಳಂಥ ಸಾಮಾಜಿಕ ಕೆಡುಕುಗಳನ್ನು ನಿವಾರಿಸಲೆತ್ನಿಸುವುದು ನಮ್ಮ ಇತರ ಕೆಲಸಗಳು. ಇವೆರಡು ಕೆಲಸಗಳಲ್ಲಿಯೂ, ಇಲ್ಲಿ ಆರಂಭದ ಕೆಲಸ ನಡೆದಿದ್ದು, ಉತ್ತಮ ವಾತಾವರಣವಿರುತ್ತದೆ. ಹಿಂದೂ ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶ ಕೊಡುವಂತೆ ಕೇಳಿಕೊಳ್ಳಲು ನಮ್ಮ ಕೇಂದ್ರ ಸಭೆಗಳಲ್ಲಿ ನಿರ್ಣಯಗಳಾಗಿವೆ. ಕಳೆದ ಆರು ಸಭೆಗಳಲ್ಲಿ ಸ್ಥಳೀಕ ಹರಿಜನರನ್ನು ಸೇರಿಸಿ ಅವರಿಗೆ ಎಣ್ಣೆಸ್ನಾನ ಮತ್ತು ಊಟ ಕೊಟ್ಟು ತಮ್ಮ ಕುಟುಂಬಗಳನ್ನು ಹೇಗೆ ಮಾದರಿ ಕುಟುಂಬಗಳಾಗುವಂತೆ ಮಾಡಬಹುದೆಂದು ಇವರಿಗೆ ತಿಳಿಸಲಾಯಿತು. ಊಟಗಳ ಖರ್ಚು ದೇವಸ್ಥಾನಗಳೂ, ಕೆಲವೆಡೆ ವ್ಯಕ್ತಿಗಳೂ ವಹಿಸಿದ್ದರು. ಮೂಲ್ಕಿ ಹರಿಜನರು ಒಂದು ಸಮಾಜವ್ಯವಸ್ಥೆಗೊಳಿಸಿ ಇದನ್ನು ಡಾ। ಯು. ಪಿ. ಮಲ್ಯ ಎಂ.ಎಲ್.ಎ., ಇವರು ಜೂನ್ ತಿಂಗಳಲ್ಲಿ ಉದ್ಘಾಟನೆ ಮಾಡಿದರು.

21. ಗ್ರಾಮದ ಆಟಗಳು ಮತ್ತು ಸ್ಪರ್ಧೆಗಳು, ನಾಟಕಗಳ
ಸಂಗೀತ ಮಂಡಲಿಗಳು ಗ್ರಾಮ ಕಾರ್ಯಕ್ರಮದ ಜನಪ್ರಿಯ ವಿಹಾರ
ಕಾರ್ಯಕ್ರಮಗಳಿದ್ದು, ಇವು ಸ್ವತಃ, ಹಾಗೂ ಇತರ ಕಾರ್ಯಕ್ಕೆ ಇವುಗಳಿಂ
ದೊರೆಯುವ ಉತ್ಸಾಹಕ್ಕಾಗಿ ಕೂಡಾ ಉಪಯುಕ್ತವಿರುತ್ತದೆ. ಹಳ್ಳಿಯ
ಜನಪ್ರಿಯ ವಿಹಾರವೆನ್ನಿಸುವ ಯಕ್ಷಗಾನದಲ್ಲಿ ಅಭಿರುಚಿಯನ್ನು ಉಜ್ಜೀವ
ಗೊಳಿಸುವ ಉದ್ದೇಶದಿಂದ ನಮ್ಮ ಕೇಂದ್ರ ಸಭೆಗಳಲ್ಲಿ ಶ್ರೀ ಎನ್. ಎಸ್
ಕಿಲ್ಲೆ ಮತ್ತು ಮೈಂದಪ್ಪ ರೈಯವರ ಮೂಲಕ ಪುರಾಣಗಳ ವಾಚನ ಏರ್ಪ
ಸಿದೆವು. ಪ್ರತಿ ಕೇಂದ್ರದಲ್ಲಿ 4 ಯಾ 5 ಎಕ್ರೆ ಖಾಲಿ ಸ್ಥಳವನ
ವಿಹಾರಭೂಮಿಯಾಗಿ ಉಪಯೋಗಿಸಲು ಕೊಡುವಂತೆ ಸರಕಾರವನ್ನು ಕೇಳ
ವವರಿದ್ದೇವೆ.

ನಿರ್ಣಯಗಳು.

22. ಕಳೆದ ಸಸಿ ನೆಡುವ ದಿನ ನಾವು ಮಾಡಲಿರುವ ಕೆಲಸದ ಕುರಿತ
ಕೆಲವು ನಿರ್ಣಯಗಳನ್ನು ಮಾಡಿದ್ದೆವು. ವರ್ಷದಲ್ಲಿ ಅವನ್ನು ಕಾಯ
ರೂಪಕ್ಕೆ ತರಲು ಯತ್ನಿಸುತ್ತಿದ್ದೆವು. ಕೆಲವು ಸಂದರ್ಭದಲ್ಲಿ ನಮ್ಮ ಯತ
ಗಳು ಫಲಿಸಿವೆ. ಉಳಿದವುಗಳ ಕುರಿತು ಯತ್ನಿಸುತ್ತಿದ್ದೇವೆ. ಈ ದಿ
ಕೂಡಾ ನಿಮ್ಮೆದುರು ಕೆಲವು ನಿರ್ಣಯಗಳನ್ನು ಇಡುತ್ತಿದ್ದೇವ
(ಪರಿಶಿಷ್ಟ 4) ಮುಂದಿನ ತಿಂಗಳುಗಳಲ್ಲಿ ಮಾಡಬೇಕಾದ ಕೆಲಸವೇನೆಂಬುದ
ಇವುಗಳಲ್ಲಿ ಅಡಕವಾಗಿದೆ. ಹಿಂದಿನ ವರ್ಷಗಳ ಉತ್ಸಾಹದಿಂದ, ನೀ
ಮುಂದಿನ ಕಾರ್ಯವೂ ಯಶಸ್ವಿಯಾಗುವಂತೆ ಕೆಲಸ ಮಾಡುವಿರೆಂದ
ಆಶಿಸುತ್ತೇವೆ.

ಕೇಂದ್ರಗಳು.

23. ನಮ್ಮ ಕೆಲಸದಿಂದ ಪ್ರೇರಿತರಾಗಿ ಒಂದು ಯುವಕ ತಂಡ
ವರು ಪುತ್ತೂರು ತಾಲೂಕಿನ ಕಣಿಯೂರು ಮತ್ತು ಇತರ 8 ಗ್ರಾಮಗಳ
ಇದೇ ಬಗೆಯ ಒಂದು ಕೇಂದ್ರವನ್ನು ಆರಂಭಿಸಿರುತ್ತಾರೆ. ಇವರು ಆಗಾ
ಸಭೆಗಳನ್ನು ಜರಗಿಸಿ ತಮ್ಮ ಗ್ರಾಮಗಳನ್ನು ಹೇಗೆ ಸುಧಾರಿಸಬಹುದೆಂದ
ಚರ್ಚಿಸುತ್ತಿದ್ದಾರೆ. ತಾ. 21-8-1946ರಲ್ಲಿ ಇವರು ಒಂದು ಸ
ನೆಡುವ ದಿನಾಚರಣೆ ಮಾಡಿದರು. ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮದ
ಇನ್ನೊಂದು ಕೇಂದ್ರವನ್ನು ಆರಂಭಿಸಿದ್ದಾರೆ. ಇವರಿಗೂ ನಮ್ಮ ಭ್ರಾತೃಭಾವ

ವಂದನೆಗಳನ್ನು ಅರ್ಪಿಸಿ ಇವರ ಕಾರ್ಯಗಳೆಲ್ಲ ಯಶಸ್ವಿಯಾಗಲೆಂದು ಕೋರುತ್ತೇವೆ. ಈ ಉತ್ಸಾಹಿಗಳ ಉದಾಹರಣೆಯನ್ನು ಇನ್ನು ಅನೇಕರು ಅನುಸರಿಸುವರೆಂದು ಆಶಿಸುತ್ತೇವೆ.

ಹಣದ ವಿಚಾರ.

24. ಮೇಲಿನ ಕಾರ್ಯಕ್ರಮವನ್ನು ಜಾರಿಗೆ ತರಲು ಹಣ ಬೇಕು. ಸೇವಾಭಾವದಿಂದ ಪ್ರೇರಿತವಾದ ಮಾನವನ ಶ್ರಮವು ಮಹತ್ಫಲಗಳನ್ನು ಸಾಧಿಸಬಲ್ಲುದು. ಆದರೆ ಹಣವೂ ಅಗತ್ಯವಿದೆ. ಯಾರ ಆಶ್ರಯದಲ್ಲಿ ಈ ಕಾರ್ಯಕ್ರಮವು ನಡೆಯುತ್ತದೆಯೋ ಆ ಬಂಟರ ಯಾನೆ ನಾಡವರ ಸಂಘದವರು ರೂ. 100/- ಮಂತಿಗೆ ಕೊಟ್ಟರು. ಪ್ರದರ್ಶನದ ಖರ್ಚು ಮೂರಾಟವಾದ ಟಿಕೇಟುಗಳು ಮತ್ತು ಅಂಗಡಿ ಬಾಡಿಗೆಗಳಿಂದ ಭರ್ತಿ ಮಾಡಲಾಯಿತು. ಮಂಗಳೂರಿನ ಲಾರ್ಡ್ ಬಿಶೋಪರು, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು, ಕಿನ್ನಿಗೋಳಿ, ಮುಂಡ್ಕೂರು, ಬಳ್ಕುಂಜೆ, ನಂದಿಕೂರು ಪಂಚಾಯತ ಬೋರ್ಡುಗಳು, ಚಿತ್ರಾಪು, ಒಳಲಂಕ, ಪಡುಪಣಂಬೂರು, ವಾಮಂಜೂರ್ಕಟ್ಟೆ, ಬಳ್ಕುಂಜೆ, ಸಸಿಹಿತ್ಲು, ಬಪ್ಪನಾಡು, ಪಡುಬಿದ್ರಿ, ಸತ್ಕಾರೀ ಸಂಘಗಳೂ, ಮೂಲ್ಕಿ ಟೌನ್ ಬ್ಯಾಂಕು, ಪಡುಪಣಂಬೂರು ನೇಕಾರ ಸಹಕಾರೀ ಸಂಘ, ಕಿನ್ನಿಗೋಳಿ ಮತ್ತು ಮೂಲ್ಕಿ ಸಹಕಾರೀ ಸ್ಟೋರುಗಳು ಮತ್ತು ಕೆಲವು ವ್ಯಕ್ತಿಗಳು ಹಾಗೂ ಶ್ರೀ ಬಪ್ಪನಾಡು, ಕಟೀಲು ಮತ್ತು ಮುಂಡ್ಕೂರು ದುರ್ಗಾದೇವಿ ದೇವಸ್ಥಾನಗಳು ಮತ್ತು ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ ಇವರೆಲ್ಲ ಮಂತಿಗೆಗಳನ್ನು ಕೊಟ್ಟಿರುವರು. ಪ್ರದರ್ಶನ ಸಮಯ ಸ್ತ್ರೀ ಸ್ವಯಂಸೇವಿಕೆಯರು ರೂ. 293/- ರಷ್ಟು ಸಾಧಾರಣ ಒಳ್ಳೆಯ ಮೊಬಲಗನ್ನು ಕೂಡಿಸಿದರು. ಈ ಜಮೆ ಬಂದ ಹಣಗಳು ಮತ್ತು ನಮ್ಮ ಖರ್ಚುಗಳನ್ನು ಪರಿಶಿಷ್ಟ 3ರಲ್ಲಿ ಕಾಣಿಸಿಯದೆ.

ನಮ್ಮ ಕೃತಜ್ಞತೆ.

25. ಈ ವರದಿಯನ್ನು ಮುಗಿಸುವ ಮೊದಲು ನಮ್ಮ ಕೆಲಸದಲ್ಲಿ ನೆರವಾಗಿ ಸಹಕರಿಸಿದವರೆಲ್ಲರಿಗೆ ನಮ್ಮ ಕೃತಜ್ಞತೆಯನ್ನು ಹೇಳಬೇಕು. ನಮಗೆ ಬೇಕಾದ ಅನುಭವ ಕೊಟ್ಟು ದಾರಿತೋರಿ ಪ್ರೋತ್ಸಾಹಕೊಟ್ಟ ವಿವಿಧ ಸರಕಾರಿ ಇಲಾಖೆಯ ಅಧಿಕಾರಿಗಳಿಗೆ ನಮ್ಮ ವಿಶೇಷ ಕೃತಜ್ಞತೆಯನ್ನು ಹೇಳಿಕೊಳ್ಳಬೇಕು. ಜಿಲ್ಲಾ ಕಲೆಕ್ಟರರಾಗಿದ್ದ ರಾವ್ ಬಹದ್ದೂರ್ ಶ್ರೀ

. ರಾಮದಾಸ, ಬಿ. ಎ. ಇವರು ನಮಗೆ ಬಹಳ ಸಹಾಯ ಮಾಡಿದ್ದಾರೆಂಬು ನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕು. ಅವರು ನಮ್ಮ ಸ್ನೇಹಿತ, ತತ್ವಜ್ಞಾನಿ, ಗೂ ಮಾರ್ಗದರ್ಶಕರಾಗಿದ್ದು ಅವರ ಸಹಾಯ ಸಹಾನುಭೂತಿಗಳು ಮಗೆ ಬೇಕಾದಾಗಲೆಲ್ಲ ಸಿಕ್ಕುತ್ತಿದ್ದುವು. ಇದೇ ಬಗೆಯ ಮಾತ್ರವಲ್ಲ, ದಕ್ಕೂ ಹೆಚ್ಚಿನ ಉತ್ತೇಜನವು ನಮ್ಮ ಮುಂದಿನ ಯತ್ನಗಳಿಗೂ ದೊರೆಯು ದೆಂದು ನಿರೀಕ್ಷಿಸುತ್ತೇವೆ. ಸಾರ್ವಜನಿಕ ಸೇವಾಭಾವದಿಂದ ಪ್ರೇರಿತರಾದ ನೇಕ ಸ್ತ್ರೀಯರು, ಪುರುಷರು, ಸಂಸ್ಥೆಗಳು ಮತ್ತು ಸಂಘಗಳು ನಮ್ಮ ಂಬಲಕ್ಕೆ ನಿಂತಿವೆ. ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

. **ಸೂಃ**— ಈ ವರ್ಷ 2ನೇ ಬೆಳೆಗೆ ಧರ್ಮಾರ್ಥ ಗೊಬ್ಬರವನ್ನು ಹಂಚುವಂತೆ ಜಿಲ್ಲಾ ಕಲೆಕ್ಟರನ್ನು ಮತ್ತು ಕೃಷಿ ಆಫೀಸರನ್ನು ಕೇಳಿಕೊಂಡಿರುತ್ತೇವೆ.

. ಟಿ. ಪೂಂಜ,	**ಡಾ। ಎಂ. ಆರ್. ಶೆಟ್ಟಿ,**	**ಎಂ. ಆರ್. ಪೂಂಜ,**
ಅಧ್ಯಕ್ಷ.	ಉಪಾಧ್ಯಕ್ಷ.	ಕಾರ್ಯದರ್ಶಿ.

ಕೇಂದ್ರ ಮತ್ತು ಸ್ಥಳೀಕ ಕಮಿಟಿಗಳ ಸದಸ್ಯರು.

ಹಳೆಯಂಗಡಿ ಉಪಕೇಂದ್ರ:

1. ಶ್ರೀ ವಾಸು ಶೆಟ್ಟಿ
2. ,, ಶಂಭು ಮಲ್ಲಿ } ಜತೆಕಾರ್ಯದರ್ಶಿಯರು.
3. ,, ಸಂಜೀವ ಶೆಟ್ಟಿ }
4. ,, ಲಿಂಗಪ್ಪ ಶೆಟ್ಟಿ.
5. ,, ಮೈಂದ ಹೆಗ್ಡೆ.

ಕಿನ್ನಿಗೋಳಿ:

1. ಶ್ರೀ ಶ್ರೀಧರ ಶೆಟ್ಟಿ } ಜತೆಕಾರ್ಯದರ್ಶಿಯರು.
2. ,, ಭೋಜ ಶೆಟ್ಟಿ }
3. ,, ದೇಜಪ್ಪ ಶೆಟ್ಟಿ.
4. ,, ಚಂದಯ್ಯ ಶೆಟ್ಟಿ.
5. ,, ಜೋಗಿ ಶೆಟ್ಟಿ.

ಮುಂಡ್ಕೂರು:

1. ಶ್ರೀ ಕೃಷ್ಣ ಶೆಟ್ಟಿ } ಜತೆಕಾರ್ಯದರ್ಶಿಯ
2. ,, ರಾಮಯ್ಯ ಬಲ್ಲಾಳ }
3. ,, ಇನ್ನ ಕೃಷ್ಣ ಶೆಟ್ಟಿ.
4. ,, ಶೀನ ಅಜಿಲ.
5. ,, ರುಕ್ಕ ಶೆಟ್ಟಿ.
6. ,, ನಾರಾಯಣ ಶೆಟ್ಟಿ.

ಫಲಿಮಾರು:

1. ಶ್ರೀ ಬೊಳ್ಳೊಟ್ಟು ದೊಡ್ಡಣ್ಣ ಶೆಟ್ಟಿ } ಜತೆಕಾರ್ಯ
2. ,, ಕೆಲ್ಲಾರು ದೊಡ್ಡಣ್ಣ ಶೆಟ್ಟಿ } ದರ್ಶಿಯರು
3. ,, ಕರ್ನಿರೆ ರಾಮಣ್ಣ ಶೆಟ್ಟಿ.
4. ,, ರುಕ್ಕಯ್ಯ ಶೆಟ್ಟಿ.
5. ಡಾಕ್ಟರ್ ನಂಬಿಯಾರ್.

ಮೂಲ್ಕಿ:

1. ಶ್ರೀ ಕರಿಯಣ್ಣ ಶೆಟ್ಟಿ } ಜತೆಕಾರ್ಯದರ್ಶಿಯರು.
2. ,, ಸಿದ್ದು ಶೆಟ್ಟಿ }
3. ,, ಹೂವಯ್ಯ ಶೆಟ್ಟಿ.
4. ,, ಪಾದೆಬೆಟ್ಟು ನಾರಾಯಣ ಶೆಟ್ಟಿ.
5. ,, ಯೆಲ್ಲಪ್ಪ ಶೆಟ್ಟಿ.
6. ,, ಬಾಲಕೃಷ್ಣ ಶೆಟ್ಟಿ.
7. ,, ಮಹಾಲಿಂಗ ಶೆಟ್ಟಿ.
8. ,, ಪೂವಣಿ ಶೆಟ್ಟಿ.
9. ,, ಅಣ್ಣು ಶೆಟ್ಟಿ.
10. ,, ಎಂ. ಆರ್. ಪೂಂಜ.

ಕೇಂದ್ರ ಕಮಿಟಿ: 1. ಶ್ರೀ. ಎ. ಟಿ. ಪೂಂಜ—ಅಧ್ಯಕ್ಷ.

2. ಡಾಕ್ಟರ್ ಎಂ. ಆರ್. ಶೆಟ್ಟಿ—ಉಪಾಧ್ಯಕ್ಷ.

3. ಶ್ರೀ. ಎಂ. ಆರ್. ಪೂಂಜ—ಕಾರ್ಯದರ್ಶಿ.

ಮೂಲ್ಕಿ ಕಮಿಟಿಯ ಎಲ್ಲಾ ಸದಸ್ಯರು ಮತ್ತು ಇತರ ಕಮಿಟಿಯ ಕಾರ್ಯದರ್ಶಿಯರು.

ಟಿಪ್ಪಣಿ:—ಬಂಟರ ಯಾನೆ ನಾಡವರ ಸಂಘದ ಆಶ್ರಯದಲ್ಲಿ ಕೆಲಸ ಆರಂಭಮಾಡಲ್ಪಟ್ಟು ಆ ಸಂಘದ ಸದಸ್ಯರಿದ್ದವರನ್ನು ಮಾತ್ರ ಸೇರಿಸಿಕೊಳ್ಳಬೇಕಾಗಿ ಬಂತು ಕೆಲಸವು ಮುಂದರಿದಂತೆ ಇತರರನ್ನೂ ಸೇರಿಸಲಾಗುವುದು.

ಪರಿಶಿಷ್ಟ 2.

ತಾ. 23—9—1945 ರಲ್ಲಿ ಫಲಿಮಾರು ಸಭೆಯಲ್ಲಿಯೂ ಹಳೆಯಂಗಡಿ ಮತ್ತು ಮೂಲ್ಕಿ ಸಭೆಗಳಲ್ಲಿಯೂ ಮಂಜೂರಾದ ಕಾರ್ಯಕ್ರಮ.

ಪ್ರತಿ ಕುಟುಂಬವು ಆದರ್ಶ ಕುಟುಂಬವಾಗುವಂತೆ ಮತ್ತು ಕ್ರಮೇಣ ಪ್ರತಿ ಗ್ರಾಮವು ಆದರ್ಶ ಗ್ರಾಮವಾಗುವಂತೆ ಕಾರ್ಯಕ್ರಮವು ರೂಪಿಸಲ್ಪಡುವುದು.

ಆದರ್ಶ ಕುಟುಂಬವು ಮೊದಲಾಗಿ ಈ ಕೆಳಗಿನ ನಾಲ್ಕು ಆವಶ್ಯಕತೆಗಳನ್ನು ಸಾಧಿಸಬೇಕು:—

1. ನಿರ್ಮಲಾದೊಂದು ಮನೆ, ತೋಟ ಮತ್ತು ಬಾವಿ.

2. ಗೊಬ್ಬರ ಅಥವಾ ಕೊಳೆಯ ಹೊಂಡ.

3. ಮನೆಯುಪಯೋಗಕ್ಕೆ ಇಡೀ ವರ್ಷ ಒಂದಲ್ಲೊಂದು ತರಕಾರಿ ಒದಗಿಸುವ ಒಂದು ತರಕಾರೀ ಹಿತ್ತಲು.

4. ಕುಟುಂಬದ ಪ್ರತಿಯೊಬ್ಬರೂ ತಿಂಗಳಿಗೆ ಆಣೆ 0—4—0 ಉತ್ಪತ್ತಿಯನ್ನಾದರೂ ದೊರಕಿಸುವ ಒಂದು ಉಪಕೈಗಾರಿಕೆಯನ್ನು ಕೈಕೊಳ್ಳುವಿಕೆ.

ಎರಡನೆಯದಾಗಿ ಈ ಕೆಳಗಿನ ಧ್ಯೇಯಗಳಲ್ಲಿ ಸಾಧ್ಯವಿದ್ದಷ್ಟನ್ನು ಸಾಧಿಸಲು ಯತ್ನಿಸಬೇಕು:—

1. ಶಾಲೆಗೆ ಹೋಗುವ ಪ್ರಾಯದ ಎಲ್ಲಾ ಮಕ್ಕಳು ಶಾಲೆಗೆ ಸೇರಬೇಕು.

2. ಒಂದು ದನ ಅಥವಾ ಎಮ್ಮೆ ಸಾಕಬೇಕು.

3. ಸರಳ ಅಭ್ಯಾಸಗಳನ್ನು ಬೆಳೆಸಬೇಕು.

4. ಅನಾವಶ್ಯಕ ಮತ್ತು ಹಾಳಾಗುವ ಖರ್ಚುಗಳನ್ನು ನಿಲ್ಲಿಸಬೇಕು.

5. ಎಲ್ಲಾ ಸಾಲಗಳಿಂದ ಬಿಡುಗಡೆ.

6. ಸಾಧ್ಯವಿದ್ದ ಸ್ಥಳಗಳಲ್ಲೆಲ್ಲ ಕೃಷಿ ಮಾಡಬೇಕು.

7. ತಿಂಗಳಲ್ಲಿ ಒಂದು ಒಳ್ಳೆಯ ಕಾರ್ಯವನ್ನಾದರೂ ಮಾಡಬೇಕು.

8. ಪ್ರತಿ ಪ್ರಾಯಸ್ಥನು ಯಾವುದಾದರೂ ಉಪಯುಕ್ತ ಉತ್ಪತ್ತಿದಾಯಕ ಹಾಗೂ ನ್ಯಾಯವಾದ ಉದ್ಯೋಗದಲ್ಲಿ ನಿರತನಾಗಬೇಕು.

9. ಪಕ್ಷಕಲಹ ಹಾಗೂ ವ್ಯಾಜ್ಯಗಳನ್ನು ತ್ಯಜಿಸುವುದು.

10. ಸಮಾಜದ ಪ್ರತಿಯೊಬ್ಬನ ತಿಳುವಳಿಕೆ, ದಕ್ಷತೆ ಮತ್ತು ಆರೋಗ್ಯಗಳನ್ನು ಉತ್ತಮಗೊಳಿಸುವ, ಓದುವುದು, ಬರೆಯುವುದು, ಭಾಷಣ ಮಾಡುವುದು, ಹಾಡುವುದು, ಶರೀರವ್ಯಾಯಾಮ ಇತ್ಯಾದಿ ಅಭ್ಯಾಸ ಮಾಡುವುದು.

11. ಸಂತತಿ ನಿಯಮನ.

12. ಸಹಕಾರೀ ಸಂಸ್ಥೆಗಳನ್ನು ಬೆಳೆಸುವುದು.

13. ಅಸ್ಪೃಶ್ಯತೆಯನ್ನು ನಿವಾರಿಸಲೆತ್ನಿಸುವುದು.

14. ಹೂಡಲು ಒಳ್ಳೆಯ ಒಂದು ಜೋಡು ಹೋರಿಯನ್ನಿಡುವುದು.

ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾದರೆ:—

1. ರೈತರ ಕಲ್ಯಾಣವನ್ನಾಶಿಸುವ ಇಬ್ಬರು ಅಥವಾ ಹೆಚ್ಚಿನ ಸದ್ಗೃಹಸ್ಥರು 1945ರ ಆಖೈರಿಯೊಳಗೊಮ್ಮೆ ಮತ್ತು 1946ರ ದಶಂಬರದೊಳಗೊಮ್ಮೆ ಪ್ರತಿ ಗ್ರಾಮವನ್ನು ಸಂದರ್ಶಿಸುವಂತೆ ಕೇಳಿಕೊಳ್ಳಬೇಕು.

2. ಕೃಷಿ, ಗುಡಿಕೈಗಾರಿಕೆಗಳು ಅಥವಾ ಇನ್ನಾವ ಉಪಯುಕ್ತ ಚಟುವಟಿಕೆಗಳ ಬಗ್ಗೆ ಇತರರಿಗೆ ಆದರ್ಶವಾಗುವಂತೆ ಕೆಲಸಮಾಡುವವರಿಗೆ ರತ್ನ, ಭೂಷಣ, ಪ್ರವೀಣ, ಚಂದ್ರ, ವಿನೋದ ಇತ್ಯಾದಿ ಬಿರುದುಗಳನ್ನು ಕೊಡಲು ಏರ್ಪಡಿಸಬೇಕು.

3. ಒಕ್ಕಲುಗಳಿಂದ ಮತ್ತು ವರ್ಗದಾರರಿಂದ ಪ್ರತ್ಯೇಕವಾಗಿ ಸಾಗುವಳ್ಳಿಯಾದ ಪ್ರತಿ ಒಂದು ಎಕ್ರೆಗೆ ಒಂದು ಸೇರು ಅಕ್ಕಿಯಂತೆ ವಂತಿಗೆ ವಸೂಲು ಮಾಡಬೇಕು. ಪ್ರತಿ ಗ್ರಾಮದಲ್ಲಿ ವಸೂಲಾದುದರಲ್ಲಿ $\frac{1}{8}$ನೇ ಅಂಶ ಅಲ್ಲಿಯ ಮೂರು ಆದರ್ಶ ಕುಟುಂಬಗಳಿಗೆ 4; 2; 1ರ. ದಾಮಾಶೆಯಲ್ಲಿ ಬಹುಮಾನ ವಿತರಣಕ್ಕಾಗಿ ವಿನಿಯೋಗಿಸಬೇಕು. ಉಳಿದ $\frac{1}{8}$ನೇ ಅಂಶದಲ್ಲಿ ಗ್ರಾಮ

ಳಿಂದ ಒಟ್ಟು ಕೂಡಿಸಿ ಖರ್ಚು ಕಳೆದು ಉಳಿದುದನ್ನು ಇಡೀ ಕೇಂದ್ರದಲ್ಲಿ ಆದರ್ಶ ಕುಟುಂಬವೊಂದಕ್ಕೆ ಬಹುಮಾನವಾಗಿ ಕೊಡಲು ಉಪಯೋಗಿಸ ಬೇಕು. ಪ್ರತಿ ಗ್ರಾಮದಲ್ಲಿ ಕೊಡುವ ಮೊದಲಿನ ಎರಡು ಬಹುಮಾನಗಳೂ 8 ಗ್ರಾಮಗಳಲ್ಲಿ ಆದರ್ಶವೆನ್ನಿಸುವ ಒಂದು ಕುಟುಂಬಕ್ಕೆ ಕೊಡುವ ಬಹು ಮಾನವೂ ರೈತರಿಗೇ ಕೊಡಲ್ಪಡಬೇಕು. ಪ್ರತಿ ಗ್ರಾಮದಲ್ಲಿಯ ಮೂರನೆಯ ಬಹುಮಾನವನ್ನು ರೈತ ಅಥವಾ ರೈತರಲ್ಲದವರಿಗೂ ಕೊಡಬಹುದು.

4. ಪ್ರತಿಯೊಂದು ವಿಧದ ಕೆಲಸಕ್ಕೆ ಪಂಚಾಯತು ನಿಧಿಗಳಿಂದ ಅಥವಾ ಇನ್ನಾವದಾದರೂ ನಿಧಿಗಳಿಂದ ಸಹಾಯ ಹೊಂದಲು ಯತ್ನಿಸ ಬೇಕು.

ವಿವರಣೆಗಳು

ನಾಲ್ಕು ಆವಶ್ಯಕತೆಗಳು:— ಆಯಾ ಕುಟುಂಬದ ಸ್ಥಿತಿ ಗತಿ ಹಾಗೂ ಜೀವನೋಪಾಯಕ್ಕೆ ತಕ್ಕಂತೆ ಇರುವುದೇ ಎಂದು ಪರಿ ಶೀಲಿಸಲಾಗುವುದು ಆದರೆ ಭಾವಿಗೆ ಸುತ್ತ ಗೋಡೆ ಇರಬೇಕು, ಮಳೆನೀರು ಅದಕ್ಕೆ ಹರಿಯಬಾರದು ಮತ್ತು ಎಲೆ ಮೊದಲಾದವು ಅದರಲ್ಲಿ ಬೀಳಬಾರದು. ತೋಟದಲ್ಲಿ ಕೊಳಕು ನೀರು ನಿಲ್ಲ ಬಾರದು.

1 ಗೊಬ್ಬರ—ಹೊಂಡಕ್ಕೆ ಮಾಡು ಇರಬೇಕು—ಮುಂದಿನ ವರ್ಷ ಸಸಿ ನೆಡಲು ಇದನ್ನು ಉಪಯೋಗಿಸಬೇಕು.

1 ಉಪ ಕೈಗಾರಿಕೆಗಳು ಇವುಗಳಲ್ಲಿ ಒಂದಿರಬಹುದು. ತರಕಾರಿ ಮತ್ತು ಹಣ್ಣು ಬೆಳೆಸುವುದು, ಜೇನುನೊಣ ಸಾಕುವಿಕೆ, ಕೋಳಿ ಸಾಕುವಿಕೆ, ಹಾಲು ತುಪ್ಪ ವಗೈರೆ ತಯಾರಿ, ಹಂದಿ ಸಾಕುವಿಕೆ, ನೂಲುವುದು, ನೇಯುವುದು, ಕತ್ತದ ಕೆಲಸ ಮತ್ತು ಇದಕ್ಕೆ ಸಂಬಂಧಪಟ್ಟ ಇತರ ಕಸಬುಗಳು, ಚಾಪೆ ಹೆಣೆಯುವುದು, ಹಿಡಿ ಸೂಡಿ ಮಾಡುವುದು, ಮಣ್ಣಿನ ಪಾತ್ರೆಗಳ ತಯಾರಿ, ಮರದ ಕೆಲಸ ಇತ್ಯಾದಿ.

1 ಗ್ರಾಮೋನ್ನತಿಯ ಕಾರ್ಯಕ್ರಮಕ್ಕೆ ಒಬ್ಬ ರೈತನನ್ನು ಸೇರಿಸು ವುದು, ಸಾರ್ವಜನಿಕ ಹಿತದ ಒಂದು ಒಳ್ಳೆಯ ಕೆಲಸದಲ್ಲಿ ಎಣಿ ಸಲ್ಪಡುವುದು.

1 ಉಪ ಕೈಗಾರಿಕೆಗಳನ್ನು 1ನೇ ಭಾಗದ ನಾಲ್ಕು ಆವಶ್ಯಕತೆಗಳಲ್ಲಿ ಸೇರಿಸಲಾಗಿದೆ. ಇಲ್ಲಿ ಅಭಿಪ್ರಾಯವೇನೆಂದರೆ ಕುಟುಂಬದಲ್ಲಿ

ಪ್ರತಿಯೊಬ್ಬರೂ ಉಪಯುಕ್ತ ಕಸಬಿನಲ್ಲಿ ನಿರತರಿರಬೇಕೆಂಬುದೇ ಇರುತ್ತದೆ.

(9) ಉದ್ಯೋಗದಲ್ಲಿ ನಿರತರಾಗುವುದು ಪಕ್ಷ ಕಲಹ ಮತ್ತು ವ್ಯಾಜ್ಯ ಗಳನ್ನು ನಿವಾರಿಸಲು ದಾರಿ ಕುರಿತಾಗಿ ಯತ್ನಿಸಿದರೆ ಇನ್ನಷ್ಟು ಸಹಾಯವಾಗುವುದು.

(10) ಪ್ರಾಯಸ್ಥರಿಗೆ ಹಾಗೂ ಎಲ್ಲಾ ಜನರಿಗೆ ಓದುಬರಹ ಬರ ಬೇಕೆಂಬುದು ಉದ್ದೇಶ.

(11) ಇದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿಕ್ಕಿಲ್ಲ. ಆದರೆ ಒಂದು ಸೂಚನೆಯನ್ನಾಗಿ ಮಾತ್ರ ಇಲ್ಲಿ ಕೊಡಲ್ಪಾಗಿದೆ.

(1) ಸಾರ್ವಜನಿಕ ಸೇವೆಯಲ್ಲಿ ಆತುರವುಳ್ಳ ಸದ್ಗೃಹಸ್ಥರು ಯಾವಾ ಗಲೂ ಇದ್ದಾರೆ. ಮತ್ತು ಅವರು ಇಂಥ ತೊಂದರೆಗಳನ್ನು ಕೈಕೊಳ್ಳಲು ಸಿದ್ಧರಿರುತ್ತಾರೆ. ಇದರಿಂದ ಜನರಲ್ಲಿ ಉತ್ಸಾಹ ಬಂದು ತಾನು ಇತರರನ್ನು ಮಿಗಿಸಬೇಕೆಂಬ ಹುರುಪು ಬರು ವಂತಾಗುತ್ತದೆ.

(2) ಒಳ್ಳೆಯ ಕೆಲಸ ಉತ್ತಮ ರೀತಿಯಲ್ಲಿ ಮಾಡಿದ್ದಕ್ಕೆ ಸುಲಭ ರೀತಿ ಯಲ್ಲಿ ಖರ್ಚಿಲ್ಲದೆ ಮನ್ನಣೆಕೊಡಲು ಇದು ದಾರಿ.

(3) ಸಾಂಕ್ರಮಿಕ ರೋಗಗಳು ಬಂದಾಗ ಇಂಥ ವಂತಿಗೆ ವಸೂಲು ಮಾಡುವ ವಾಡಿಕೆ ಹಳ್ಳಿಗಳಲ್ಲಿದೆ. ಇಲ್ಲಿ ಒಂದು ಒಳ್ಳೆಯ ಉದ್ದೇಶಕ್ಕಾಗಿ ಇಂಥ ವಂತಿಗೆ ವಸೂಲಿಯ ಯೋಜನೆ ಇದ್ದು ಈ ವಂತಿಗೆಗಳನ್ನು ಕೂಡಿಸಲು ಕಷ್ಟವಾಗಲು ಕಾರಣವಿಲ್ಲ.

ಎಮ್. ಆರ್. ಪೂಂಜ.

ಕಾರ್ಯದರ್ಶಿ.

ಪರಿಶಿಷ್ಟ 3.

ಜಮಾ.				ರೂ.	ಆ.	ಪೈ
ಬಂಟರ ಯಾನೆ ನಾಡವರ ಸಂಘದಿಂದ (22-2-45ರಿಂದ 1945 ದಶಂಬರ ತನಕ ಜರಗಿಸಿದ 23 ಸಭೆಗಳ ಮತ್ತು 2-9-45ರ ಸಸಿ ನೆಡುವ ಸಮಾರಂಭದ ಖರ್ಚಿನ ರೂ. 150 13-9ರ ಪೈಕಿ) . . .				100	0	0
1945 ದಶಂಬರದ ಪ್ರದರ್ಶನದಲ್ಲಿ ಟಿಕೇಟು ಮಾರಾಟ ಮತ್ತು ಅಂಗಡಿ ಬಾಡಿಗೆಗಳಿಂದ . . .				800	8	0
ಬಹುಮಾನ ವಿತರಣೆಗಾಗಿ ಪ್ರತ್ಯೇಕಿಸಿಕೊಟ್ಟ ವಂತಿಗೆ .				45	0	0
ದೇವಸ್ಥಾನಗಳಿಂದ . .	160	0	0			
ಸಹಕಾರೀ ಸಂಘಗಳಿಂದ . .	138	0	0			
ಪಂಚಾಯತ ಬೋರ್ಡುಗಳಿಂದ .	68	0	0			
ಪ್ರದರ್ಶನದಲ್ಲಿ ಸ್ವಯಂಸೇವಕಿಯರು ಕೂಡಿಸಿದ್ದು	293	1	7			
ಇತರ ವ್ಯಕ್ತಿ ವಂತಿಗೆಗಳು . .	123	8	0			
ಜಿಲ್ಲಾ ಬೋರ್ಡಿನಿಂದ . .	50	0	0	832	9	3
S/B ಲೆಕ್ಕದ ಬಡ್ಡಿ ಜಮಾ . .				0	14	2
ಜುಮ್ಲಾ				1,778	15	5

ಸೂಚನೆ. 1. ಕಾರ್ನಾಡಿನ ಬಿ. ಇ. ಎಮ್. ಹಾಯರ್. ಎಲಿಮೆಂಟರಿ ಶಾಲೆಗೆ ವಾಗ್ದಾನ ಮಾಡಿದ ಗಡಿಯಾರವನ್ನು ಪಡೆಯಲು ನಮಗೆ ಸಾಧ್ಯವಾಗಲಿಲ್ಲ.

ಖರ್ಚು.	ರೂ.	ಆ.	ಪೈ
25-2-45ರಿಂದ 1945 ದಶಂಬರ ತನಕದ 22 ಸಭೆಗಳಿಗೆ ಮತ್ತು 2-9-45ರ ಸಸಿ ನೆಡುವ ಸಮಾರಂಭಕ್ಕೆ ಖರ್ಚು.	150	13	9
ಪ್ರದರ್ಶನದ ಖರ್ಚು	732	2	4
22ರಿಂದ 34ರತನಕದ ಸಭೆಗಳು	24	10	3
ಮುದ್ರಣ ಖರ್ಚು ಸಲ್ಲಲಿಕ್ಕಿರುವುದು	39	12	3
ಮುದ್ರಣ ಖರ್ಚು	30	8	0
ಇತರ ಖರ್ಚು	19	8	0
ಟೈಪಿಂಗ್ ಖರ್ಚು	20	4	0
ಟಪ್ಪಾಲು ಖರ್ಚು	15	13	3
ಾಚನ ಖರ್ಚು	86	4	0
ಲಿಮಾರು ಪಡುಬಿದ್ರೆಯಲ್ಲಿ ಶಾಲಾ ಕಟ್ಟಡಕ್ಕೆ ವಂತಿಗೆ	40	0	0
ಷಿಕ್ಷೇತ್ರಗಳನ್ನು ಸಂದರ್ಶಿಸಲು ಆರಿಸಲ್ಪಟ್ಟ ಸದಸ್ಯರ ಖರ್ಚು	15	0	0
	1,271	3	10
ಲ್ಕು	557	3	7
ಜುಮ್ಲಾ	**1,778**	**15**	**5**

ನಮ್ಮ ಸಭೆಗಳ ಸಂದರ್ಭ ಹರಿಜನರಿಗೆ ಊಟಕೊಡಲು ಸಹಾಯ ಮಾಡಿದ ದೇವಸ್ಥಾನ ಮತ್ತು ನಮ್ಮ ಸದಸ್ಯರು ಮಾಡಿದ ಖರ್ಚುಗಳನ್ನು ಲೆಕ್ಕಕ್ಕೆ ಹಿಡಿಯಲಿಲ್ಲ. ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳು.

34ನೇ ಮತ್ತು 35ನೇ ಸಭೆಗಳಲ್ಲಿ ಮಂಜೂರು ಮಾಡಲ್ಪಟ್ಟು 1-9-46ರಲ್ಲಿ ಜರಗುವ 2ನೇ ಸಸಿ ನೆಡುವ ಕಾರ್ಯಕ್ರಮದ ಸಂದರ್ಭದಲ್ಲಿ ಮೂಲ್ಕಿ ಗ್ರಾಮೋನ್ನತಿ ಕೇಂದ್ರದ 13 ಉಪಕೇಂದ್ರಗಳ ಮುಂದೆಯೂ ಇಡಲಾಗುವ ನಿರ್ಣಯಗಳು:—

1. ಗ್ರಾಮರಹದಾರಿಗಳನ್ನು ಸುಧಾರಿಸುವುದು ಅತೀ ಅಗತ್ಯ ಮತ್ತು ಅಪೇಕ್ಷಣೀಯವಿರುವುದರಿಂದ ಪ್ರತಿ ಗ್ರಾಮದವರು ಪಂಚಾಯತು ಬೋರ್ಡು ಮತ್ತು ಸ್ಥಳೀಕ ಕೇಂದ್ರ ಕಮಿಟಿಗಳ ಸಹಾಯದಿಂದ 1946ನೇ ದಶಂಬರದ ಒಳಗೆ ತಮ್ಮ ಗ್ರಾಮಕ್ಕೆ ಬರುವ ಕಾಲುದಾರಿ, ಒಳದಾರಿ ಇತ್ಯಾದಿಗಳೆಲ್ಲವನ್ನು ಸಾಧ್ಯವಿದ್ದಲ್ಲೆಲ್ಲ ಗ್ರಾಮರಸ್ತೆಗಳನ್ನಾಗಿ ದುರುಸ್ತಿ ಮಾಡಬೇಕು ಅಥವಾ ಮಾರ್ಪಡಿಸಬೇಕೆಂದು ನಿರ್ಣಯಿಸುತ್ತದೆ.

2. ಸಾಗುವಳಿ ನೀರಾವರಿಗಾಗಿ ಇದ್ದ ಕೆರೆ, ಕಟ್ಟೆಗಳು, ತೋಡುಗಳು ಇತ್ಯಾದಿ ಗಮನಿಸುವವರಿಲ್ಲದೆ ಸಾಧಾರಣ ನಿಷ್ಪ್ರಯೋಜಕವಾಗಿವೆಯೆಂಬುದರಿಂದ ಮತ್ತು ಸಾಗುವಳಿ ಉಪಯೋಗಕ್ಕೆ ಸಿಗಬಹುದಾದ ನೀರಾಶ್ರಯಗಳಗಳನ್ನೆಲ್ಲ ಉಪಯೋಗಿಸಿಕೊಳ್ಳುವುದು ಅತ್ಯಂತ ಆವಶ್ಯಕವಿರುವುದರಿಂದ ಪ್ರತಿ ಗ್ರಾಮದವರು ಕೆಲಸರೂಪದಲ್ಲಿ ಅಥವಾ ಹಣರೂಪದಲ್ಲಿ ಅಥವಾ ಎರಡೂ ರೀತಿಗಳಲ್ಲಿ ವಂತಿಗೆ ಕೂಡಿಸಿ, ಸರಕಾರದಿಂದ ಸಿಗಬಹುದಾದ ಸಹಾಯವನ್ನೂ ಉಪಯೋಗಿಸಿಕೊಂಡು ಒಂದು ಕೆರೆ, ಕಟ್ಟೆ, ಮದಗ ಮತ್ತು ಇದಕ್ಕೆ ಸಂಬಂಧಪಟ್ಟ ತೋಡುಗಳನ್ನು ದುರಸ್ತಿ ಮಾಡಿಡಲು ಒಗ್ಗಟ್ಟಿನ ಪ್ರಯತ್ನ ಮಾಡಬೇಕೆಂದು ನಿರ್ಣಯಿಸುತ್ತದೆ.

3. ನಮ್ಮ ಕಾರ್ಯಕ್ರಮದಲ್ಲಿ ಕಾಣಿಸಿದಂತೆ ಆದರ್ಶಕುಟುಂಬವಾಗುವಂತೆ ಬೇಕಾದ ಉತ್ತೇಜನ ಮತ್ತು ಪ್ರೋತ್ಸಾಹಕೊಡಲು ಮತ್ತು ತನ್ಮೂಲಕ ಆದರ್ಶ ಗ್ರಾಮರಚನೆಯನ್ನು ಸಾಧಿಸಲು ಪ್ರತಿ ಗ್ರಾಮದಲ್ಲಿಯ ಆದರ್ಶ ಕುಟುಂಬಕ್ಕೆ ಬಹುಮಾನಗಳನ್ನು ಕೊಡಬೇಕೆಂದೂ, ಇದಕ್ಕಾಗಿ ಪ್ರತಿ ಗ್ರಾಮದಲ್ಲಿ ಸಾಗುವಳ್ಳಿಯಾದ ಪ್ರತಿ ಎಕ್ರೆಗೆ ಒಂದು ಸೇರಿನಂತೆ ಅಕ್ಕಿ ವಂತಿಗೆ ವಸೂಲು ಮಾಡಬೇಕೆಂದೂ ನಿರ್ಣಯಿಸುತ್ತದೆ.

4. ಕುಡುಕತನ, ಜುಗಾರು, ವ್ಯಾಜ ಮತ್ತು ಮದುವೆ ಇತ್ಯಾದಿ ಸಮಾರಂಭಗಳಲ್ಲಿಯ ದುಂದುಗಾರಿಕೆ ಇದನ್ನು ನಿವಾರಿಸಲು ಎಲ್ಲರೂ ಯತ್ನಿಸಬೇಕೆಂದೂ, ವಿಹಾರ ಸ್ಥಳಗಳು, ಯಕ್ಷಗಾನ ಸಭೆಗಳು ಇತ್ಯಾದಿಗಳನ್ನು

ವ್ಯವಸ್ಥೆಗೊಳಿಸಿ ವಿಹಾರ ಚಟುವಟಿಕೆಗಳಿಗೆ ಪ್ರೋತ್ಸಾಹಕೊಡಬೇಕೆಂದೂ ನಿರ್ಣಯಿಸುತ್ತದೆ.

5. ಚಾ ಮತ್ತು ಕಾಫಿ ಕುಡಿಯುವ ಅಭ್ಯಾಸವು ಹಳ್ಳಿಗರಲ್ಲಿ ಕೂಡ ಗದಿಂದ ಹಬ್ಬುತ್ತಿದೆಯಾದುದರಿಂದ ಮತ್ತು ಈ ಅಭ್ಯಾಸವು ಅವರ ೋಗ್ಯ ಹಾಗೂ ಆರ್ಥಿಕ ಸ್ಥಿತಿಗೆ ಹಾನಿಕರವಿರುವುದರಿಂದ ಇವು ಬೇಕಾ ರು ತಮ್ಮ ಮನೆಗಳಲ್ಲೇ ತಯಾರಿಸಿ ಉಪಯೋಗಿಸ ಬೇಕೆಂದೂ, ತಮ್ಮ ನೆಯಿಂದ 2 ಮೈಲುಗಳ ಸರಹದ್ದಿನೊಳಗೆ ಹೊಟೇಲುಗಳಲ್ಲಿ ಚಾ ಮತ್ತು ಫಿ ತೆಗೆದುಕೊಳ್ಳಬಾರದೆಂದೂ ನಿರ್ಣಯಿಸುತ್ತದೆ.

6. 27ನೇ ಸಭೆಯಲ್ಲಿ ಮತ್ತು ಶ್ರೀ ಚೆನ್ನರಾಯ ಸಾವಂತರ ಅಧ್ಯಕ್ಷತೆ ಲ್ಲಿ ಜರಗಿದ 33ನೇ ಸಭೆಯಲ್ಲಿ ಕೂಡಾ ನಿರ್ಣಯಿಸಿದಂತೆ ಅಸ್ಪೃಶ್ಯತೆ ನ್ನು ಆದಷ್ಟು ಬೇಗನೆ ನಿವಾರಿಸಬೇಕೆಂದೂ ಮತ್ತು ಇದಕ್ಕಾಗಿ ದೇವಸ್ಥಾನ ತ್ತು ಮಠಗಳ ಆಡಳ್ತೆದಾರರು ಹರಿಜನರಿಗೆ ಪ್ರವೇಶಕೊಡುವಂತೆ ಅವರನ್ನು ಳಿಕೊಳ್ಳಬೇಕೆಂದೂ ನಿರ್ಣಯವಾದುದಕ್ಕೆ ಅನುಕೂಲ ವಾತಾವರಣ ಟ್ಟಿಸಲು ಬೇಕಾದ ಕಾರ್ಯಗಳನ್ನು ಮಾಡಬೇಕೆಂದೂ, ಈ ವಿಷಯದಲ್ಲಿ ಡಾ ನಮ್ಮ ಕೇಂದ್ರವು ಇತರರು ಅನುಸರಿಸುವಂತೆ ಯೋಗ್ಯವಾಗಿ ಮಾಡ ಕೆಂದೂ ನಿರ್ಣಯಿಸುತ್ತದೆ.

7. 1946ನೇ ದಶಂಬರದಲ್ಲಿ ಮೂಲ್ಕಿಯಲ್ಲಿ ಜರಗಲಿರುವ ಪ್ರದರ್ಶನ ನ್ನು ಯಶಸ್ವಿಗೊಳಿಸುವಂತೆ ಎಲ್ಲಾ ಯತ್ನಗಳನ್ನು ಮಾಡಬೇಕಾಗಿ ರ್ಣಯಿಸುತ್ತದೆ. ಕಳೆದ ಪ್ರದರ್ಶನದಲ್ಲಿ ಭಾಗವಹಿಸಿದ ಎಲ್ಲಾ ಆಫೀಸರರು ತ್ತು ಇತರರು ಈ ಬಾರಿಯೂ ಸಹಕರಿಸುವಂತೆ ಕೇಳಬೇಕಾಗಿಯೂ ರ್ಣಯಿಸುತ್ತದೆ. ಈ ಬಾರಿಯ ಪ್ರದರ್ಶನಕ್ಕೆ ಟಿಕೇಟುಗಳನ್ನಿಡದೆ ರ್ಮಾರ್ಥ ನಡೆಸುವ ಯೋಚನೆ ಇರುವುದಿರಿಂದ ತಮ್ಮ ಮುನಾಸಬಿನಂತೆ ಡಬಹುದಾದ ಸಹಾಯ ಧನದಿಂದ ಪ್ರದರ್ಶನದ ಖರ್ಚಿಗೆ ಉದಾರ ರೀತಿ ಂದ ಸಹಾಯ ಮಾಡಬೇಕಾಗಿ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳ ಕೆಂದೂ ನಿರ್ಣಯಿಸುತ್ತದೆ.

8. 1946ನೇ ದಶಂಬರದಲ್ಲಿ ಜರಗಲಿರುವ ಪ್ರದರ್ಶನದಲ್ಲಿ ಒಂದು ಣ್ಣಹಂಪಲುಗಳ ಪ್ರದರ್ಶನವನ್ನು ಏರ್ಪಡಿಸುವಂತೆ ಕೃಷಿಖಾತೆಯ ಡೈರೆಕ್ಟರ ನ್ನೂ, ಕೋಡೂರು ಹಣ್ಣು ಸ್ಪೆಶ್ಯಲಿಸ್ಟರನ್ನೂ ಕೇಳಿಕೊಳ್ಳಬೇಕಾಗಿಯೂ, ಣ್ಣಹಂಪಲು ಪ್ರದರ್ಶನಕ್ಕೆ ತಗಲುವ ಖರ್ಚಿಗಾಗಿ ಉದಾರ ಸಹಾಯ

ನ ಮಂಜೂರುಮಾಡುವಂತೆ ಕೂಡಾ ಕೇಳಿಕೊಳ್ಳಬೇಕಾಗಿಯೂ ನಿರ್ಣಯಿಸುತ್ತದೆ.

9. ಪಂಚಾಯತು ಬೋರ್ಡುಗಳು ಮತ್ತು ಸಹಕಾರೀ ಸಂಸ್ಥೆಗಳು ತಮ್ಮ ಪ್ರದರ್ಶನ ಮತ್ತು ಕೆಲಸಗಳಿಗೆ ಕೊಟ್ಟ ಪಂತಿಗೆಗಳನ್ನು ಮಂಜೂರು ಮಾಡಿದ ಬಗ್ಗೆ ಲೋಕಲ್ ಬೋರ್ಡು ಮತ್ತು ಮುನಿಸಿಪಾಲಿಟಿ ಇನ್ಸ್‌ಪೆಕ್ಟರ ಗೂ ಸಹಕಾರಿ ಸಂಘಗಳ ಡಿಪ್ಯೂಟಿ ರಿಜಿಸ್ಟ್ರಾರರಿಗೂ ಕೃತಜ್ಞತೆಯನ್ನು ಸೂಚಿಸಿ ಮುಂದೆ ಪಂಚಾಯತುಗಳು ತಮ್ಮ ಉತ್ಪತ್ತಿಯ ಶೇಕಡಾ ರಂತೆಯೂ ಸಹಕಾರೀ ಸಂಸ್ಥೆಗಳು ಸಾರ್ವಜನಿಕ ಉಪಯೋಗದ ನಿಧಿಯ ಶೇಕಡಾ 50ರಷ್ಟು ಕೊಡಲು ಇಷ್ಟಪಟ್ಟಲ್ಲಿ ಅದನ್ನು ಮಂಜೂರು ಮಾಡು ವಂತೆ ಇವರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸುತ್ತದೆ.

ri Durga Parameshwari Temple, Bappanad.

1. SIDDU SHETTY
MANAGER.

MULKI,
Date 28th June 1947.

G.R. 42/28.1.47

Sri. Siddu Shetty.
Manager. Sri Durga parameshwari Temple
Bappanad Mulki.

The President,
Hindu Religious Endowment Board
Madras.

Sir, P.U.&R. U.G.C. Ref:- Memorandum No 4095/47-1. Dated 22.1.47.

With reference to your above quoted letter I am enclosing herewith a copy of the resolution passed by the Trustees of the temple, and a copy of the proceedings of a public meeting of the Bhajaks of the temple held on the "Muchuvalu festival" Day (26.1.47). A resolution to the effect that a public notice, that all the Cleanly dressed persons can enter the temple and receive prasadams, should be put up has been passed by an overwhelming majority at the meeting.

The Village reconstruction Committee ~~(Trust)~~ tried to enlighten people by holding

meetings at different centres, as Mundkur, Padubidri, Kaipunjal, Shirvadkar, Bajpe, Katil and Kinnigoli on the 18th, 19th, 22nd and 26th instants, and at the Meeting held at Katil with Sri. K. Mahabala Shetty in the chair a unanimous resolution was passed. that steps should be taken very early to allow Harijans to the temple at Katil.

I request that early orders may be passed on the above resolution to put up a board.

I beg to remain
Sir,
your most obedient servant
Sd/- Vidyashetty.
28.1.47
Manager.

Sri Durga Parameshwari Temple, Bappanad.

M. SIDDU SHETTY
MANAGER.

MULKI,

Date _____

Proceedings of the meeting of the Council of Trustees held on 26.1.47 at 6 p.m. on the Mudupalu Festival Day.

Present. Sri. H. Ramakrishna Pujari. President
Sri. H. K. Basappa.
Sri. P. Shambhu Halli
" H. Siddu Shetty. Manager.

Resolution:- 1. (1) Road memorandum No 4095/47-1 - Administration dated 22.1.47. from the Office of the H.R.E. Board. Madras re:- Temple entry - Bappanad Sri Durgaparameshwari Temple, Mangalore Taluk, South Kanara. Read resolution passed at the meeting of the worshiping public assembled at the Mudupalu festival day - by H. R. Ramath presiding.

Resolved unanimously as per resolution adopted as mentioned above, that a public notice should be put up that any

an elected body, period power can enter the temple and receive prasadam from each day.

It is further resolved that the above resolution may be intimated to the President of the H.R.E. Board and the copy of the proceeding of the meeting of the worshipping public be also sent with a request for early orders.

Sd. M.R. Raja.
President
23.1.47.

(1) H. K. Basappa

(2) T. Shambhu Ma

(True copy)

Siddhalingappa
23.1.47
Manager

Sri Durga Parameshwari Temple, Bappanad.

M. SIDDU SHETTY
MANAGER.

MULKI,

Date 28th January 1947.

ದಿ 26.1.1947 ನೇ ಶನಿವಾರ ಕೆಳಕಂಡ ಅಭ್ಯರ್ಥಿಗಳು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಪೂಜೆಮಾಡುವ ಅರ್ಚಕ ಹುದ್ದೆಯ ಸಂದರ್ಶನಕ್ಕೆ ಹಾಜರಾಗಬೇಕೆಂದು ಕೇಳಿಕೊಳ್ಳುತ್ತೇನೆ. - 600 ಕ್ಕೆ ಮೇಲ್ಪಟ್ಟ ಜನಸಂಖ್ಯೆಯುಳ್ಳದು.

1. ಶ್ರೀ ಕೆ. ಎಂ. ರಾಮಂ ಭಟ್ಟರವರ್ಸ್ ಮಾಬಿನ ಕಬೇಂಜ ಅಧ್ಯಕ್ಷರವರು ಆಕಿಸಿಕೊಳ್ಳುತ್ತಾರೆ.

2. ಮೇಲ್ಕಂಡಿ ಕೆಳಗಿನ ಅಭ್ಯರ್ಥಿಗಳಿಂದ ಅರ್ಜಿಗಳು 15.12.46 ರಂದು ಮೇಲ್ಕಂಡ ಮಹಾಸಭೆಯವರ್ಸ್ ಶ್ರೀ. ಅಭ್ಯರ್ಥಿಗಳು ದೇವಸ್ಥಾನದ ಮೇಲ್ವಿಚಾರಣೆಗೆ ಕೇಳಿಕೊಂಡ ಪ್ರಕಾರ ದಿ 5.1.47 ರಲ್ಲಿ ಸಾರ್ವಜನಿಕ ಸಭೆಯಲ್ಲಿ ಮಂಡಿಸಿ ಒಬ್ಬ ಕಾರ್ಯದರ್ಶಿಯನ್ನು ಆಯ್ಕೆಮಾಡಿ, ಪ್ರಸ್ತುತ ಅರ್ಜಿದಾರರ ಸಾರ್ವಜನಿಕ ಸಭೆಗಳ ಮುಖಾಂತರ ಮಂಜೂರು ಮಾಡಿದ್ದನ್ನು, ಸಾರ್ವಜನಿಕ ಸಭೆಗಳ ದಿ 26.1.47 ರಲ್ಲಿ ಜರುಗಿದ ಕಾರ್ಯಕ್ರಮ ಪ್ರಕಾರ ಕೆಳಕಂಡ ಸಾರ್ವಜನಿಕ ಸಭೆಯವರ ಮಂಜೂರಿಯನ್ನು ಅವರ ಅಭ್ಯರ್ಥಿಗಳ ಪರವಾಗಿ ಸಾರ್ವಜನಿಕ ಸಭೆಗಳ ಪಾಸಿಕೆಯನ್ನು ಮಾಡಿಕೊಂಡು ಕಬೇಂಜ ಈ ಕೆಳಗಿನ ಸಾರ್ವಜನಿಕ ವ್ಯಕ್ತಿಗಳು ಒಮ್ಮತದಿಂದ ಅಭ್ಯರ್ಥಿಯನ್ನು ಆಯ್ಕೆಮಾಡಿದ್ದಾರೆಂದು.

ಪಾಸಿಕೆಯಲ್ಲಿ ಶ್ರೀ. ದೇವಸ್ಥಾನದಲ್ಲಿ ಅರ್ಚಕನಾಗಿ ಕೆಲಸ ಮಾಡುವ ಅಭ್ಯರ್ಥಿಯ ಅಭಿಪ್ರಾಯ ಕೇಳಿದ ಶ್ರೀ ಸುಬ್ರಹ್ಮಣ್ಯ ಭಟ್ಟರ ಸ್ವಾಧೀನದಲ್ಲಿ ಅರ್ಚಕನಾಗಿ ಕೆಲಸ ಮಾಡಿದ ಸಾರ್ವಜನಿಕ ಸಾರ್ವಜನಿಕರು -

Education & R.H. Department (F1).

Temple entry - Permission to throw open the Sri Durgaparameswari Temple, Bappanad, Mangalore Taluk, South Kanara district, for entry by the excluded classes - Granted.

Read also: From the Pl. HR.E. Bd. No 4095/47-2-dt. 1-2-47

ORDER/MS.NO. 915 E & R.E. dated 8/2/47

"WHEREAS, in the opinion of the ~~Executive Officer/Managing~~ Trustees of the Sri Durgaparameswari Temple at Bappanad in the South Kanara district, the worshippers of the temple are generally not opposed to the removal of the disability imposed by custom or usage on certain classes of Hindus in regard to entry into and offer of worship in the Temple;

AND WHEREAS the said ~~Executive Officer/Managing~~ Trustees accordingly proposes to throw open the Temple to the said classes of Hindus, with the approval of the Provincial Government, under section 3 of the Madras Temple Entry Authorization and Indemnity Act, 1939 (Madras Act XXII of 1939);

NOW, THEREFORE, His Excellency the Governor of Madras, in pursuance of section 3 aforesaid, hereby accords his approval to the proposal of the said ~~Executive Officer/Managing~~ Trustees namely, to throw open the Temple to the said classes of Hindus."

3/24
3.2.

7.2.47

Durgaparameswari Temple,
OR, Thro the Pl. HR.E. Bd.

NOTE: May be circulated to H.M. (HR.E) and H.E.

3.2.47

SECRETARY, EDN. AND R.H. DEPT.
8 - FEB 1947
GOVERNMENT OF MADRAS

P.S. H.R. agrees
(7.2.47)